

ಮೂಲತಾನದ ನಾಗಬ್ರಹ್ಮ ಮತ್ತು ಪರಿವಾರ ದೈವಗಳ ಪಾಡ್ದನ

ಸಂಪಾದಕರು

ಡಾ. ಇಂದಿರಾ ಹೆಗ್ಗಡೆ



BVP-1223- 1|3|17
1341 – 32/38.

ಮೂಲತಾನದ ನಾಗಬ್ರಹ್ಮ
ಮತ್ತು
ಪರಿವಾರ ದೈವಗಳ ಪಾಡ್ದನ

ಸಂಪಾದಕರು

ಡಾ. ಇಂದಿರಾ ಹೆಗ್ಗಡೆ

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ - ೫೮೧ ೧೯೭
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

MULATHANADA NAGABRAHMA MATTU PARIVARA DAIVAGALA PAADDANA

Edited by
Dr. Indira Heggade
No. 6, Krishna Residence
4th Cross Road, Amarajyothi Nagar
Vijayanagar
Bangalore 560 040

Published by
Prof. S.C. Ramesh
Director
Centre for Extension and Consultancy
Karantaka Janapada University
Gotagodi - 581 197
Shiggavi Taluk, Haveri Dist., Karnataka
Phone: 0836 - 2255180

Pages: xii + 244 Price: ₹ **150/-**
www.janapadauni.in

First Impression: 2014

ISBN 978-93-83149-19-3

ಬೆಲೆ : ₹ ೧೫೦/-

ಪುಟವಿನ್ಯಾಸ
ಸವಿತ ಗ್ರಾಫಿಕ್ಸ್, ಕಮಲಾಪುರ
Cell No.: 94802 57392

ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭
ಶಿಗ್ಗಾವಿ ತಾಲೂಕು ಹಾವೇರಿ ಜಿಲ್ಲೆ

ಮುದ್ರಣ
ರಾಜಾ ಪ್ರಿಂಟರ್ಸ್, ಬೆಂಗಳೂರು

ದೇಶ ಸುತ್ತು ಕೋಶ ಓದು

ಕನ್ನಡ ನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು, ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ

ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯವಾಗಿದೆ. ಜಾನಪದವು ಭೂಮಿ ತೂಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು-ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ, ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ-ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ

ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆ ಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ಜಾನಪದದ ಸಮೃದ್ಧತೆಗೆ ಕನ್ನಡ ನಾಡು ಹೆಸರುವಾಸಿ. ನಾಡಿನ ಜನಪದರ ಬದುಕು, ಭಾಷೆ, ಆಚಾರ-ವಿಚಾರ, ಉಡುಗೆ-ತೊಡುಗೆಗಳು ತುಂಬಾ ಆಕರ್ಷಕ ಜೊತೆಗೆ ಸಂಶೋಧನಾಯೋಗ್ಯವಾದ ಸಂಗತಿಗಳಾಗಿವೆ. ಒಂದು ನಿರ್ದಿಷ್ಟ ಪ್ರದೇಶವಾಸಿಗಳ ಭಾಷೆಯು ಕೇವಲ ಮೌಖಿಕ ಸಾಹಿತ್ಯವನ್ನು ಮಾತ್ರ ಅಡಕವಾಗಿರಿಸಿಕೊಂಡಿರುವುದಿಲ್ಲ. ಬದಲಾಗಿ ಅನೇಕ ಸಾಂಸ್ಕೃತಿಕ ಸಂಗತಿಗಳನ್ನು ಗರ್ಭೀಕರಿಸಿಕೊಂಡಿರುತ್ತದೆ. ಇಂತಹ ವಿಚಾರಗಳನ್ನು ಶೋಧಿಸಲು ಅಂತರ್‌ಶಿಸ್ತೀಯ ನೆಲೆಯಲ್ಲಿ ಸಂಶೋಧನೆ ಆಗಬೇಕಿ ರುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಕರಾವಳಿ ಭಾಗದ ತುಳು ಭಾಷೆ ಮತ್ತು ಪಾಡ್ದನ ಸಾಹಿತ್ಯ ಸಂಶೋಧನೆಯ ಮುಖ್ಯ ಆಕರಗಳಾಗಿವೆ. ತುಳುವರ ನೆಲದ ಸಂಸ್ಕೃತಿಯ ವಿಶಿಷ್ಟ ಉಪಾಸನೆ ಎಂದರೆ ಭೂತಾರಾಧನೆ. ರೂಢಿಯಲ್ಲಿರುವ ಈ ಉಪಾಸನಾ ಪದ್ಧತಿಯ ಜೊತೆಗೆ ಹುಟ್ಟು ಪಡೆದುಕೊಂಡಿರುವುದು ಮೌಖಿಕ ಕಥನಕಾವ್ಯ. ಮೌಖಿಕ ಸಾಹಿತ್ಯದ ಶ್ರೀಮಂತಿಕೆಯ ಗಣಿಗಳಂತಿರುವ ಪಾಡ್ದನಗಳನ್ನು ಸಂಗ್ರಹಿಸುವುದು ಮುಖ್ಯವೇ. ಜೊತೆಗೆ ಅವುಗಳ ಬಹುಮುಖೀ ವಿಶ್ಲೇಷಣೆಯು ತುಳು ಸಮುದಾಯದ ಬದುಕಿನ ಬಹುಸ್ತರದ ಸಾಂಸ್ಕೃತಿಕ ಸಂಗತಿಗಳ ಮೇಲೆ ಬೆಳಕು ಚೆಲ್ಲಲು ಸಹಾಯಕವಾಗಬಲ್ಲದು. ಇಂತಹ ಗ್ರಹಿಕೆಯಿಂದಲೇ ಪ್ರಸ್ತುತ 'ಮೂಲತಾನ ನಾಗಬ್ರಹ್ಮ ಮತ್ತು ಪರಿವಾರ ದೈವಗಳ ಪಾಡ್ದನ' ಕೃತಿ ರೂಪು ತಾಳಿದೆ. ಅಮೂಲ್ಯವಾದ ತುಳು ಪಾಡ್ದನಗಳು ಇಲ್ಲಿ ಸಂಗ್ರಹಗೊಂಡಿದ್ದು, ತುಳು ಸಂಸ್ಕೃತಿಯನ್ನು

ಅರಿಯುವಲ್ಲಿ ಈ ಕೃತಿ ಆಕರವಾಗಬಲ್ಲದು. ಇಂತಹ ಕೃತಿಯನ್ನು ಸಿದ್ಧಪಡಿಸಿಕೊಟ್ಟಿರುವ ಡಾ. ಇಂದಿರಾ ಹೆಗ್ಗಡೆ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು.

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂಥ ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ'ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯನೂತನವಾದ ಜನಪದ ಸಂಸ್ಕೃತಿಯನ್ನು ಪುನರ್‌ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯನ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತಿದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆಯುತ್ತಿರುವ ಇವೊತ್ತಿನ ಸಂದಿಗ್ಧತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು, ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು, ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ-ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು

ಪ್ರಕಟ ಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಕರ್ನಾಟಕ ಕರಾವಳಿ ಭಾಗದಲ್ಲಿ ಮುಖ್ಯವಾಗಿ ಪ್ರಚಲಿತದಲ್ಲಿರುವ ಭಾಷೆ ತುಳು. ತುಳುಸಾಹಿತ್ಯ ಗ್ರಂಥಸ್ಥ ರೂಪದಲ್ಲಿ ಅಷ್ಟೊಂದು ವ್ಯಕ್ತವಾಗಿಲ್ಲ. ಆದರೆ ಮೌಖಿಕ ಸಾಹಿತ್ಯದಲ್ಲಿ ಅತ್ಯಂತ ಶ್ರೀಮಂತವಾಗಿದೆ. ತುಳುವರ ಸಂಸ್ಕೃತಿ ಅತ್ಯಂತ ವಿಶಿಷ್ಟವಾಗಿ ರುವುದರ ಜೊತೆಗೆ ತುಳು ಮೌಖಿಕ ಸಾಹಿತ್ಯವು ಅನನ್ಯವಾಗಿದೆ. ಭೂತಾರಾಧನೆ ತುಳು ಸಮುದಾಯದ ಬಹುಮುಖ್ಯ ಆಚರಣೆ. ಈ ಆಚರಣೆಯ ಭಾಗವಾಗಿ ಅಸ್ತಿತ್ವದಲ್ಲಿರುವ ಮೌಖಿಕ ಸಾಹಿತ್ಯ ಎಂದರೆ ಪಾಡ್ದನಗಳು. ಇವು ದೈವೀ ನೆಲೆಯಲ್ಲಿ ಹಾಡಬಹುದಾದ ಕಥನಕಾವ್ಯವಾದರೂ, ಹಾಡುವ ವ್ಯಕ್ತಿಗಳಿಂದಾಗಿ ಇವು ಭಿನ್ನ ಸ್ವರೂಪದಲ್ಲಿ ವ್ಯಕ್ತಗೊಳ್ಳುತ್ತವೆ. ಇವುಗಳು ತುಳುವರ ಬದುಕಿನ ವಿವಿಧ ಸಾಂಸ್ಕೃತಿಕ ಆಯಾಮಗಳನ್ನು ಒಳಗೊಂಡಿವೆ. ಆದ್ದರಿಂದ ತುಳು ಪಾಡ್ದನಗಳು ಅಧ್ಯಯನ ಯೋಗ್ಯವಾಗಿವೆ. ಇಲ್ಲಿ ಸಂಗ್ರಹವಾಗಿರುವ ಪಾಡ್ದನಗಳು ತುಳು ಮತ್ತು ಕನ್ನಡ ಎರಡು ಭಾಷೆಗಳಲ್ಲಿವೆ. ಇದರಿಂದಾಗಿ ದ್ವಿಭಾಷಿಕರಿಗೆ ವಿಶೇಷ ಅಧ್ಯಯನ ಕೈಗೊಳ್ಳಲು ಆಕರ ಕೃತಿಯಾಗಿದೆ. ಇಂತಹ ಅಮೂಲ್ಯವಾದ ಕೃತಿಯನ್ನು ಸಂಗ್ರಹಿಸಿಕೊಟ್ಟ ಡಾ. ಇಂದಿರಾ ಹೆಗ್ಗಡೆ ಅವರು ಅಭಿನಂದನಾರ್ಹರು.

ಈ ಗ್ರಂಥವು ಅಚ್ಚುಕಟ್ಟಾಗಿ ಪ್ರಕಟಗೊಳ್ಳಲು ಸರ್ವರೀತಿಯಲ್ಲೂ ಸಹಕಾರ ನೀಡಿದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ, ಆಡಳಿತಾತ್ಮಕ ಬೆಂಬಲ ನೀಡಿದ ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ ಅವರಿಗೆ, ನಮ್ಮೆಲ್ಲ ಕೆಲಸಗಳಿಗೆ ಬೆಂಬಲವಾಗಿ ನಿಂತಿರುವ ಹಿರಿಯ ಸಂಶೋಧನಾ ಅಧಿಕಾರಿ ಡಾ. ಕೆ. ಪ್ರೇಮಕುಮಾರ ಅವರಿಗೆ, ವಿಶ್ವವಿದ್ಯಾಲಯದ ಡೀನ್‌ರಾದ ಪ್ರೊ. ಎಂ. ಚಂದ್ರ ಪೂಜಾರಿ ಅವರಿಗೆ, ಕರಡು ತಿದ್ದಲು ನೆರವಾದ ಡಾ. ಎಸ್. ಮೋಹನ್ ಅವರಿಗೆ, ಅಂದವಾದ ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ಕೆ.ಕೆ. ಮಕಾಳಿ ಅವರಿಗೆ, ಪುಟವಿನ್ಯಾಸಗೊಳಿಸಿದ ಕಮಲಾಪುರದ ಶ್ರೀ ಜೆ. ಬಸವರಾಜ, ಕಚೇರಿ ಸಹಾಯಕ ಶ್ರೀ ಕೆ.ಎಲ್. ಲಕ್ಷ್ಮಣ ಹಾಗೂ ಗ್ರಂಥವು ಪ್ರಕಟಗೊಳ್ಳುವಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು.

ಪ್ರೊ. ಸ್ವ.ಚಿ. ರಮೇಶ
ನಿರ್ದೇಶಕರು
ವಿಸ್ತರಣೆ ಹಾಗೂ ಸಲಹಾ ಕೇಂದ್ರ

ನೆನವರಿಕೆ

ತುಳುವರ ನೆಲದ ನಂಬಿಕೆಯಂತೆ ಆದಿ ಸ್ಥಾನವೆಂದು ನಂಬಲಾದ ಮೂಲತಾನ/ಸ್ಥಾನದಲ್ಲಿ ದೈವಗಳು ಉಗಮಗೊಂಡು ಪ್ರಸರಣಗೊಂಡಿವೆ.

ನನ್ನ ಡಿ.ಲಿಟ್. ಅಧ್ಯಯನಕ್ಕೆ ಮೂಲಸ್ಥಾನ ದೈವಗಳ ಬಗ್ಗೆ ಅರಿತುಕೊಳ್ಳ ಬೇಕಾಗಿದ್ದುದು ನನ್ನ ಆದ್ಯತೆಯಾಗಿತ್ತು. ಅದಕ್ಕಾಗಿ ಪ್ರಧಾನ ದೈವವಾಗಿ ಬಿಂಬಿತವಾಗಿರುವ ನಾಗಬಿರ್ಮೆರ್ (ನಾಗಬ್ರಹ್ಮ) ಹಾಗೂ ಅದರ ಪರಿವಾರ ದೈವಗಳ ಪಾಡ್ದನಗಳನ್ನು, ಸಂಧಿಗಳನ್ನು ಹುಡುಕುವ ಪ್ರಯತ್ನ ಮಾಡಿದೆ. ನನ್ನ ಪ್ರಯತ್ನ ಫಲ ಕೊಟ್ಟಿತು. ಬೇರೆ ಬೇರೆ ಕಡೆ ಬೇರೆ ಬೇರೆ ಸಂದರ್ಭದಲ್ಲಿ ದಾಖಲಿಸಿಕೊಂಡಿದ್ದೇನೆ. ಪಾಡ್ದನಕಾರರು, ದೈವ ಪಾತ್ರಿಗಳು ಇವರೆಲ್ಲ ಬಹಳ ಆಸಕ್ತಿಯಿಂದ, ಬಹಳ ಪ್ರೀತಿಯಿಂದ ಪಾಡ್ದನಗಳನ್ನು ಹಾಡಿದ್ದಾರೆ. ಹಾಡಿದುದನ್ನು ದಾಖಲಿಸಲು ಅವಕಾಶ ಕಲ್ಪಿಸಿದ್ದಾರೆ. ನನಗೆ ಅರ್ಥ ತಿಳಿಯದ ಕಡೆ ನನ್ನ ಪ್ರಶ್ನೆಗಳಿಗೆ ಸಾವಧಾನದಿಂದ ಉತ್ತರಿಸಿದ್ದಾರೆ. ಮತ್ತೆ ಮತ್ತೆ ಅವರಿಗೆ ನೀಡಿದ ತೊಂದರೆಗಳನ್ನು ಸಹಿಸಿಕೊಂಡಿದ್ದಾರೆ. ಈ ಕೃತಿಯಲ್ಲಿ ಅವರೆಲ್ಲರ ಹೆಸರು ದಾಖಲಾಗಿದೆ. ಅವರಿಗೆ ನಾನು ಋಣಿಯಾಗಿದ್ದೇನೆ.

ಹೀಗೆ ಅನ್ವೇಷಣೆಯ ಹಾದಿಯಲ್ಲಿ ಮೂಲಸ್ಥಾನದ ಕಾಡಿನಲ್ಲಿಯ ಜಾತಿರಹಿತ ಸಮಾಜ ಪದ್ಧತಿ, ಆಚರಣೆಗಳು ಗೋಚರವಾದುವು. ಇಂತಹ ಚಿಂತನೆಗೆ ನನ್ನನ್ನು ಹಚ್ಚಿದ್ದು ಪಾಡ್ದನಕಾರರು ನೀಡಿದ ಅರಿವು. ಇದರಿಂದ ನನ್ನ ಜ್ಞಾನ ವಿಸ್ತಾರಗೊಂಡಿದೆ ಅದಕ್ಕಾಗಿ ಅವರೆಲ್ಲರಿಗೆ ಮತ್ತೊಮ್ಮೆ ನನ್ನ ವಂದನೆಗಳು.

ತುಳುವರ ಉಪಾಸನಾ ಪ್ರಕ್ರಿಯೆಗಳಲ್ಲಿ ಪ್ರಧಾನ ಕಲಾವಿದರಾಗಿರುವ ನಲ್ಕೆಯವರು ನನಗೆ ನೀಡಿರುವ ಸಹಕಾರ ದೊಡ್ಡದು. ಅವರು ಜಾತಿಸೂಚಕ ಪದವೇ ಅವರ ವೃತ್ತಿಯನ್ನು ಹೇಳುತ್ತದೆ. ಅವರ ಜಾತಿ ನಲ್ಕೆ. ಅರ್ಥಾತ್ ನಲಿಕೆ. ಅಂದರೆ ನರ್ತನ ಮಾಡುವವರು. ಇವರು ದೇವದಾಸಿಯರಂತೆ ನರ್ತನ ಮಾಡುವವರಲ್ಲ. ಮೂಲಸ್ಥಾನ ದೈವಗಳ ಉಪಾಸನೆಯ ಸಂದರ್ಭಗಳಲ್ಲಿ ಆ ದೈವಗಳನ್ನು ಮೈಮೇಲೆ ಆವಾಹಿಸಿಕೊಂಡು ತಾವೇ ದೈವವಾಗಿ ನರ್ತನ ಮಾಡುವವರು.

ಕ್ಷೇತ್ರಕಾರ್ಯದ ಮೂಲಕ ಶೋಧ ಮಾಡಿ ಕೃತಿ ರಚಿಸುವ ಜಾನಪದ ಅಥವಾ ಇತರೆ ಸಂಶೋಧನಾ ಸಂಶೋಧಕರ ಕೊರತೆ ಇದೆ ಎನ್ನುವುದು ಇತ್ತೀಚಿನ ದಿನಗಳಲ್ಲಿ ಕೇಳಿ ಬರುವ ಮಾತು. ಆದರೆ ಕೆಲವೊಬ್ಬರು ಆಸಕ್ತಿಯಿಂದ ಕಷ್ಟಪಟ್ಟು ಸಂಗ್ರಹಿಸಿ ಬರೆದ ಕೃತಿಗಳ ಪ್ರಕಟಣೆಗೂ ಪ್ರಕಾಶಕರ ಕೊರತೆ ಇದೆ. ಪ್ರಕಾಶಕರಿಗೆ ಪ್ರಕಟವಾದುದು

ಮಾರಾಟವಾಗಬೇಕು, ಹಾಕಿದ ಬಂಡವಾಳ ಮರಳಬೇಕು. ಅದು ಸಾಧುವಾದ ನಿರೀಕ್ಷೆಯೇ. ಆದರೆ ನಮ್ಮ ಸರಕಾರದ ನೆರವಿನಿಂದ ಎಲ್ಲಾ ಹಳ್ಳಿಗಳು ಕೈಗಾರಿಕಾ ಪ್ರದೇಶಗಳಾಗಿ ಪರಿವರ್ತನೆಗೊಳ್ಳುತ್ತಿವೆ. ನಮ್ಮ ನೆಲದ ಪರಂಪರೆ, ಪದ್ಧತಿ, ಸಂಸ್ಕೃತಿಗಳನ್ನು ದಾಖಲಿಸಿಕೊಳ್ಳದೇ ಹೋದರೆ ಮುಂದೆ ಅದು ಉತ್ಪನ್ನ ಮಾಡಿದರೆ ದೊರೆಯುವ ವಿಷಯವಲ್ಲ. ಹಾಗಾಗಿ ಅದರ ದಾಖಲಾತಿ ಮಾಡುವ ತುರ್ತು ಅಗತ್ಯ ಇಂದು ಬಂದಿದೆ.

ಹೀಗೆ ಕ್ಷೇತ್ರಕಾರ್ಯದ ಮೂಲಕ ಸಂಗ್ರಹವಾದ ಈ ಪಾಡ್ದನ ಸಂಗ್ರಹವನ್ನು ಹೊರತರಲು ಆಸಕ್ತಿವಹಿಸಿದ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ ನನ್ನ ಅನಂತಾನಂತ ವಂದನೆಗಳು.

ಈ ಕೃತಿಯನ್ನು ಓದಿ ಅಭಿಪ್ರಾಯ ತಿಳಿಸಿದ ಡಾ. ವಾಮನ ನಂದಾವರ ಅವರಿಗೆ, ಜಾನಪದ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ ಮತ್ತು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರು, ಮೌಲ್ಯಮಾಪನ ಕುಲಸಚಿವರು ಆದ ಪ್ರೊ. ಸ.ಚಿ. ರಮೇಶ ಹಾಗೂ ಅವರ ಸಿಬ್ಬಂದಿ ವರ್ಗದವರಿಗೆ, ಸುಂದರವಾಗಿ ಮುದ್ರಿಸಿದ ರಾಜಾ ಪ್ರಿಂಟರ್ಸ್, ಬೆಂಗಳೂರು - ಹೀಗೆ ಈ ಕೃತಿ ಪ್ರಕಟಣೆಗೆ ಸಹಕರಿಸಿದ ಎಲ್ಲಾ ಮಿತ್ರರನ್ನೂ ನೆನೆಯುತ್ತಿದ್ದೇನೆ.

ನನ್ನ ಬರವಣಿಗೆಗೆ ಬೆನ್ನೆಲುಬಾಗಿ ನಿಂತ ನನ್ನ ಪತಿ ಎಸ್. ಆರ್. ಹೆಗ್ಡೆಯವರ ನಿರಂತರ ಪ್ರೋತ್ಸಾಹ ಬಯಸುತ್ತೇನೆ.

ಡಾ. ಇಂದಿರಾ ಹೆಗ್ಗಡೆ

ಪರಿವಿಡಿ

೧

ಮೂಲತಾನದ ನಾಗಬ್ರಹ್ಮ ಮತ್ತು ಪರಿವಾರ ದೈವಗಳ ಪಾಡ್ದನ

ಕರ್ನಾಟಕದ ಕರಾವಳಿ ಭಾಗದ ತುಳುನಾಡಿನ ತುಳು ಭಾಷೆ ಗ್ರಂಥ ಸಾಹಿತ್ಯದಲ್ಲಿ ಬಡವಾದರೂ ಮೌಖಿಕ ಸಾಹಿತ್ಯದಲ್ಲಿ ಶ್ರೀಮಂತವಾಗಿದೆ. ಹೀಗಾಗಿ ತುಳು ಸಾಹಿತ್ಯ ಎಂದಾಗ ಪಾಡ್ದನ ಸಾಹಿತ್ಯವೇ ಗಮನಸೆಳೆಯುತ್ತದೆ. ಅಕ್ಷರ ಜ್ಞಾನ ಇಲ್ಲದ ತುಳು ಜನಪದರು ಸೃಜಿಸಿದ ತುಳು ಮೌಖಿಕ ಕಾವ್ಯ ಪರಂಪರೆ ಶ್ರೀಮಂತವಾದುದು. ತುಳುವರ ನೆಲದ ಸಂಸ್ಕೃತಿಯ ಉಪಾಸನೆಯು ಮೌಖಿಕ ಪಾಡ್ದನ ಕಾವ್ಯ ಮೇಲೆ ಅವಲಂಬಿಸಿದೆ.

ತುಳುನಾಡಿನ ನೆಲದ ಸಂಸ್ಕೃತಿಯ ವಿಶಿಷ್ಟ ಉಪಾಸನೆ ಭೂತಾರಾಧನೆ. ಈ ಉಪಾಸನೆಯ ಬೆನ್ನೆಲುಬು ಮೌಖಿಕ ಕಥನ ಕಾವ್ಯ. ಇವನ್ನು ರೂಢಿಯಲ್ಲಿ ಪಾಡ್ದನ ಎಂದು ಹೇಳುತ್ತಾರಾದರೂ ದೈವಾವೇಶದ ಹಾಡುಗಳನ್ನು ಸಂಧಿ, ಬೀರ ಎಂದು ಕರೆಯುವುದು ರೂಢಿ. ಸಾಮಾನ್ಯವಾಗಿ ಸಂಧಿ ಮತ್ತು ಬೀರವನ್ನು ಭೂತಾರಾಧನೆಯ ಸಂದರ್ಭದಲ್ಲಿ ಶಕ್ತಿ ದೈವಗಳು ದೈವ ಮಾಧ್ಯಮನೊಳಗೆ ಆವಾಹನೆಗೊಳ್ಳಲು ಹಾಡುವುದು ಕಡ್ಡಾಯ ವಿಧಿ.

ಒಂದೇ ದೈವದ ಪಾಡ್ದನದ ಕಟ್ಟುವಿಕೆಯಲ್ಲಿ ಅಥವಾ ಪಾಡ್ದನದ ನಿರೂಪಣೆಯಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನತೆ ಕಾಣಬಹುದು. ಆದರೆ ಒಟ್ಟು ಆಶಯದಲ್ಲಿ ಬದಲಾವಣೆ ಮಾಡುವ ಸ್ವಾತ್ರಂತ್ರ್ಯವನ್ನು ಪಾಡ್ದನಕಾರರು ತೆಗೆದುಕೊಳ್ಳುವುದಿಲ್ಲ. ರಾಮಾಯಣ–ಮಹಾಭಾರತವನ್ನು ಕವಿಗಳು ತಮ್ಮ ಸೃಜನಶೀಲತೆಗೆ ಒಗ್ಗಿಸಿಕೊಂಡಂತೆ, ಕಥೆಯಲ್ಲಿ ಬದಲಾವಣೆ ಮಾಡಿಕೊಂಡಂತೆ ತುಳು ಮೌಖಿಕ–ಉಪಾಸನಾ ಕಥನ ಗೀತಗಳನ್ನು ಒಗ್ಗಿಸಲಾಗುವುದಿಲ್ಲ. ಇಲ್ಲಿ ದೈವ ಭಯ ಇದೆ.

ವಿಶ್ವದ ಎರಡನೆಯ ಬೃಹತ್ ಕಥನ ಕಾವ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾದ ಸಿರಿ ಪಾಡ್ದನ ಕಥನ ಕಾವ್ಯ. ನಾಲ್ಕು ತಲೆಮಾರುಗಳ ಕಥೆ. ಸಿರಿ ಪಾಡ್ದನಕ್ಕೂ ಭೂತಗಳ ಪಾಡ್ದನಕ್ಕೂ ವ್ಯತ್ಯಾಸ ಇದೆ. ಸಿರಿ ಪಾಡ್ದನವನ್ನು ಸಿರಿಯ ಉಪಾಸನಾ ಆಚರಣೆಗಳಲ್ಲಿ ಇಡಿಯಾಗಿ ಹಾಡುವುದು ಇಲ್ಲ. ಸಿರಿದರ್ಶನಕ್ಕೆ ನಿಲ್ಲುವವರಿಗೆ ಸಿರಿ ಪಾಡ್ದನ ಗೊತ್ತಿರ ಬೇಕೆಂದಿಲ್ಲ.

ಸಿರಿ ಆಗಲೀ ಅವಳ ಮಕ್ಕಳಾದ ಸೊನ್ನೆ ಗಿಂಡೆಯರಾಗಲೀ ಭೂತಗಳಾಗಿಲ್ಲ. ಭೂತಾರಾಧನೆಯ ನೆಲೆಯಲ್ಲಾಗಲೀ ದೇವರೆಂಬ ನೆಲೆಯಲ್ಲಾಗಲೀ ಅವರನ್ನು ಉಪಾಸನೆ ಮಾಡುವ ಪದ್ಧತಿ ಇಲ್ಲ. ಆದರೆ ಸಿರಿಯ ಮಗ ಕುಮಾರ ಮತ್ತು ಸಿರಿಯ ಮೊಮ್ಮಕ್ಕಳಾದ ಅಬ್ಬಗ ಮತ್ತು ದಾರಗರು ಗರ್ಭಗುಡಿಗಳಲ್ಲಿ ವೈದಿಕ ಪುರೋಹಿತರಿಂದ ಪೂಜೆ ಗೊಳ್ಳುತ್ತಿದ್ದಾರೆ. ಹೀಗಾಗಿ ಸಿರಿಯ ಪಾಡ್ದನ ಸಿರಿಯ ಉಪಾಸನೆಗೆ ಪೂರಕವಾಗುವುದಿಲ್ಲ. ಸಿರಿ ಕಾವ್ಯ ಗೊತ್ತಿಲ್ಲದವರೂ ಸಿರಿ ದರ್ಶನಕ್ಕೆ ನಿಲ್ಲುತ್ತಾರೆ. ದರ್ಶನದ ಆರಂಭದಲ್ಲಿ ಕ್ಷೇತ್ರದ ಅಥವಾ ಮೂಲತಾನದ ಬಾವಿಯ ನೀರಿನಿಂದ ತೀರ್ಥ ಕುಡಿದು ಸ್ನಾನ ಮಾಡಿ, ನಾಗಬ್ರಹ್ಮನಿಗೆ ಕೈಮುಗಿದು, ಯಜಮಾನನ ಅಪ್ಪಣೆ ಪಡೆದು ಕುಟುಂಬದ ಹಿರಿಯ ಮಹಿಳೆಯಿಂದ ಹಾಲು ಪಡೆದು ಸಿರಿ ದರ್ಶನಕ್ಕೆ (ಸಿರಿ ಆವೇಶಕ್ಕೆ) ಒಂದು ಕ್ಷಣ ಒಳಗಾಗುತ್ತಾರೆ. ಯಜಮಾನನ ಸಮಜಾಯಿಸಿಯಿಂದ ವಾಸ್ತವಕ್ಕೆ ಮರಳಿ ಧರ್ಮರಸು ದೈವ ಉಲ್ಲಾಯ ಮತ್ತು ಕುಮಾರನ ಜೊತೆ ಸಿರಿಗಳು ಕಾಡಿನ ಮೂಲ ಕ್ಷೇತ್ರಕ್ಕೆ ಹೊರಡಿ ಅಲ್ಲಿ ಇಡಿ ರಾತ್ರಿ ಆವೇಶದಲ್ಲಿ ಇರುತ್ತಾರೆ.

ಸಿರಿ ಕ್ಷೇತ್ರದಲ್ಲಿ ಸಮೂಹ ಸನ್ನಿಯಂತೆ ಆಸಕ್ತ ಮಹಿಳೆಯರು ಸಿರಿ ಆವೇಶಕ್ಕೆ ಒಳಗಾಗುತ್ತಾರೆ. ಅಲ್ಲಿ ಹಿರಿಯ ಸಿರಿ ಪಾತ್ರಗಳ ಅನುಕರಣೆಯೂ ಇದೆ. ಪಾಡ್ದನಕ್ಕಿಂತ ಆಲಾಪ ಪ್ರಲಾಪಗಳೇ ಹೆಚ್ಚಾಗಿ ಇರುವ ಸಿರಿ ದರ್ಶನದಲ್ಲಿ ಸಿರಿ ಕಥನದಲ್ಲಿ ಬರುವ ಪಾತ್ರಗಳ, ಪರಸ್ಪರ ಆಕ್ಷೇಪಗಳೇ ಹೆಚ್ಚಾಗಿ ಇವೆ.

ಕೆಲವು ಸಂದರ್ಭಗಳಲ್ಲಿ ಸಿರಿ ದರ್ಶನಕ್ಕೆ ನಿಲ್ಲಬೇಕಾದ ಅನಿವಾರ್ಯತೆಯೂ ಕೆಲವರಿಗೆ ಎದುರಾಗುತ್ತದೆ. ಒಮ್ಮೆ ಸಿರಿ ದರ್ಶನಕ್ಕೆ ನಿಂತ ಕುಟುಂಬದಲ್ಲಿ ಮುಂದಿನ ತಲೆಮಾರು ಕೂಡ ಸಿರಿ ದರ್ಶನವನ್ನು ಮುಂದುವರಿಸಬೇಕೆಂಬ ನಂಬಿಕೆ ಇರುವುದರಿಂದ ಸಿರಿ ದರ್ಶನಕ್ಕೆ ನಿಲ್ಲಲು ಅವರದೇ ಮಾತೃ ಕುಟುಂಬದ ಒತ್ತಡ ಇರುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಸಿರಿ ದರ್ಶನ(ಆವೇಶ) ವೈಯುಕ್ತಿಕ ನಂಬಿಕೆ–ಲಾಭಗಳಿಗೆ ಸಂಬಂಧಿಸಿದೆ. ಯಾರೂ ಹೇಳಿ ನಿಲ್ಲಿಸುವುದಿಲ್ಲ. ಸಿರಿ ನಿಂತವರನ್ನು ನಿರಾಕರಿಸುವುದೂ ಇಲ್ಲ. ಎಲ್ಲಾ ಮಹಿಳೆಯರು ಸಿರಿ ದರ್ಶನಕ್ಕೆ ನಿಲ್ಲಬಹುದು. ಇವರಿಗೆ ತರಬೇತಿಯೂ ಇರುವುದಿಲ್ಲ.

ಭೂತ ಕಟ್ಟುವವರು ಸಿರಿ ದರ್ಶನ ನಿಲ್ಲುವುದಿಲ್ಲ.

ಸಿರಿ ದರ್ಶನಕ್ಕೆ ಒಬ್ಬಾಕೆ ನಿಲ್ಲಲಿ ನಿಲ್ಲದಿರಲಿ ಇದರಿಂದ ಸಮಾಜಕ್ಕೆ ಸಾಧಕ ಬಾಧಕಗಳಿಲ್ಲ. ವ್ಯಕ್ತಿಗತವಾಗಿ ಇರಬಹುದು. ಊರಿಗೂ ಒಳಿತು ಕೆಡುಕುಗಳಿಲ್ಲ. ಆದರೆ ಭೂತಾರಾಧನೆಯಲ್ಲಿ ಹಾಗಲ್ಲ. ಭೂತಾರಾಧನೆ ವ್ಯವಸ್ಥೆಯನ್ನು ಪೋಷಿಸುವ ಉಪಾಸನೆ. ಅದು ಕೃಷಿ ಸಂಸ್ಕೃತಿಯ ಪೋಷಣೆ ಮತ್ತು ಪಾಳೆಯಗಾರಿಕೆಯ ಆಡಳಿತಕ್ಕೆ ಬೆಂಬಲ ನೀಡುವ ಉಪಾಸನೆ. ಹೀಗಾಗಿ ಭೂತಗಳ ಪಾತ್ರಗಳಗೆ ಬೇಡಿಕೆ ಇದೆ.

ಸೀಮೆಯ, ಗ್ರಾಮದ ಮತ್ತು ಕೌಟುಂಬಿಕ ಒಗ್ಗಟ್ಟನ್ನು ಕಾಪಾಡುವ ಉಪಾಸನೆ. ಆಡಳಿತದಲ್ಲಿ ಶ್ರೇಣೀಕೃತ ಹಂತಗಳಿರುವಂತೆ ಭೂತಗಳಲ್ಲೂ ಇದೆ. ನಾಗ ಬ್ರಹ್ಮ

ಪರಿವಾರ ಎನ್ನುವುದು ಈ ಅರ್ಥದಿಂದ. ನಾಗಬ್ರಹ್ಮ ಚಕ್ರವರ್ತಿ. ಇತರೆ ದೈವಗಳು ಸಾಮಂತ ಮತ್ತು ಬಂಟ ಪರಿವಾರಗಳು.

ಭೂತಾರಾಧನೆಯ ದೈವ ಮಾಧ್ಯಮನು ಕೆಲವು ನಿರ್ದಿಷ್ಟ ಪಂಗಡಕ್ಕೆ ಸೇರಿದವನಾಗುತ್ತಾನೆ. ಯಾರು ಬೇಕಾದರೂ ದೈವ ಮಾಧ್ಯಮರಾಗುವಂತಿಲ್ಲ. ಅವರಿಗೆ ತರಬೇತಿಯೂ ಇದೆ. ಧರ್ಮಸ್ಥಳದಲ್ಲಿ ಕೋಲ ಕಟ್ಟುವ ಅಣ್ಣುಪರವ ಕಾಡಿನ ನಡುವೆ ಹರಿಯುವ ನೇತ್ರಾವತಿಯ ಜಲಪಾತಗಳ ಬಳಿ ಹೋಗಿ ತಮ್ಮ ಕುಟುಂಬದ ಕಿರಿಯರಿಗೆ ತರಬೇತಿ ನೀಡುತ್ತಿದ್ದ ಬಗ್ಗೆ ಹೇಳಿದ್ದ. ಹಿರಿಯ ದೈವಮಾಧ್ಯಮರು ವಿಶೇಷವಾಗಿ ನರ್ತನ ಸೇವಕರು ತಮ್ಮ ಸೋದರಳಿಯಂದಿರಿಗೆ ಹಾಗೂ ಮಕ್ಕಳಿಗೆ ಇದೇ ರೀತಿಯ ತರಬೇತಿ ನೀಡುತ್ತಾರೆ. ತರಬೇತಿ ಪಡೆದ ಬಳಿಕವೂ ಪರಂಪರೆಯ ಮೌಲ್ಯಗಳನ್ನು ಅಸಡ್ಡೆ ಮಾಡುವವರು ಇಲ್ಲವೆಂದಿಲ್ಲ. ಅಂತಹ ಅಸಡ್ಡೆ ನಮ್ಮಂತಹ ಮಾಹಿತಿ ಸಂಗ್ರಹಕ್ಕೆ ಹೋದವರ ಮುಂದೆ ತೋರಬಹುದು. ಬಣ್ಣಗಾರಿಕೆಯಲ್ಲಿ ತೋರಬಹುದು. ಆದರೆ ಉಪಾಸನೆಯ ಸಂದರ್ಭದಲ್ಲಿ ಹೀಗೆ ಆಗದು. ಅಲ್ಲಿ ದೈವ ಭಯ ಇದೆ. ಹೀಗಾಗಿ ದೈವ ಮಾಧ್ಯಮರು ಖಚಿತವಾಗಿ ತಮ್ಮನ್ನು ದೈವ ಕೃಪೆಗೆ ಒಗ್ಗಿಸಿಕೊಳ್ಳುತ್ತಾರೆ, ಒಡ್ಡಿಸಿಕೊಳ್ಳುತ್ತಾರೆ. ಉಪಾಸನೆಯಲ್ಲಿ ದೈವ ಮಾಧ್ಯಮನಾಗುವುದು ಎಂದರೆ ತನ್ನನ್ನು ತನುಮನದಿಂದ ದೈವಕ್ಕೆ ಅರ್ಪಿಸಿಕೊಂಡು ತನ್ನೊಳಗೆ ಐಕ್ಯಗೊಂಡಿದೆ ಎಂದು ನಂಬಲಾದ ದೈವದ ಮೇಲೆ ಎಲ್ಲಾ ಭಾರವನ್ನು ಹಾಕಿ ಜನರ ಕಷ್ಟಗಳಿಗೆ ಪ್ರತಿಸ್ಪಂಧಿಸುವುದು.

ಅನಂತಾಡಿಯಂತಹ ಉಲ್ಲಾಲ್ತಿ ದೈವದ ಕೋಲವನ್ನು 'ಮೆಚ್ಚಿ' ಎನ್ನುತ್ತಾರೆ. ಬಂಟ್ವಾಳ ಭಾಗದಲ್ಲಿ ಉಲ್ಲಾಲ್ತಿ ಇನ್ನೂ ಜನಪದರ ದೈವವಾಗಿ, ಕುಟುಂಬದ ದೈವವಾಗಿ ಭೂತಾರಾಧನೆಯ ರೀತಿ ಕೋಲದ ನರ್ತನ ಸೇವೆಯನ್ನು ಪಡೆಯುತ್ತವೆ. ಇಲ್ಲಿ ಹೂಗಳಿಂದಲಂಕೃತ ಅಣಿಹೊತ್ತ ಉಲ್ಲಾಲ್ತಿ ಮಾಧ್ಯಮನು ರಾಜ ಗಾಂಭೀರ್ಯದಿಂದ ಸವಾರಿಗೆ ಹೋಗುವಾಗ ಜನಸಾಗರದಲ್ಲಿ ಉಲ್ಲಾಲ್ತಿ ಮುಡಿ(ಅಣಿ) ತೇಲಿ ಹೋಗುವಂತೆ ಭಾಸವಾಗುತ್ತದೆ. ಬೆರಗುಗೊಳಿಸುತ್ತದೆ ಆ ದೃಶ್ಯ! ಕೋಲ ಮುಗಿದ ಬಳಿಕ ಉಲ್ಲಾಲ್ತಿ ಮಾಧ್ಯಮನಲ್ಲಿ ಕೇಳಿದ್ದೆ: "ಜನ ಸಾಗರದ ಮಧ್ಯೆ ಮುಡಿ ಹೊತ್ತ ನೀನು ತೇಲುತ್ತಾ ಹೋಗುತ್ತಿರುವಂತೆ ಭಾಸವಾಗುತ್ತಿತ್ತು. ಈ ಸಂದರ್ಭದಲ್ಲಿ ನಿನ್ನ ಮನಸ್ಥಿತಿ ಹೇಗಿತ್ತು?"

"ನನಗೆ ಯಾವುದೂ ಕಾಣುತ್ತಿರಲಿಲ್ಲ. ಇಷ್ಟು ಜನ ನನ್ನನು ನಂಬಿದ್ದಾರೆ. ಅವರನ್ನು ಹೇಗೆ ಸಮಾಧಾನಿಸಲಿ? ಎಂಬ ಯೋಚನೆ ಮಾತ್ರ ನನ್ನಲ್ಲಿ ಇತ್ತು". ಇದು ದೈವ ಮಾಧ್ಯಮನ ಆಗಿನ ಸ್ಥಿತಿ.

ಭೂತ ನರ್ತನದಲ್ಲಿ ನರ್ತನಕ್ಕೆ ಸಿದ್ಧನಾಗಿ ಗುತ್ತು ಬೀಡಿನ ಯಜಮಾನನಿಂದ ಎಣ್ಣೆ ಬೂಲ್ಯ ಪಡೆದ ಬಳಿಕ ನರ್ತನಕಾರ ಬಣ್ಣಗಾರಿಕೆಗೆ ತೊಡಗುತ್ತಾನೆ. ಹಸಿ ಮಡಲ ಮೇಲೆ ಪರಿವಾರ ಸಮೇತ ಕುಳಿತು ನರ್ತನ ಮಾಧ್ಯಮನಾಗಲು ಬಣ್ಣಗಾರಿಕೆ

ಮಾಡುವಾಗ ಹಿನ್ನೆಲೆಯಾಗಿ ಹೊರಡುವ(ಮಹಿಳೆಯ) ತೆಂಬೆರೆ ನಾದದೊಂದಿಗೆ ಮೆತ್ತಗಿನ ಸೌಮ್ಯ ಸ್ವರದಲ್ಲಿ ನಿಧಾನಗತಿಯ ಪಾಡ್ದನದ ಧ್ವನಿ ಮೇಲ್ಯೆಸುವಾಗ ಆ ಕ್ಷೇತ್ರದಲ್ಲಿ ಅಲೌಕಿಕ ಪರಿಸರ ನಿರ್ಮಾಣ ಆಗುತ್ತದೆ. ಮಾಧ್ಯಮನು ಬಣ್ಣಗಾರಿಕೆ ಮುಗಿದು ಕ್ಷೇತ್ರಕ್ಕೆ ಬರುತ್ತಾನೆ. ಹಿನ್ನೆಲೆಯಲ್ಲಿ ತೆಂಬೆರೆ ಹಾಗೂ ದೈವ ಬೀರ/ಪಾಡ್ದನದ ಧ್ವನಿ ಹೊರಡುತ್ತದೆ. ಇತ್ತ ನರ್ತನ ಸೇವೆ ನೀಡುವ ಕುಟುಂಬದ ಯಜಮಾನ ಮಾಧ್ಯಮನಲ್ಲಿ ಆವೇಶ ಆಗಿ ನರ್ತನ ಸೇವೆಯನ್ನು ಸ್ವೀಕರಿಸಿ ಕುಟುಂಬ ಸೌಖ್ಯವನ್ನು ಕಾಪಾಡಬೇಕು ಎಂದು ಪ್ರಾರ್ಥಿಸಿ ಕುಟುಂಬ ಸದಸ್ಯರೊಂದಿಗೆ ಮಾಧ್ಯಮನ ಮೇಲೆ ಪುಷ್ಪದಳ ಪ್ರೋಕ್ಷಣೆ ಮಾಡುತ್ತಾನೆ. ಕೂಡಲೇ ದೈವ ಮಾಧ್ಯಮನಲ್ಲಿ ಶಕ್ತಿ ಅರ್ಥಾತ್ ಭೂತಾವೇಶ ಆಗುತ್ತದೆ.

ಭೂತಾರಾಧನೆಯಲ್ಲಿ ಅಲೌಕಿಕತೆಯೂ ಇದೆ, ಮನರಂಜನೆಯೂ ಇದೆ, ಕಲಾ ಪ್ರೌಢಿಮೆಯೂ ಇದೆ. ನ್ಯಾಯದಾನ ಇದೆ. ನೊಂದ ಮನಸ್ಸಿಗೆ ದೈವ ಮಾಧ್ಯಮ ಅಭಯದಾನ ನೀಡುತ್ತಾನೆ. ಸಾಂತ್ವನ–ಇವಲ್ಲದೆ ದುಷ್ಟರನ್ನು ಶಿಕ್ಷಿಸುವ ಕಠೋರ ನಿಯಮವೂ ಇದೆ. ಕೆಲವು ಸಂದರ್ಭಗಳಲ್ಲಿ ಈ ವ್ಯವಸ್ಥೆಯ ದುರುಪಯೋಗ ಆಗುವುದೂ ಇದೆ. ಈಗಿನ ಪ್ರಜಾಪ್ರಭುತ್ವದಲ್ಲಿ ಇರುವಂತೆ ಅದು ವ್ಯವಸ್ಥೆಯ ದೋಷವಲ್ಲ. ಆಡಳಿತಗಾರರ ಕ್ರಿಯಾಲೋಪ.

ಆಧುನಿಕ ದಿನಗಳಲ್ಲಿ ಭೂತಾರಾಧನೆ ಎಂದು ಪ್ರಸಿದ್ಧಿ ಪಡೆದಿರುವ ತುಳುನಾಡಿನ ವಿಶಿಷ್ಟ ಉಪಾಸನೆ ವಾಸ್ತವವಾಗಿ ಶಕ್ತಿಯ ಉಪಾಸನೆ. ತುಳುನಾಡಿನ ಜನಪದರ ಭಾಷೆಯಲ್ಲಿ ಇವು 'ಸತ್ಯೊಲು'. ಈ ಶಕ್ತಿದೈವಗಳ ಉಪಾಸನೆ ದ್ರಾವಿಡ ಪರಂಪರೆಯ ಉಪಾಸನೆ ಆಗಿದೆ. ನಾಗ ಶಕ್ತಿಗಳೇ ಶಕ್ತಿಗಳು ಸತ್ಯೊಲು ಎನ್ನುವುದನ್ನು ನಾನು ನನ್ನ ಡಿ.ಲಿಟ್ ನಿಬಂಧ ಸಿದ್ಧಪಡಿಸಲು ಮಾಡಿದ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಪಾಡ್ದನಗಳು ಸ್ಪಷ್ಟಪಡಿಸುತ್ತವೆ. ನಾಗನ ಉಪಾಸನೆಯು ಭೂತಾರಾಧನೆ ಎಂದು ಪ್ರಸಿದ್ಧಿ ಪಡೆಯಿತು. ಭೂತಗಳಿಗೆ ಕ್ರೂರತ್ವವನ್ನು(ದುಷ್ಟರಿಗೆ ಶಿಕ್ಷೆ) ಮತ್ತು ಮಾತೃತ್ವವನ್ನು(ಶಿಷ್ಟ ರಕ್ಷಣೆ) ಒಟ್ಟಿಗೇ ಆರೋಪಿಸಲಾಯಿತು.

ತುಳುನಾಡಿನಲ್ಲಿ ಎಲ್ಲಾ ಭೂತಶಕ್ತಿಗಳ ಅರಸುದೈವ ೧೦೦೧ ಹೆಡೆಗಳ ನಾಗಬಿರ್ಮೆರ್, 'ಉಲ್ಲಾಯ'. ಈತ ದ್ವಿಲಿಂಗಿ ದೈವ. ಸ್ತ್ರೀ ಮತ್ತು ಪುರುಷ ಶಕ್ತಿ ಸಮೀಕರಣಗೊಂಡ ದೈವ. ಆತ ಪುರುಷನಾಗಿಯೂ ಉಪಾಸನೆ ಪಡೆಯುತ್ತಾನೆ. ಸ್ತ್ರೀ/ಕನ್ನಿಕೆಯಾಗಿಯೂ ಉಪಾಸನೆ ಪಡೆಯುತ್ತಾನೆ. ಆದರೆ ಇಲ್ಲಿ ಕಾಣಬರುವ ದ್ವಿಲಿಂಗಿ ಪತಿಪತ್ನಿ ಸಂಬಂಧವನ್ನು ಪೋಷಿಸುವುದಿಲ್ಲ. ಬದಲಾಗಿ ನಿಷೇಧಿಸುತ್ತದೆ. ಆದರೆ ಸೋದರ ಸೋದರಿ ಸಂಬಂಧವನ್ನು ಪೋಷಿಸುತ್ತದೆ.

ನಾಗ ಬಿರ್ಮೆರ್ ಭೂತಗಳಿಗೆ ಪ್ರಧಾನ. ಅರಸು ಶಕ್ತಿಯಾಗಿ ಆತ ಚಕ್ರವರ್ತಿಯಂತೆ ಹಾಗೂ ಅವನ ಪರಿವಾರ ದೈವಗಳು ಸಾಮಂತರಂತೆ ಮೆರವಣಿಗೆ ಹೋಗುವುದನ್ನು

ಉಪಾಸನಾ ಆಚರಣೆಗಳ ಸಂದರ್ಭದಲ್ಲಿ ಕಾಣಬಹುದು(ವಿವರಗಳಿಗೆ ನೋಡಿ ಇಂದಿರಾ ಹೆಗ್ಗಡೆ ೨೦೧೨).

ನಾಗ (ಶಾಸ್ತಾವು)ನನ್ನು 'ಭೂತ' ಎಂದು ಕರೆಯುವುದಕ್ಕೆ ಶಿಲಪ್ಪದಿಕಾರಂ ಎಂಬ ತಮಿಳು ಕಾವ್ಯದಲ್ಲಿಯೇ ಆಧಾರ ಸಿಗುತ್ತದೆ. ಮಾತ್ರವಲ್ಲ ಇಲ್ಲಿ ತುಳುನಾಡಿನಲ್ಲಿ ಈಗಲೂ ಇರುವಂತೆ ಕೋಲವನ್ನು ಅರ್ಪಿಸುವ ವಿವರವೂ ಅಲ್ಲಿ ಇದೆ(ಅಲ್ಲಿ ಪಾತ್ರಿಯಾಗಿ ಪೂಜಾರಿಣಿಯಾಗಿ ಸ್ತ್ರೀಯೇ ಇರುತ್ತಾಳೆ). ಇಂತಹ ಭೂತಗಳ ಉಪಾಸನೆಯ 'ಗಡಿ' ಹಿಡಿದ(ಈತ ದೈವದ ಪ್ರಾತಿನಿಧಿಕ ರೂಪ ಎಂದು ಭಾವಿಸಲಾಗುತ್ತದೆ.) ಅಥವಾ ಉಪಾಸನೆ ಮಾಡುವ ಯಾವುದೇ ವ್ಯಕ್ತಿ ರಜಸ್ವಲೆಯಾದ ಸ್ತ್ರೀಯೊಡನೆ ದೃಷ್ಟಿ ತಾಗಿಸಬಾರದು, ಮಾತನಾಡಬಾರದು, ಆಕೆಯ ನೆರಳು ಬೀಳಬಾರದು. ಆಕೆ ಇದ್ದ ಮನೆಯೊಳಗೆ ವಾಸ ಮಾಡಬಾರದು, ಆಕೆ ಮುಟ್ಟಿದ ವಸ್ತುಗಳನ್ನು ಮುಟ್ಟಬಾರದು– ಎಂಬಿವೇ ಅನೇಕ ನಿಷೇಧಗಳಿವೆ. ಇವಲ್ಲದೆ ನಾಗ, ಸರ್ಪನಿಗೂ ಮುಟ್ಟಾದ ಮಹಿಳೆಯ ನೆರಳು ಬೀಳಬಾರದು. ಅವಳ ರಜೋದ್ರವ್ಯದ ಬಟ್ಟೆಯ ಮೇಲೆ ಅದು ಹರಿದು ಹೋಗಬಾರದು, ಅವಳು ಸ್ನಾನ ಮಾಡಿದ ನೀರಿನ ಮೇಲೆ ಹರಿದುಹೋಗಬಾರದು ಇವೇ ನಂಬಿಕೆಗಳಿವೆ.

ತುಳುನಾಡಿನ ದೈವಗಳಿಗೆ ಅಸಮಾಧಾನವಾದರೆ, ಮುನಿಸಿಕೊಂಡರೆ ಅಥವಾ ದೈವದ ಉಯ್ಯಾಲೆ, ದೈವಕ್ಕೆ ನೀರು ಸೇದುವ ಬಾವಿಗೆ ಅಥವಾ ಶಕ್ತಿ ದೈವಗಳಿಗೆ ಸಂಬಂಧಿಸಿದಂತೆ ಮೈಲಿಗೆಯಾದರೂ ನಾಗರಹಾವು ಆ ಮನೆಯಂಗಳದಲ್ಲಿ ಬಂದು ಹೆಡೆಯೆತ್ತಿ ನಿಲ್ಲುತ್ತದೆ ಅಥವಾ ಮನೆಯ ಸುತ್ತ ಸುತ್ತುತ್ತದೆ ಎಂಬ ನಂಬಿಕೆ ಇದೆ. ಈಗಲೂ ಮನೆಯ ಬಾಗಿಲ ಬಳಿ ಮರಿ(ನಾಗರಹಾವು) ಕಂಡರೆ ಅದು ದೈವಸಂದೇಶ ಎಂದು ಭಾವಿಸುತ್ತಾರೆ.

ಮಾನವನ ಇಹದ ಬದುಕಿಗೆ ಸಂಬಂಧಿಸಿದ ಅನೇಕ ಜೀವನಾವರ್ತನ ಆಚರಣೆಗಳು ರೂಢಿಯಲ್ಲಿವೆ. ಇಹದ ಬದುಕು ಸುಗಮವಾಗಿ ಸುಸೂತ್ರವಾಗಿ ಧರ್ಮಸಮ್ಮತವಾಗಿ ನಡೆಯಬೇಕೆನ್ನುವ ಆಶಯ ಭೂತಾರಾಧನೆಯಲ್ಲಿದೆ. ಪರದ ಬಗ್ಗೆಯಾಗಲೀ, ಸ್ವರ್ಗ ನರಕಗಳ ಬಗ್ಗೆ ಆಗಲೀ ತುಳು ಭೂತಾರಾಧನೆಯಲ್ಲಿ ಪ್ರಸ್ತಾಪ ಆಗುವುದಿಲ್ಲ.

ಮಾನವನು ತನ್ನ ಬದುಕಿನಲ್ಲಿ ಮಾಡುವ ಒಳ್ಳೆಯ ಮತ್ತು ಕೆಟ್ಟ ಕೆಲಸಗಳಿಗೆ ಪ್ರತಿಫಲವನ್ನು ತಾನು ಸಾಯುವ ಮೊದಲು ಪಡೆಯುತ್ತಾನೆ ಎಂಬುದು ಇಲ್ಲಿಯ ನಂಬುಗೆ. ದುರ್ಜನರನ್ನು ಶಿಕ್ಷಿಸುವ ಹಾಗೂ ಸಜ್ಜನರನ್ನು ರಕ್ಷಿಸುವ ಕೆಲಸವನ್ನು ಅವರವರ ಬದುಕಿನಲ್ಲಿಯೇ ತುಳುನಾಡಿನ ಭೂತ/ಶಕ್ತಿಗಳು ಮಾಡಿ ತೋರಿಸುತ್ತವೆ. ಆದ್ದರಿಂದಲೇ ತುಳುನಾಡಿನಲ್ಲಿ ಒಂಟಿ ಮನೆಗಳು ಇದ್ದಾಗಲೂ ಇಲ್ಲಿಯ ಮನೆಗಳಿಗೆ ಬಾಗಿಲುಗಳು ಇರಲಿಲ್ಲ. ಈಗಲೂ ಇಂತಹ ಒಂದು ಸುರಕ್ಷಾ ಭಾವ ಇಲ್ಲಿ ಬರಲು ಕಾರಣ ಭೂತಾರಾಧನೆ. ಭೂತಾರಾಧನೆ ಆದಿಮಾನವನ ಕಾಲದಿಂದ ಬಂದವುಗಳು

ಎನ್ನುವುದಕ್ಕೆ ಇಲ್ಲಿಯ ಕಂಬುಲ ದೃಷ್ಟಾಂತ ಒದಗಿಸುತ್ತದೆ. ಮಾನವಶಾಸ್ತ್ರಜ್ಞರು ಹೇಳುವ ಆದಿಕಾಲದ ಮಾನವನ ಸಾಮೂಹಿಕ ಕೃಷಿ ಜೀವನದ, 'ಸಾಮೂಹಿಕ ಸೊತ್ತೊಡೆತನ'ದ ಕುರುಹುಗಳನ್ನು ಇಲ್ಲಿಯ ಕಂಬುಲ ಆಚರಣೆಯಲ್ಲಿ ಕಾಣಬಹುದು.

ಭೂತಗಳ ಉಪಾಸನೆಯಲ್ಲಿ ಇರುವುದು ಇಹದ ಲೋಕದೃಷ್ಟಿ, 'ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು' ಎನ್ನುವ ಧರ್ಮದೃಷ್ಟಿ! ದುಷ್ಟರನ್ನು ಶಿಕ್ಷಿಸುವ ದೈವ ದೃಷ್ಟಿ! "ಪೊಣ್ಣ ನೆರಿ ಆನ ತರೆ"(ಹೆಣ್ಣಿನ ನೆರಿಗೆ ಗಂಡಿನ ತಲೆ) ಕಾಯುವ ದೈವ ದೃಷ್ಟಿ. ಅಂದರೆ ಯುದ್ಧಕಾಲದಲ್ಲಿ ಹೆಣ್ಣಿನ ಮಾನಹರಣ, ಗಂಡಿನ ಜೀವ ಹರಣ ಆಗುತ್ತಿತ್ತು. ಇವರನ್ನು ರಕ್ಷಿಸುವುದು ದೈವಗಳ ಕೆಲಸ. ಇದರ ದೃಷ್ಟಾಂತವಾಗಿ ಯುದ್ಧಾಯುಧಗಳು ಇದ್ದುದು ಈಗಲೂ ಇರುವುದು ದೈವಗಳ ಉಯ್ಯಾಲೆಯಲ್ಲಿ. ಈ ಎಲ್ಲಾ ಲೋಕದೃಷ್ಟಿ ಭೂತಾರಾಧನೆಯು ಪಾಳೆಯಗಾರಿಕೆಯ ಆರಂಭಕಾಲದಿಂದ ಇತ್ತು ಇಂದಿಗೂ ದೈವ ನುಡಿಯುವ "ಪೊಣ್ಣ ನೆರಿ ಆನ ತರೆ"(ಹೆಣ್ಣಿನ ನೆರಿಗೆ ಗಂಡಿನ ತಲೆ) ಎನ್ನುವ ಪದಗಳು ತುಳುನಾಡಿನ ಕೆಲವು ಶಾಸನಗಳಲ್ಲೂ ಉಲ್ಲೇಖವಾಗಿವೆ. ಭೂತಾರಾಧನೆಗೆ ಮತ ಧರ್ಮದ ಕಟ್ಟುಪಾಡುಗಳಿಲ್ಲ. ಮಾನವ ಬದುಕಲು ಉತ್ತಮ ಪರಿಸರ ನಿರ್ಮಿಸುವುದೇ ಭೂತಗಳ ಧರ್ಮ!

ಶಕ್ತಿದೈವಗಳನ್ನು ಭೂತಗಳೆಂದು ಅವುಗಳಿಗೆ ಭಯಾನಕತೆಯನ್ನು ಆರೋಪಿಸಲಾಗಿದೆ. ಅದಾಗ್ಯೂ ನಾಗಬ್ರಹ್ಮ/ಬಿರ್ಮೆರ್ ಭೂತಗಳ ಒಡೆಯ. 'ನಾಗನಾಂ ಪ್ರಧಾನಂ ಭೂತಂ" ಎಂದು ಕನ್ನಡ ನಿಘಂಟುನಲ್ಲಿ ಲಿಖಿಸಲಾಗಿದೆ. ತುಳುನಾಡಿನ ಎಲ್ಲಾ ದೈವಗಳು ನಾಗಬಿರ್ಮೆರ್ ಪರಿವಾರ ದೈವಗಳು. (ನೋಡಿ: ಇಂದಿರಾ ಹೆಗ್ಗಡೆ, ಪು. ೫೯, ೨೦೧೨, ನವಕರ್ನಾಟಕ ಪ್ರಕಾಶನ) ವಾಸ್ತವವಾಗಿ ಇಂತಹ ಕ್ಷೇತ್ರಗಳು ಇರುವುದು ದಟ್ಟ ಕಾಡಿನಲ್ಲಿ. ನಾಗ ಕ್ಷೇತ್ರವನ್ನು ನಾಗ ಬನ ಅಥವಾ ದೇವರ ಕಾಡು ಎಂದು ಕರೆಯುತ್ತಾರೆ. ಪಾಡ್ದನಗಳ ವರ್ಣನೆಯಲ್ಲಿ ಬ್ರಹ್ಮಸ್ಥಾನದ ಕಾಡು 'ಭಯಂಕರ' ಎನ್ನುವ ವರ್ಣನೆ ಬರುತ್ತದೆ. ಪಾಡ್ದನಗಳ ಪ್ರಕಾರ ಎಷ್ಟು ಭಯಂಕರ ಅಂದರೆ ಆ ಕಾಡಿನೊಳಗೆ ಹೋದ ಗಬ್ಬದ ಹಸುಗಳ ಗಬ್ಬ ಜಾರುತ್ತದೆ, ಬಸಿರು ಹೆಣ್ಣಿನ ಬಸಿರು ಜಾರುತ್ತದೆ..

ನಾಗ ಕ್ಷೇತ್ರ ಇರುವ ಕಾಡು ಕಡಿಯಲು ನಿಷೇಧ ಇದೆ. ನಾಗ ಕ್ಷೇತ್ರಕ್ಕೆ ಕತ್ತಿ ಸೋಕಬಾರದು. ಕತ್ತಿಯಲ್ಲಿ ಕಡಿಯುವುದಿದ್ದರೆ ಆಷಾಢದ ಅಮವಾಸ್ಯೆಗೆ ಮಾತ್ರ ರಿಯಾಯಿತಿ ಇದೆ. ಹೀಗೆ ಮೊದಲೇ ಕಾಡು ಆಗಿರುವ ನಾಗ ಕ್ಷೇತ್ರಗಳು ಮಳೆಗಾಲದಲ್ಲಿ ಸೊಕ್ಕಿ ಬೆಳೆವ ಮರ ಗಿಡ ಬಳ್ಳಿಗಳ ನಾಗ ಬನದೊಳಗೆ ಜನರಿಗೆ ಪ್ರವೇಶಿಸಲು ಎಂಟೆದೆ ಬೇಕಾಗುತ್ತಿತ್ತು.

ನಾಗರ ಪಂಚಮಿ ಬರುವುದು ಹೆಚ್ಚಾಗಿ ಆಟಿ ತಿಂಗಳಲ್ಲಿ. ನನ್ನ ಬಾಲ್ಯದಲ್ಲಿ ನಾಗರ ಪಂಚಮಿಗೆ ನಾಗನಿಗೆ ತನು ಎರೆಯುವ ಪದ್ಧತಿ ನನ್ನ ಗಮನಕ್ಕೆ ಬಂದಿರಲಿಲ್ಲ. ನಾಗನಿಗೆ ಸಂಬಂಧಿಸಿದ ಎಲ್ಲಾ ಆಚರಣೆಗಳು ಬೇಸಿಗೆಯ ಕಾಲದಲ್ಲಿ, (ಹೆಚ್ಚಾಗಿ

ಬೇಸಗೆಯ ಹುಣ್ಣಿಮೆಗಳಲ್ಲಿ) ನಡೆಯುತ್ತದೆ. ನಾಗನಿಗೆ ತನು ಎರೆಯುವುದು ಬೆಸಗೆಯಲ್ಲಿಯೇ. ಆದರೆ ವೈದಿಕ ಪ್ರಭಾವಕ್ಕೆ ಒಳಗಾದ ಜನಪದರು ಆಟಿಯ ಮಳೆಗಾಳದಲ್ಲಿ ನಾಗನಿಗೆ ತನು ಎರೆಯುತ್ತಾರೆ. ಇದು ಸಾಧ್ಯವಾದುದು ಜೀರ್ಣೋದ್ಧಾರದ ಹೆಸರಿನಲ್ಲಿ ಕಾಡು ಕಡಿದು ಕಾಂಕ್ರೀಟ್ ನೆಲ ಮಾಡಿದ ಮೇಲೆ. ಹಿಂದೆ ಆಟಿ ತಿಂಗಳಲ್ಲಿ ಬನದ ಕಾಡು ಬೆಳೆದು ಅದರೊಳಗೆ ಪ್ರವೇಶ ಪಡೆಯಲು ಅರ್ಚಕನಿಗೂ ಎಂಟೆದೆ ಬೇಕಾಗುತ್ತಿತ್ತು.

ಮಳೆಗಾಲದಲ್ಲಿ ನಾಗನಿಗೆ ತನು ಎರೆಯುವುದು ತುಳು ನೆಲದ, ಜನಪದ ಸಂಸ್ಕೃತಿಗೆ ವಿರುದ್ಧವಾದುದು. ಆದರೂ ಬೇಸಗೆಯ ದಿನಗಳ ತನು ಎರೆಯುವ ಪದ್ಧತಿ ಈಗಲೂ ನಿಂತಿಲ್ಲ. ಆದಿಮ ಪದ್ಧತಿಯ ಪರಿಶಿಷ್ಟ ಜನರೇ ಅರ್ಚಕರಾಗಿರುವ ನಾಗಾರಾಧನೆ ತುಳುನಾಡಿನಲ್ಲಿ ಮುಂದುವರಿದಿದೆ. ಇವರೆಲ್ಲ ಪೂರ್ವ ಪದ್ಧತಿಯಲ್ಲಿ ಬೇಸಗೆಯ ದಿನಗಳಲ್ಲಿ ತನು ಎರೆಯುತ್ತಾರೆ. ತುಳುನಾಡಿನ ಬೇಸಗೆಯ ಬಿಸಿಲ ಧಗೆಗೆ ಸ್ವಲ್ಪ ಮಟ್ಟಿನ ನೀರಿನ ಸಿಂಚನ ಇರಲಿ. ಗಿಡ, ಮರ, ಹಾವುಗಳು ತಣ್ಣಗಿರಲಿ ಎನ್ನುವುದು ಇಲ್ಲಿಯ ಆಶಯ.

ಪರಿಶಿಷ್ಟರು ಮತ್ತು ಹಿಂದುಳಿದ ಬಿಲ್ಲವರು ನಾಗ ಪ್ರತಿಷ್ಠೆ ಮತ್ತು ನಾಗದರ್ಶನದ ಪಾತ್ರಿಗಳಾಗಿಯೂ ನಾಗನ ಉಪಾಸನಾ ಆಚರಣೆ ನಡೆಯುತ್ತಿದೆ. ನಾಗಬಿರ್ಮೆರ ಪರಿವಾರ ಶಕ್ತಿಗಳಾಗಿ ಎಲ್ಲಾ ಭೂತಗಳು ಉಪಾಸನೆ ಪಡೆಯುವುದೂ ಬೇಸಗೆಯ ದಿನಗಳಲ್ಲಿ.

ನಾಗ ಭೂತಗಳ ಸಾಲಿಗೆ ಸೇರಿದ್ದರಿಂದ ಸೋಮವಾರ, ಶನಿವಾರ, ಅಮವಾಸ್ಯೆ, ಏಕಾದಶಿ, ಪಂಚಮಿ, ಭರಣಿ, ಕೃತ್ತಿಕೆ ದಿನಗಳಲ್ಲಿ ಕೂಡ ಯಾವುದೇ ನಾಗ –ಭೂತ ಸ್ಥಾನಗಳಲ್ಲೂ ಉಪಾಸನೆ, ಬಲಿ ನಡೆಯಕೂಡದು ಎಂಬ ನಿಷೇಧ ಇದೆ. ತುಳುವರ ಆಟಿ ತಿಂಗಳಲ್ಲಿ ಭೂತಾರಾಧನೆಗೆ ರಜೆ. ಇಡಿ ತಿಂಗಳು ಯಾವುದೇ ಭೂತದ/ದೈವ ಶಕ್ತಿಗಳಿಗೆ ನಿತ್ಯ 'ಪೂನೀಲ್'(ಅರ್ಚಣೆ) ನೀಡಲೂ ನಿಷೇಧ ಇದೆ.

ಮೂಲತಃ ಕಾಡಿನಲ್ಲಿ ನಾಗ ಬ್ರಹ್ಮನ ಪರಿವಾರವಾಗಿ ಇದ್ದ ದೈವಗಳು ಕ್ರಮೇಣ ಮಾನವನ ಪಾಳೆಯ ಪಟ್ಟಿನ ಬೆಂಬಲಕ್ಕಾಗಿ ಆತನ ಮನೆಯ ಚಾವಡಿಯಲ್ಲಿ ನೆಲೆಗೊಳ್ಳುತ್ತವೆ. ಈ ಸ್ಥಿತ್ಯಂತರವನ್ನು ಪಡುಬಿದ್ರಿಯ ಸಿಂಧು ಹಾಡಿದ ಮೈಸಂದಾಯ ಪಾಡ್ದನದಲ್ಲಿ ಕಾಣಬಹುದು.

ವೈಜ್ಞಾನಿಕವಾಗಿ ನಾಗ ಕೃಷಿ ಪೋಷಕ ದೈವ. ನಾಗಬ್ರಹ್ಮ, ರೆಕ್ಕಿಸಿರಿ ನಾಗ ಶಕ್ತಿಗಳಾದರೆ ಮೈಸಂದಾಯ ಅರ್ಥಾತ್ ಕಾಡ್‌ದೆರ್ಲ್ಲು(ಕಾಡಿನ ಕೋಣ) ಕೃಷಿಗಾಗಿ ಬಳಕೆಯಾಗುವ ಪ್ರಾಣಿ. ನಾಗಬ್ರಹ್ಮರ ಜೊತೆ ಕೆಲವೆಡೆ ಜೋಗಿ ಪುರುಷರ ಪಾತ್ರವೂ ಇದೆ. ಕೋಟಿ ಚೆನ್ನಯರ ಗರಡಿಗಳಲ್ಲೂ ಜೋಗಿ ಪುರುಷರ ಪ್ರತಿಮೆಗಳಿವೆ. ಆದರೆ ಸಿರಿ ಆಲಡೆಗಳಲ್ಲಿ ಜೋಗಿ ಪುರುಷರ ಪಾತ್ರ ಇಲ್ಲ.

ತುಳುವರ ಮೂಲತಾನ ಆದಿ ಆಲಡೆಯ ಪರಂಪರೆ ಮತ್ತು ಪರಿವರ್ತನೆಯ ಕ್ಷೇತ್ರಕಾರ್ಯ ಮಾಡುತ್ತಿದ್ದಾಗ ಸಂಗ್ರಹಿಸಿದ ಪಾಡ್ದನಗಳಿವು. ೧೭ ಪಾಡ್ದನಗಳು ೩ ಕಂಬುಲದ ಮದಿಪುಗಳು ಇಲ್ಲಿವೆ. ಎಲ್ಲವೂ ನಾಗ ಬಿರ್ಮೆರ್ ಮತ್ತು ಪರಿವಾರ ದೈವಗಳ ಬಗ್ಗೆ ಮಾಹಿತಿ ನೀಡುವ ಪಾಡ್ದನಗಳು. ಇವುಗಳಲ್ಲಿ ನಾಗ ಬೆರ್ಮೆರ್ ಪರಿವಾರ ದೈವವಾಗಿ, ಕೊರಗ ದೈವ ಇಲ್ಲ. ಆದರೆ ನಾಗ ಬಿರ್ಮೆರ ಉಪಾಸನಾ ಆಚರಣೆಯಾದ ಕಂಬುಲದಲ್ಲಿ ಕೊರಗನ ಪಾತ್ರ ಇದೆ. ಕೊರಗ ಪಾತ್ರಿ ಜಾತಿಯಿಂದ ಕೊರಗನಲ್ಲ. ನಲ್ಕೆಯವ ಕೊರಗನ ವೇಷ ಹಾಕಿ ಪಾಡ್ದನ ಹೇಳುತ್ತಾ ಆ ಊರಿನ ಎಲ್ಲಾ ಮನೆಗಳಿಂದ ಭತ್ತ ಸಂಗ್ರಹಿಸಿ ತರುವುದು ಅವನ ಹಕ್ಕು.

ಅಮೃತ ಸೋಮೇಶ್ವರರ ಸಂಗ್ರಹದಲ್ಲಿ ಇರುವ ಕೊರಗ ತನಿಯ ಪಾಡ್ದನದ ಹರವು ಕಂಬುಲದ ಕೊರಗ ಪಾಡ್ದನಕ್ಕಿಂತ ವಿಸ್ತಾರವಾಗಿದೆ. ಗುಳಿಗ ಪಾಡ್ದನ ಬೇರೆ ಕಡೆ ದಾಖಲಾಗಿದೆ. ಸೃಜನಶೀಲ ಪಾಡ್ದನಕಾರ ಮತ್ತೊಬ್ಬನದ್ದು ಮಾತ್ರವಲ್ಲ ತನ್ನ ಸೃಜನಶೀಲತೆಯನ್ನೂ ನಕಲು ಮಾಡಲಾರ. ಕಂಠಪಾಠ ಮಾಡಲಾರ. ಅಂತೆಯೇ ಇಲ್ಲಿಯ ಗುಳಿಗ ಪಾಡ್ದನವೂ ಭಿನ್ನ ಪಾಠ.

ಆದರೆ ಬಿರ್ಮೆರೆ ಸಂಧಿ ಮತ್ತು ರೆಕ್ಕೆಸಿರಿ ಸಂಧಿಯ ಹೊಸ ಶೋಧ ಇಲ್ಲಿದೆ.

'ಬಿರ್ಮೆರೆ ಸಂಧಿ' ಒಟ್ಟು ಮೂರು ಇದೆ. ಒಂದು ಬಿರ್ಮೆರೆ ಮದಿಪು ಇದೆ.

ನನ್ನ ಗಮನಕ್ಕೆ ಬಂದಂತೆ ಇವುಗಳು ಇದುವರೆಗೆ ಎಲ್ಲೂ ಪ್ರಕಟವಾಗಿಲ್ಲ.

ಇಲ್ಲಿ ಇರುವ ಮುಗೆರ್ಲು ದೈವದ ಬೀರ ಮತ್ತು ಸ್ವಾಮಿ ಕೋಲದ ಸ್ತುತಿ ಹಾಡು ಬೇರೆಡೆ ಪ್ರಕಟವಾಗಿದ್ದು ನನ್ನ ಗಮನಕ್ಕೆ ಬಂದಿಲ್ಲ.

ರೆಕ್ಕೆಸಿರಿ ಸಂಧಿ ಒಟ್ಟು ನಾಲ್ಕು ಇದೆ. ಎರಡು ಪಾಡ್ದನಗಳು ರೆಕ್ಕಿರಿಸಿಯ ಉಗಮವನ್ನು ತಿಳಿಸುತ್ತದೆ. ರೆಕ್ಕಿಸಿರಿ ಹೇಗೆ ಪ್ರಕಟಗೊಂಡಳು ಎಂದು ಪಾಡ್ದನದಲ್ಲಿ ಇದೆ. ಇವು ಹೊಸ ಶೋಧ. ಇವುಗಳು ಪ್ರಕಟವಾಗಿರುವುದು ನನ್ನ ಗಮನಕ್ಕೆ ಬಂದಿಲ್ಲ.

ಮೈಯಿಸಂದಾಯ/ನಂದಿಗೋನ ಪಾಡ್ದನಗಳು ನನ್ನದೇ ಸಂಗ್ರಹ. ಆದರೂ ಅದು ಸಿರಿ ಪರ್ವದ ಭಾಗ ಆದುದರಿಂದ ಬೇರೆಡೆ ಇರುವ ಸಾಧ್ಯತೆ ಹೆಚ್ಚು. ಸಿಂಧು ಹೇಳಿದ ಪಾಡ್ದನ ಮೈಯಿಸಂದಾಯನನ್ನು ನಾಗ ಬ್ರಹ್ಮಸ್ಥಾನದಿಂದ ತಂದುದಾಗಿ ಹೇಳುತ್ತದೆ. ಇದು ಹೊಸ ಶೋಧ.

ಬೀರಗಳನ್ನು ಹೋಲುವ ಈ ಸಂಧಿ/ಪಾಡ್ದನಗಳು ಒಂದು ವೇಳೆ ಇತರೆಡೆ ಪ್ರಕಟ ಆಗಿದ್ದರೂ ಇಲ್ಲಿ ಅದು ಬೇರೆಯೇ ರೂಪ. ಗುಳಿಗ ಪಾಡ್ದನದಲ್ಲಿ ಕೂಡ ಹೊಸತನ ಇದೆ.

ದೆಯ್ಯೊಲೆ ನಲಿಕೆಯ ಬೀರ ಸಂಗ್ರಹಿಸುವಾಗ ಅಪರೂಪ ಎನಿಸಿತ್ತು. ಈಗ ಕೆ.ಕೇಶವ ಬಂಗೇರ ಅವರ 'ತುಳುನಾಡ ಕಾರ್ನಿಕ ದೈವೊಲು' ಕೃತಿಯಲ್ಲಿ 'ಮೂವರು ದೈಯಂದಿ ಕಾಡ್‌ದೆರ್ಲು ಎಳ್ವೆರ್ ಸಿರಿಕುಳು'-ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ಇದರ ಸಂಪೂರ್ಣ ಭಿನ್ನ ಪಾಠ ಇಲ್ಲಿ ಸಂಗ್ರಹಿಸಲಾದ ದೆಯ್ಯೊಲೆ ನಲಿಕೆಯ ಬೀರ.

ಕೋಡ್ದಬ್ಬು ಮೂಲತಾನ ನಾಗ ಪರಿವಾರದ ಆಲಡೆಯ ಗುಂಪಿಗೆ ಸೇರುವುದಿಲ್ಲ. ಕೋಡ್ದಬ್ಬು ದೈವ ನಾಗ ಬ್ರಹ್ಮ ಪರಿವಾರ ದೈವವಾಗಿ ನಾಗ ಬ್ರಹ್ಮಸ್ಥಾನದಲ್ಲಿ ಇಲ್ಲ. ಹೀಗಾಗಿ ಈ ಪಾಡ್ದನ ಸಂಗ್ರಹಕ್ಕೆ ನಾನು ಆಸಕ್ತಿ ವಹಿಸಿರಲಿಲ್ಲ. ಕಾರಣ ಅದು ನನ್ನ ಮೂಲತಾನಗಳ ಕ್ಷೇತ್ರ ವ್ಯಾಪ್ತಿಯಿಂದ ಹೊರಗೆ ಇರುವ ದೈವ. ಆದರೆ ಕಮಲಳ ಆಸಕ್ತಿ ಈ ಪಾಡ್ದನವನ್ನು ದಾಖಲಿಸಲು ನನ್ನಲ್ಲಿ ಒತ್ತಾಯಿಸಿತು. ಆಗ ನಾನು ದಾಖಲಿಸಿಕೊಂಡೆ. ಇರಲಿ ಭಿನ್ನ ಪಾಠವೊಂದು ಮುಂದಿನ ಅಧ್ಯಯನಕಾರರಿಗೆ ನೆರವಾಗಬಹುದು. ಹೀಗಾಗಿ ಅದನ್ನೂ ಇಲ್ಲಿ ಸೇರಿಸಿಕೊಂಡಿದ್ದೇನೆ.

ಅಮ್ಮುಂಜೆ ಶೀನಪ್ಪ ಹೆಗ್ಗಡೆಯವರು ಸಂಗ್ರಹಿಸಿದ ಗದ್ಯ ಪಾಡ್ದನದಲ್ಲಿ ಕೋಟೆದ ಬಬ್ಬು ಕಥೆ ಇನ್ನೂ ವಿಸ್ತಾರವಾಗಿದೆ. ಅಲ್ಲಿ ಬಬ್ಬುವಿನ ಕಾರಣಿಕ ಕಂಡು ಹೆದರಿ ಅವನನ್ನು ಮುಗಿಸಲು ಮೇಲ್ವರ್ಗದವರು ಹೂಡುವ ಸಂಚಿನ ವಿವರ ಇದೆ.

ಭಾಗ–೨ರಲ್ಲಿ ಇರುವ ಮೂರು ಪಾಡ್ದನಗಳು ಕಂಬುಲಕ್ಕೆ ಸಂಬಂಧಿಸಿವೆ

೧. ಅನಂತಾಡಿ ಕೊರಗ ಪಾಡ್ದನ ವಿಶ್ವನಾಥ ನಲ್ಕೆ ಅನಂತಾಡಿ.

೨. ಕಡಂದಲೆ ಪರಾಡಿ ಐತು ನಲ್ಕೆ ದೇಂದೊಟ್ಟು ಕಲ್ಲ ಮುಂಡೇರ್.

೩. ಕುಂಬ್ಳಾಜೆ ಕಂಬುಲ–ಸಂಗ್ರಹಿಸಿ ನೀಡಿದವರು ಕುಂಬ್ಳಾಜೆ ಬೀಡು ತಿಮ್ಮಪ್ಪ ರೈ ಕಾಸರಗೋಡು.

ನಾಗ ವಿಶ್ವ ಪೂಜನೀಯ ದೈವವಾಗಿತ್ತು. ಕ್ರೈಸ್ತ ಧರ್ಮ ಆರಂಭ ಕಾಲದಲ್ಲಿ ಈಜಿಪ್ಟ್‌ನ ಚರ್ಚ್‌ಗಳಲ್ಲಿ ಸ್ಥಳೀಯರನ್ನು ಕ್ರೈಸ್ತ ಧರ್ಮಕ್ಕೆ ಆಕರ್ಷಿಸಲು ಚರ್ಚ್‌ಗಳ ಗೋಡೆಗಳ ಮೇಲೆ ಹಾವಿನ ಉಬ್ಬುಚಿತ್ರವನ್ನು ಬಿಡಿಸುವುದಿತ್ತು.

ಭಾರತದ ಮಟ್ಟಿಗೆ ಒರಿಸ್ಸಾದ ಕೊನಾರ್ಕ ಸೂರ್ಯ ದೇವಾಲಯದಲ್ಲಿ ನಾಗನ ಮಿಥುನ ಶಿಲ್ಪಗಳ ಅದ್ಭುತ ಕೆತ್ತನೆಯನ್ನು ಕಾಣಬಹುದು. ಒರಿಸ್ಸಾದ ಭುವನೇಶ್ವರದ ದೇವಾಲಯಗಳು, ಮಧ್ಯಪ್ರದೇಶದ ಖಜುರಾಹು ದೇವಾಲಯಗಳು ನಾಗ ಕನ್ನಿಕೆ ಮತ್ತು ನಾಗ ಪುರುಷರ ಸುಂದರ ಶಿಲ್ಪಗಳನ್ನು ಹೊಂದಿವೆ. ಬಾದಾಮಿಯ ಚಾಳುಕ್ಯರು ನಿರ್ಮಿಸಿದ ಮೊದಲ ಗುಹೆಯ ಛತ್ತಿನಲ್ಲಿ ಪಂಚಮುಖಿ ನಾಗನ ಶಿಲ್ಪ ಹೆಡೆಗೆ ಸುರುಳಿಯಾಗಿ ದೇಹವನ್ನು ಸುತ್ತಿಕೊಂಡಿದೆ.

ತುಳುನಾಡಿನ ಆಳುಪರಸರ ಕೆಲವು ಶಾಸನಗಳಲ್ಲಿಯೂ ಸರ್ಪ ಲಾಂಛನ ಇದೆ.

ತುಳುನಾಡಿನಲ್ಲಿ ನಾಗಗಳ ಉಪಾಸನೆ ಪೂರ್ವ ರೂಪದಲ್ಲಿ ಉಳಿದು ಬಂದಿರುವುದು ತುಳುನಾಡಿನ ವೈಶಿಷ್ಟ್ಯ.

(ಇಲ್ಲಿಯ ಪಾಡ್ದನಗಳ ಅನುವಾದ ಸಂದರ್ಭದಲ್ಲಿ ಮೂಲ ಭಾಷೆಯ ಧ್ವನಿ, ಲಯ ಭಾವಗಳು ಅನುವಾದಿಸಲು ಸಾಧ್ಯ ಆಗದೆ ಇದ್ದಾಗ * ಚಿಹ್ನೆಯನ್ನು ತೋರಿಸಲಾಗಿದೆ. ಓದುಗರು ಯೇ ಎನ್ನುವ ಪ್ರಶ್ನಾರ್ಥಕ ವಲ್ಲ. ಆ ಕೊನೆಯ (ಯೇ*)ಪದವನ್ನು ರಾಗವಾಗಿ ಎಳೆಯ ಬೇಕೆನ್ನುವುದು ಇಲ್ಲಿಯ ಸೂಚನೆ).

ಞಞಞ



ನಾಗಬಿರ್ಮೆರ್ ಪಾತ್ರದಲ್ಲಿ ತನಿಯಪ್ಪ.
ಓಣಿಯಾಯಿ ಕಾಡು, ಉಜಿರೆ

೨

ಬಿರ್ಮೆರ ಸಂಧಿ ೧

ಹಾಡಿದವರು : **ತನಿಯಪ್ಪ** : ಪ್ರಾಯ ಸು. ೫೦, ಬಜೆ ಸುವರ್ಣ)
ಕೂಸಮ್ಮ : ಪ್ರಾಯ ೩೮, ಜಾತಿ : ನಲ್ಕೆ
ಬೈಲಂಗಡಿ ೧೬.೪.೨೦೦೬

ಈ ದಂಪತಿಗಳು ಹೇಳಿದ ಪ್ರಕಾರ ಬಿರ್ಮೆರ್ ಅಂದರೆ ನಾಗರ ಜೋವು ಪಾಡ್ದನದ ಉದ್ದಕ್ಕೂ ಜಯವುಳ್ಳ ಬೆರ್ಮರ್ ಎನ್ನುತ್ತಾರೆ.

ಪಾಡ್ದನ ದಾಖಲಿಸುವಾಗ ತನಿಯಪ್ಪನ ಮಡದಿ ಪೊಸೊಳಿಕೆ ಕೂಸಮ್ಮಳೂ ತನಿಯಪ್ಪನ ಮಾತಿಗೆ ಧ್ವನಿ ಸೇರಿಸಿದ್ದಳು. ದೈವ ಪಾತ್ರಿಯ ಬಣ್ಣಗಾರಿಕೆ ಮಾಡುವಾಗ ಮತ್ತು ಆವೇಶದ ಅರಂಭದಲ್ಲಿ ಪಾತ್ರಿಯ ತಾಯಿ, ಸೋದರಿ ಅಥವಾ ಮಡದಿ ತೆಂಬೆರೆಯ ಸಣ್ಣ ಧ್ವನಿ ಹೊರಡಿಸುತ್ತಾ ಪಾಡ್ದನ ಹಾಡಿ ಕೋಲಕ್ಕೆ ನಾಂದಿ ಹಾಕುತ್ತಾರೆ. ಧರ್ಮಸ್ಥಳದ ಅಣ್ಣಪ್ಪ ಬೆಟ್ಟ ಏರಲು ಮಹಿಳೆಯರಿಗೆ ನಿಷೇಧ ಇದೆ. ಆದರೆ ದೈವ ಪಾತ್ರಿ ಅನ್ನು ಪರವನ ಮಡದಿ ಬೆಟ್ಟದ ಮೇಲೆ ಹೋಗಿ ದೈವಮಾಧ್ಯಮನ ಹಿನ್ನೆಲೆಯಲ್ಲಿ ತೆಂಬೆರೆ ನುಡಿಸಿ ಪಾಡ್ದನ ಹಾಡುತ್ತಾಳೆ.

ಬಿರ್ಮೆರ ಪಾತ್ರಧಾರಿ ವೇಷ ಹಾಕುವಾಗ ಒಸಯ ಆಗಲು ಮಹಿಳೆಯರು ಹೇಳುವ ಸಂಧಿ ಇದು.

ತುಳು ಮೂಲ

ತಿರ್ತ್ ಉಂಡು ಸಾಮಿ ಸಿರಿಬಾರಿ ಲೋಕ
ಮಿತ್ತ್ ಉಂಡು ಸಾಮಿ ಮೇಲಮೆ ಲೋಕ
ನಡುಟು ಉಂಡು ನರ ಲೋಕ

ಎಡತ್ ಉಂಡು ಬೊಲ್ಯನ ಪುಂಚ
ಬಲತ್ ಉಂಡು ಬಂಗಾರ್ದ ಪುಂಚ
ನಡುಟು ಉಂಡು ಮಣ್ಣ್‌ದ ಪುಂಚ
ಪುಂಚೊಡು ನಾಗರ ಜೋವು ಜಯ ಬೆರ್ಮೆರ್ ಉದ್‌ಯ ಆತೆರ್
ಪಾತಾಳೊಗು ಮುನ್ನಿ ಆಕಾಶೊಗು ಜಿಡೆ
ಎಡತ್ತ್‌ಡ್ ಅಜಿಪತ್ತ ಆಜಿ ಕೋಟಿ ಪಾವು(ಸರ್ಪ)
ಬಲತ್ತ್‌ಡ್ ಎಲ್ಪತ್ತಾಜಿ ಕೋಟಿ ನಾಗರ ಜೋವುಲು ಕೊಂಡು ಉದ್ಯ ಬೆಂದೆರ್
ಜಯವುಲ್ಲಾ ಬೆರ್ಮೆರ್

ತಿಗಲೆಡ್ ಸಿರಿಲಿಂಗ ಮುಂಡೊಡು ನಾಮಲಿಂಗ
ತರೆಟ್ ಏಳ್ ಜಿಡೆ ಸತ್ತಿಗೆ ಕೊಂಡು ಉದ್ಯ ಆತೆರ್
ಜಯವುಲ್ಲ ಬೆರ್ಮೆರ್

ಅಪ್ಪೆ ಪನ್ನಗ ದೆಯ್ಯಾರ್ ಪೊಂಜೋವು
ಅಮ್ಮೆ ರಾಮದೇವರ್
ಅಪ್ಪೆರೆ ತುಡೆತ ಮರ್ಗಿಲ್ಡ್ ಅಮ್ಮೆರೆ ಬಲತ ಮರ್ಗಿಲ್ಡ್
ಮಣ್ಣ್‌ಡ್ ಪುಟಿನ ಬಾಲೆಲು ಅಂದ್‌ಡಾ
ಪೊವ್ಲೊಲು ಕುದುಪೊಡು ಪುಲ ಪಾರಾವೊಡು

ಕನ್ನಡ ಅನುವಾದ

ಕೆಳಗೆ ಉಂಟು ಸ್ವಾಮಿ ಸಿರಿ ಆಳುವ ಲೋಕ
ಮೇಲೆ ಇದೆ ಸ್ವಾಮಿ ಮೇಲಿನ ಲೋಕ
ನಡುವಿನಲ್ಲಿ ಇದೆ ನರಲೋಕ

ಎಡಕ್ಕೆ ಇದೆ ಬಿಳಿಯ ಹುತ್ತ
ಬಲಕ್ಕೆ ಇದೆ ಬಂಗಾರದ ಹುತ್ತ
ನಡುವೆ ಇದೆ ಮಣ್ಣಿನ ಹುತ್ತ
ಹುತ್ತದಲ್ಲಿ ನಾಗರ ಜೋವು ಜಯ ಬೆರ್ಮೆರ್ ಉದಯವಾದರು
ಪಾತಳಕ್ಕೆ ಬಾಲ ಆಕಾಶಕ್ಕೆ ಹೆಡೆ
ಎಡದಲ್ಲಿ ಅರ್ವತ್ತಾರು ಕೋಟಿ ಹಾವು
ಬಲದಲ್ಲಿ ಎಪ್ಪತ್ತೇಳು ಕೋಟಿ ನಾಗ ಜೋವುಗಳೊಂದಿಗೆ ಉದಯವಾದರು
ಜಯವುಳ್ಳ ಬೆರ್ಮರು

ಎದೆಯಲ್ಲಿ ಸಿರಿಲಿಂಗ ಹಣೆಯಲ್ಲಿ ನಾಮಲಿಂಗ
ತಲೆಯ ಮೇಲೆ ಏಳು ಹೆಡೆ ಸತ್ತಿಗೆ ಹೊಂದಿ ಉದಯವಾದರು
ಜಯವುಳ್ಳ ಬೆರ್ಮರು

ಅಬ್ಬೆ ಎಂದರೆ ದೆಯ್ಯಾರು ಹೆಂಗುಸು
ಅಪ್ಪ ರಾಮ ದೇವರು
ಅಬ್ಬೆಯ ತೊಡೆಯ ಮಗ್ಗುಲಲ್ಲಿ ಅಪ್ಪನ ಬಲ ಮಗ್ಗುಲಲ್ಲಿ
ಮಣ್ಣಲ್ಲಿ ಹುಟ್ಟಿದ ಮಕ್ಕಳು ಹೌದಾದರೆ
ಹೊಕ್ಕಳು ಕಡಿಯಬೇಕು, ಹೆತ್ತ ಸೂತಕ ತೆಗೆಯಬೇಕು

ಹುಟ್ಟು ಹೆಸರು ಕರೆಯಬೇಕು
ಮಣ್ಣಿನ ಮಕ್ಕಳು ಹೋಗಿ ಹ್ಯಾಳೆಗೆ ಬೆಳೆದರು
ಇಬ್ಬರು ನಾಗ ಜೋವುಗಳು ತೊಟ್ಟಿಲಿಗೆ ಸರಿಯಾಗಿ ತುಂಬಿದರು ಮಕ್ಕಳು
ಮುದ್ದಿನ ಮಕ್ಕಳಿಗೆ ಮೋಹದ ಹೆಸರು
ಕರೆಯಬೇಕು ಹೇಳಿದರು ಅಪ್ಪವ್ವು
ಕೋತಂಡೆ ಮಾತಂಡೆ ಎಂದು ಹೆಸರು ಇಟ್ಟರು
ಅಪ್ಪವ್ವುರು ಇನ್ನು ಇಬ್ಬರು ನಾಗ ಜೋವುಗಳಿಗೆ
ತೊಟ್ಟಿಲ ಸಾಕಣೆಯ ಮಕ್ಕಳು ಜಗಲಿಗೆ ಇಳಿದರು
ಜಗಲಿಯ ಮಕ್ಕಳು ಹೋಗುವವು ಕವಚಿ ಬೀಳುತ್ತಾ
ಹೊಟ್ಟೆ ಎಳೆಯುತ್ತಾ ಹೊಸಿಲಿಗೆ ಹೊಟ್ಟೆ ಒತ್ತಿ
ಗೋಡೆ ಹಿಡಿದು ಹೆಜ್ಜೆ ಊರುತ್ತಾ
ಹೆಜ್ಜೆ ಇಟ್ಟು ಬರುವರು

ಚಿಕ್ಕವರಿದ್ದವರು ದೊಡ್ಡವರೇ ಆದರು ಮಕ್ಕಳು
ಒಂದು ವರ್ಷ ಎರಡು ವರ್ಷಗಳೇ ಕಳೆದುವು ಮಕ್ಕಳಿಗೆ
ಮೂರು ವರ್ಷ ತುಂಬಿತು ಮಕ್ಕಳಿಗೆ

ಏಳು ವರ್ಷ ತುಂಬುವಾಗ
ಯಾರು ಯಾರು ಅಬ್ಬೆಯವರೇ
ನಮಗೆ ಮದುವೆ ಬೇಕು
ಹೆಣ್ಣು ನೋಡಬೇಕು ನೆಂಟಸ್ತಿಕೆ ಹಿಡಿಯಬೇಕು
ನೆಂಟಸ್ತಿಕೆ ಹಿಡಿಯಬೇಕು ಮದುವೆ ಮಂಗಳ ಆಗಬೇಕು

ಹೌದೇ ಮಕ್ಕಳೇ ಇಷ್ಟು ಎಳೆಯ ಪ್ರಾಯದಲ್ಲಿ

ಪೊಣ್ಣು ತೂವರೆ ಪೊದು ಪತ್ತೆರೆ
ಮದಿಮೆ ಮಂಗಿಲ ಆವರೆ,
ಅಂಗೈ ಮಂಜಲ ಗೆರೆ ಮಾಜುಜಿ
ಕಿದ್‌ಕಿಲ್ ಅಡಿತ ಅಮೆ ಪೋತುಜಿ
ನಿಕ್ಲೆ ಅಮ್ಮೆರ್ ಬನ್ನಗ
ಪೊಣ್ಣು ತೂವರೆ ಪೊದು ಪತ್ತರೆ
ಅಮ್ಮೆರ್‌ಡ ಕೇನ್ಲೆ

ಉಗ್ರೊಡು ಬನ್ನಗ ತಾರೆದಾತ್ ತೋರ
ಕಂಗ್‌ದಾತ್ ಉದ್ದ ಬಟ್ಟಲ್ ಮೋನೆ
ಕೌಡಿಗೆ ದಾತ್ ಕೂಲಿ ಸೀಗೆ ಬಿತ್ತ್‌ದ ಕಣ್ಣ್

ಹರ್ಷೊಡು ಬನ್ನಗ ಸೂಜಿಮೋನೆ ಗುರುಗುಂಜಿ ಕಣ್ಣ್
ಜಯಪ್ಪ ನಾಲಗೆ ಬೊಕ್ಕ ಕೇನ್ಲೆಲಾ ಬಾಲೆಲೆ

ಏರ್ಯ ಆರ್ ಅಪ್ಪೆರೇ
ಎಂಕ್ಲೆ ಅಮ್ಮೆರೆನ್ ಎಂಕ್ಲು ಕೆಬಿಟ್ ಕೇನ್‌ದ್‌ಜ
ಕಣ್ಣ್‌ಡ್ ಕೊಂಡೊಂದು ತೂತುಜ

ಅಪನಗ ಅಮ್ಮೆರ್ ಬರ್ಪೆರ್

ಏರ್ಯ ಏರ್ ಅಮ್ಮೆರ್ ಎಂಕ್ಲೆಗ್
ಪೊನ್ನು ತೂವುಡು ಪೊದು ಪತ್ತೊಡು
ಮದಿಮೆ ಮಂಗಿಲ ಆವೊಡು

ಹೆಣ್ಣು ನೋಡಲು ನೆಂಟಸ್ತಿಕೆ ಹಿಡಿಯಲು
ಮದುವೆ ಮಂಗಳ ಆಗಲು
ಅಂಗೈ ಅರಸಿನ ಗೆರೆ ಮಾಸಿಲ್ಲ
ಕಂಕುಲಡಿಯ ಸೂತಕ ಹೋಗಿಲ್ಲ.
ನಿಮ್ಮ ಅಪ್ಪಾವ್ರು ಬಂದಾಗ
ಹೆಣ್ಣು ನೋಡಲು ನೆಂಟಸ್ತಿಕೆ ಹಿಡಿಯಲು
ಅಪ್ಪಾವ್ರಲ್ಲಿ ಕೇಳಿ

ಉಗ್ರರಾಗಿ ಬರುವಾಗ ತೆಂಗಿನಷ್ಟು ತೋರ
ಕಂಗಿನಷ್ಟು ಉದ್ದ ಬಟ್ಟಲು ಮುಖ
ಕವಡೆಯಷ್ಟು ಹಲ್ಲು ಸೀಗೆಯ ಬೀಜ ಕಣ್ಣು

ಹರ್ಷದಲ್ಲಿ ಬರುವಾಗ ಸೂಜಿಮುಖ ಗುಲಗಂಜಿ ಕಣ್ಣು
ಜಯ ಆಡುವ ನಾಲಗೆ, ಮತ್ತೆ ಕೇಳಿ ಮಕ್ಕಳಾ

ಯಾರು ಅವರು ಅಬ್ಬೆಯವರೇ
ನಮ್ಮ ಅಪ್ಪಾವ್ರನ್ನು ನಾವು ಕಿವಿಯಾರೆ ಕೇಳಿಲ್ಲ
ಕಣ್ಣ ನೋಟದಲ್ಲಿ ನೋಡಿಲ್ಲ

ಅಷ್ಟರಲ್ಲಿ ಅಪ್ಪಾವ್ರು ಬರುತ್ತಾರೆ

ಯಾರು ಯಾರು ಅಪ್ಪಾವ್ರು ನಮಗೆ
ಹೆಣ್ಣು ನೋಡಬೇಕು ನೆಂಟಸ್ತಿಕೆ ಹಿಡಿಯಬೇಕು
ಮದುವೆ ಮಂಗಳ ಆಗಬೇಕು

ಹೆಣ್ಣು ಮಾತನಾಡಲು ಹೊರಡಲು ಕರೆವಾಗ
ನೀರಿನಲ್ಲಿ ನೀರು ಕನ್ನಡಿ ಹಾವು
ಬೆಟ್ಟು ಭಾಗದ ಬಿಳಿಯ ಕನ್ನಡಿ ಹಾವು
ಮಲೆಯಲ್ಲಿ ಇರುವ 'ಮಲೆ ಬುಲೆಕರಿ' ಕರೆದರು
ನನ್ನ ಮಕ್ಕಳಿಗೆ ಹೆಣ್ಣು ಮಾತನಾಡಲು ಹೋಗಿ ಎಂದರು

ನಾವಾದರೆ ಹೆಣ್ಣು ಮಾತನಾಡಲು ಹೋಗಲಾರೆವು
ನೀವು ಹೋಗಿ

ಏಳು ಮಲೆ ರಾಮಗಿರಿ ಪರ್ವತಕ್ಕೆ ಹೋಗಿ
ಹೆಣ್ಣು ಮಾತನಾಡಲು ಹೋಗುವಾಗ
ಮಣ್ಣಿನ ಹುತ್ತದ ಒಳಗೆ
ಇಬ್ಬರು ಕನ್ಯೆ ಸಿರಿಗಳು ಇದ್ದಾರೆ

ಹೆಣ್ಣು ಮಾತನಾಡಿದರು ನೆಂಟಸ್ತಿಕೆ ಹಿಡಿದರು
ಮದುವೆ ಮಂಗಳ ಆಗಲು ಹೆಣ್ಣು ಹೇಗೆ ಒಯ್ಯುವಿರಿ

ಸುನಿಪೆ ಕೊಡಪೆ ಎನ್ನುವ ಬಿಳಿಯ ಸಂಕಮಾಲೆ ಬರುತ್ತದೆ
ಬರುವಾಗ ಹೇಂಟೆ ಕೊಟ್ಟು ಸಮಾಧಾನಿಸುವೆ
ಕರಿಯ ಕಾಡಿನ ಬಲಿಪ ಬರುತ್ತಾನೆ
ಎಮ್ಮೆಯ ಕರು ಕೊಟ್ಟು ಸಮಾಧಾನಿಸುವೆ

ಹೆಣ್ಣು ಕೊಂಡು ಬರುವರು ಕೋತಂಡೆ ಮಾತಂಡೆ
ಮದುವೆ ಆಗುತ್ತಾರೆ ಹುತ್ತದಲ್ಲಿ ಕುಳಿತುಕೊಳ್ಳುತ್ತಾರೆ.

⌘⌘⌘

"ಅಲ್ಲಿಗೆ ನಾವು ನಾಗ ಬಿರ್ಮೆರ್ ನೆಲೆಯಾಗುತ್ತದೆ." ಪಾಡ್ದನ ಮುಗಿಸಿ ತನಿಯಪ್ಪ ಹೇಳಿದ ಮಾತಿದು. ಅಂದರೆ ಲೌಕಿಕ ಜಗತ್ತಿನ ನಾಗ ಬೆರ್ಮೆರ್ ಅಲೌಕಿಕ ಜಗತ್ತಿಗೆ ಮರಳುತ್ತವೆ. ಪಾತ್ರಗಳು ಲೌಕಿಕ ಜಗತ್ತಿಗೆ ಮರಳುತ್ತಾರೆ.

ಬಿರ್ಮೆರೆ ಪಾತ್ರದ ಬಣ್ಣಗಾರಿಕೆ :

ತಲೆಗೆ: ತಲೆಪಟ್ಟಿ; ಅಣಿ ಇಲ್ಲ; ಕಾಲಿಗೆ ಗಗ್ಗರ ಇದೆ; ಸೀರೆ ಉಡಬೇಕು ಮೇಲ್ಗಡೆ ರವಿಕೆ ಅಥವಾ ಅಂಗಿ ಕೈ ದಂಡೆ ಪದ್ಮೆ(ಬಂಗಾರ) ಬೇಕು; ಸಿರಿ ಮುಡಿ ಬೆಳ್ಳಿಯದು; ಕಂಗಿನ ಹಾಳೆಯ ಉದ್ದದ ಜಡೆ ಇದೆ.

ಬಿರ್ಮೆರ ಕೆಳಭಾಗ ಹೆಣ್ಣು. ಮೊಗದ ಮೇಲೆ ಗಂಡು ಮೀಸೆ.

ಆಯುಧ ಬಿಲ್ಲು ಬಾಣ. ಖಡ್ಗವೂ ಇದೆ.

ಬಿರ್ಮೆರರಿಗೆ ಪುರಾತನ 'ಪರಯ ಪಂಜೊಡಿ' ಎನ್ನುವ ಹೆಸರು ಇದೆ.

ಬಿರ್ಮೆರ್ ಕೋಲದಲ್ಲಿ ಬೇಟೆಯಾಡುವ ಕ್ರಿಯೆ ಇರುತ್ತದೆ.

ಬೆರ್ಮೆರ್ ಜೊತೆ ರೆಕ್ಕಿಸಿರಿ ಇಲ್ಲ. ನಾಗ, ಕುಮಾರಸ್ವಾಮಿ, ಗಿಳಿರಾಮ ಕೊನೆಗೆ ಶಿರಾಡಿ ದೈವಕ್ಕೆ ನೇಮ ಇದೆ.

ಬೆರ್ಮರಜ್ಜಿಗೆ ಕೋಲ ಇದೆ. ಸುಮಾರು ೧೫ ನಿಮಿಷದ ನರ್ತನ. ಬೆರ್ಮೆ ತಲೆಪಟ್ಟಿ – ಮುಡಿ ಕಳಚಿ ತಲೆಗೆ ಅಜ್ಜಿಕೂದಲು ಸಿಕ್ಕಿಸಿ ಬರುತ್ತಾನೆ ಪಾತ್ರಿ. ಬೆರ್ಮೆರ ಕೋಲದಲ್ಲಿ ಬಿರ್ಮೆರಜ್ಜಿ ಪಾತ್ರ ಅಗತ್ಯ.

ಬಿರ್ಮೆರ್ ಜೊತೆ ಶಿರಾಡಿ ಭೂತ, ಕಲ್ಕುಡ ಇದೆ. ಈ ಕೋಲವನ್ನು ಉಜಿರೆಯ ಕಾಡಿನ ಪಾಳುಬಿದ್ದ ಓಣಿಯಾಯಿ ಗುತ್ತಿನ ಕ್ಷೇತ್ರದಲ್ಲಿ ನಾನು ೨೦೦೭ರಲ್ಲಿ ನೋಡಿದ್ದೆ. ಈ ಪಾಡ್ದನ ಹೇಳಿದ ತನಿಯಪ್ಪ ಬಿರ್ಮೆರೆ ದೈವ ಮಾಧ್ಯಮನಾಗಿದ್ದ. ಮೊದಲ ದಿನ ಪಾಡ್ದನ ಸಂಗ್ರಹಿಸಿ ಮರುದಿನ ಕೋಲ ನೋಡಿದ್ದೆ. ಮರುವರ್ಷ ಬೈಲಂಗಡಿ ಅರಮನೆ ಕ್ಷೇತ್ರದಲ್ಲಿ ನಡೆದ ಜಾಲಾಟದಲ್ಲಿ ಕೂಡ ಬಿರ್ಮೆರ್ ದೈವ ಮಾಧ್ಯಮನಾಗಿ ತನಿಯಪ್ಪನೇ ಇದ್ದ.

ЖЖЖ

೩

ಬಿರ್ಮೆರ ಸಂಧಿ ೨

ಹಾಡಿದವರು : ಕೊರತಿ ಕರುಂಬುಡೆ, ಕುಳೂರು
ಪ್ರಾಯ ಸು. ೫೫, ಬಜೆ ಮುಡಂಬಾರ್
೧೨.೧೨.೨೦೦೬

ಬಾಕುಡರು ದಿರಡೇರ್ (ದ್ರಾವಿಡರು)

'ಬೈಲ ಬಾಕುಡರು'(ಕಾಡಿನವರು ಅಲ್ಲ ಎಂಬರ್ಥ) ಎಂಬ ದಲಿತ ಜನಾಂಗ ತಮ್ಮನ್ನು ಆದಿ ದ್ರಾವಿಡರೆನ್ನುತ್ತಾರೆ. ಈ ಊರಲ್ಲಿ ಕೊರಗರು ಇಲ್ಲ.

ಬಾಕುಡರಲ್ಲಿ ೧೮ ಬಳಿಗಳಿವೆ. ಒಂದೊಂದು ಬಳಿಗೂ ಒಂದೊಂದು ಮೂಲಸ್ಥಾನಗಳಿವೆ. ಆದಿ ಮೂಲಸ್ಥಾನ ಕಡಂಬಾರ್ ಹೊಸಂಗಡಿ(ಕಾಸರಗೋಡಿನಿಂದ ದಕ್ಷಿಣಕ್ಕೆ). "ಮಂಜೇಶ್ವರದ ಬಳಿ 'ಕೊಡಂಚಿರ್' ಎನ್ನುವ ಕ್ಷೇತ್ರ. ಇವರ ಮಹಿಳೆಗೆ ಹೆಣ್ಣು ಮಗುವಿನ ರೂಪದಲ್ಲಿ 'ನಾಗ ಬೆರ್ಮೆರ್' ಅಭಯ ನೀಡಿದ ಸ್ಥಳ. ಈ ಸ್ಥಳದಲ್ಲಿ ಸುಗ್ಗಿ ತಿಂಗಳ ಎರಡನೆಯ ದಿನ ನಾಗ ಬೆರ್ಮೆರ ಕೋಲ ಆರಂಭವಾಗಿ, ಅನಂತರ ನಿರಂತರವಾಗಿ ೧೮ ಮೂಲತಾನಗಳಲ್ಲಿ ಕೋಲ ನಡೆಯುವುದು ಪದ್ಧತಿ. ಕೊಡಂಚಿರ್‌ನಲ್ಲಿ ಮತ್ತು ಬಡಾಜೆಯಲ್ಲಿ ಪ್ರತಿವರ್ಷ ನಾಗ ಬಿರ್ಮೆರರಿಗೆ ಕೋಲ ನಡೆಯುತ್ತಿದೆ. ಉಳಿದ ೧೬ ಮೂಲ ಸ್ಥಾನಗಳಲ್ಲಿ ಒಂದು ವರ್ಷ ನಾಗ ಬಿರ್ಮೆರ ಕೋಲ ಆದರೆ ಮರುವರ್ಷ ಐವರು ದೈಯಂಗಳ ಕೋಲ ನಡೆಯುತ್ತದೆ(ಐವರು ದೈಯಂಗಳನಲ್ಲಿ ನಾಗನೂ ಬರುತ್ತದೆ). ಮೊದಲ ಉಪಾಸನೆ ಹುಣ್ಣಿಮೆಯಂದು ಆರಂಭವಾಗುತ್ತದೆ. ನಾಗ ಉಲ್ಲಾಯ(ಪುರುಷ)ನಿಗೆ ೧೦೦೧ ಹೆಡೆಯ ಅಲಂಕಾರದ ಅಣಿ(ಹೆಡೆ) ಸಂಪ್ರದಾಯ. ಉಲ್ಲಾಲ್ತಿಗೆ ಅಣಿ ಇಲ್ಲ. ನಾಗಬಿರ್ಮೆರ್ ಮತ್ತು ಉಲ್ಲಾಲ್ತಿ ಅಣ್ಣ ತಂಗಿಯರು. ಈ ಪಾಡ್ದನದ ಪ್ರಕಾರ ಹಾವುಗಳ ತಂದೆ ನರಯನ, ತಾಯಿ ಮುಂಗುಲಿ. ನರಯನ ಎನ್ನುವುದು ಸೂರ್ಯನೂ ಆಗುತ್ತದೆ, ಸರ್ಪವೂ ಆಗುತ್ತದೆ. ನಾಗ ಬಿರ್ಮೆರ ಜೊತೆಯಲ್ಲಿ ಹಲವು ಜಾತಿಯ ಹಾವುಗಳ ಜನ್ಮ ತಾಳುತ್ತವೆ. ಬಾಕುಡರ ಕ್ಷೇತ್ರದ ವಕ್ತೃಗಳ ಪ್ರಕಾರ ಹರಿಯುವ/ಪರಪುನ ಎಲ್ಲವೂ ನಾಗ ಬಿರ್ಮೆರ ಸಂತಾನ.

ಇವರು ತಮ್ಮನ್ನು ದ್ರಾವಿಡರು ಮತ್ತು ಭೂಮಿ ಪುತ್ರರು ಎನ್ನುವ ನವೀನ್ ಬಳಿ ಜೊತೆ ನಡೆಸಿದ ಸಂದರ್ಶನ : ಆತ ಉತ್ತರಿಸಿದ–

ಪ್ರ: ನೀವು ಭೂಮಿ ಪುತ್ರರು ಹೇಗೆ?

ಉ: ಹಿಂದಿನ ಹಿರಿಯರಿಂದ ಕೇಳಿಕೊಂಡು ಬಂದಿದ್ದೇವೆ. ಅವರು ಹೇಳಿದ್ದನ್ನು ಮುಂದಿನ ತಲೆಮಾರಿಗೆ ಹೇಳುತ್ತೇವೆ.

ಪ್ರ: ನೀವು ಮಾತ್ರ ದ್ರಾವಿಡರಾ? ನಾವು?

ಉ: ಆದರೆ ನಾವು ಭೂಮಿ ಪುತ್ತರು.

ಪ್ರ: ಒಕ್ಕಲಕುಲು (ಬಂಟರು) ಭೂಮಿ ಪುತ್ರೆರ್ ಎನ್ನುತ್ತಾರಲ್ಲ?

ಉ: ಆದರೆ ನಮಗೆ ನಾಗನ ಅಧಿಕಾರ ಇದೆ. ನಾಗನ ಆರಾಧನೆ ನಾವು ಹೀಗೆಯೇ ಮಾಡಿಕೊಂಡು ಬಂದವರು. ನಾಗ ಬಿರ್ಮೆರ್ ನಮಗೆ ಸಿಕ್ಕಿದ್ದು. ಭೂಮಿ ಉಂಡಾದಾಗ. ಹೆಣ್ಣು ಮಗುವಿನ ರೂಪದಲ್ಲಿ.

ಪ್ರ: ಅಂದರೆ?

ಉ: ತುಳುನಾಡಿನಲ್ಲಿ ಎಲ್ಲರೂ ನಾಗನನ್ನು ಆರಾಧನೆ ಮಾಡುತ್ತಾರೆ. ಆದರೆ ನಮಗೆ ಯಾರೂ ಹೇಳಿ ಕೊಟ್ಟು, ತರಬೇತಿ ನೀಡಿ ನಾವು ಆರಾಧನೆ ಮಾಡುವುದಲ್ಲ. ಬ್ರಾಹ್ಮಣರಿಗೆ ತರಬೇತಿ ಇರುತ್ತದೆ. ಉಪದೇಶ ಇರುತ್ತದೆ. ಆ ರೀತಿ ಯಾವ ತರಬೇತಿ ಇಲ್ಲದ ನಮ್ಮದು ಮುಗ್ಧ ಭಕ್ತಿ. ನಮ್ಮ ಹಿರಿಯರ ಬಾಯಿಂದ ಕೇಳಿದ್ದು ಪೂರ್ವ ಕ್ರಮದಿಂದ ಬಂದುದು, ನಮ್ಮ ನಮ್ಮ ಕುಲದಲ್ಲಿ ಆಚರಿಸುತ್ತಾ ಹೋಗುವುದು.

ಪ್ರ: ಇಲ್ಲಿ ನಡೆಯುವ ಈ ಕೋಲ ಯಾವ ದೈವದ ಕೋಲ.

ಉ: ನಾಗ ಬಿರ್ಮೆರ ಕೋಲ.

ಪ್ರ: ನಾಗ ಬಿರ್ಮೆರ ಜೊತೆ ಉಲ್ಲಾಲ್ತಿ ಹೇಗೆ?

ಉ: ಉಲ್ಲಾಲ್ತಿ ನಾಗ ಬಿರ್ಮೆರ ಅಕ್ಕ ತಂಗಿಯರು. ನಾಗ ಬಿರ್ಮೆರ್ ಇಬ್ಬರು. ಅಂದರೆ ನಾಗಗಳು. ಇಬ್ಬರು. ಅವರನ್ನು ಎಲ್ಯನ್ನೇರ್ (ಚಿಕ್ಕ ಅಣ್ಣ) ಮತ್ತು ನೇಲ್ಯನ್ನೇರ್ (ದೊಡ್ಡ ಅಣ್ಣ) ಎಂದು ಕರೆಯುತ್ತಾರೆ. ಹಾಗೆಯೇ ಉಲ್ಲಾಲ್ತಿ ಮತ್ತು ಕನ್ನಿ ಉಲ್ಲಾಲ್ತಿ ಎಂದು ನಾಗ ಕನ್ನಿಕೆಗಳು.

ಉಲ್ಲಾಲ್ತಿ ಕನ್ನಿ ಉಲ್ಲಾಲ್ತಿ ಎಂಬುದು ದೇವಿಯಾಂಶ. ನಾಗ ಕನ್ನಿಕೆಯರು. ನಮಗೆ ನಾಗನೂ ದೈವಾಂಶ ಉಲ್ಲಾಲ್ತಿಯೂ ದೈವಾಂಶ.

ಉಲ್ಲಾಲ್ತಿ ದರ್ಶನದಲ್ಲಿ ಮೂಲ ಸ್ಥಾನದ ಕುಟುಂಬದ ಪುರುಷರಿಗೆ ದರ್ಶನ (ಅವೇಶ)ಬರುತ್ತದೆ.

ಕೊನಂಗಾರ್‌ಲೀ (ಕೊಡಂಗೆರ್) – ಮರಿ ಕಾಲ ಕೋಲ /ಮರಿಕಲ ಬೂರುನು. ಎನ್ನುವ ದೃಶ್ಯ ಇದೆ. ಮರಿ ಎನ್ನುವುದು ಸರ್ಪದ ಒಂದು ಪ್ರಭೇದ. ಈ ಮರಿಯನ್ನು ಕೃಷ್ಣಸರ್ಪ ಎಂದೂ ಹೇಳುತ್ತಾರೆ. ಇದು ಮರ ಹತ್ತುವ ನಟನೆ ಇದೆ.

ನಾನು ನೋಡಿದ ಆ ರಾತ್ರಿಯ ಕೋಲದ ಸಂದರ್ಭದಲ್ಲಿ ಕಿರಿಯ ಕನ್ನಿ ಉಲ್ಲಾಲ್ತಿ ಮಾಧ್ಯಮನೊಂದಿಗೆ ನಡೆದ ಕ್ಷೇತ್ರ ಸಂಬಂಧಿತ ನ್ಯಾಯದ ಚರ್ಚೆ ಹೀಗಿದೆ:

ಬಾಕುಡರ ಯಜಮಾನ : ಇಲ್ಲಿ ಇರುವ ನಾಗನ ಕಲ್ಲು(ಶಿಲೆ) ಮಳೆನೀರಿಗೆ ಕೊಚ್ಚಿ ನದಿಗೆ ಬೀಳುವ ಅಪಾಯ ಇದೆ(ಉಪ್ಪಳ ನದಿದಡ). ಅದಕ್ಕಾಗಿ ನಾವು ಅಷ್ಟಮಂಗಳ ಪ್ರಶ್ನೆ ಇಡಬೇಕೆಂದು ಬಯಸಿದ್ದೇವೆ.

ಉಲ್ಲಾಲ್ತಿ ಕಿನ್ಯಕ್ಕ : ಮೌನ

ಬಾಕುಡರ ಯಜಮಾನ : ನೀನು ನಮ್ಮ ತಾಯಿ.

ಉಲ್ಲಾಲ್ತಿ ಕಿನ್ಯಕ್ಕ : ನಾನೇನು ಮಾಡಬೇಕು?

ಬಾಕುಡರ ಯಜಮಾನ : ನಮಗೆ ನುಡಿ ಕೊಡಬೇಕು.

ಉಲ್ಲಾಲ್ತಿ ಕಿನ್ಯಕ್ಕ : ನೀವು ಅಷ್ಟಮಂಗಳದಲ್ಲಿ ಕೇಳುವುದಾಗಿ ಹೇಳಿದಿರಿ.

ಬಾಕುಡರ ಯಜಮಾನ : ಹೌದು. ಅದಕ್ಕೆ ನೀನು ನುಡಿ ಕೊಡಬೇಕು

ಉಲ್ಲಾಲ್ತಿ ಕಿನ್ಯಕ್ಕ : ಅಷ್ಟಮಂಗಳದಲ್ಲಿ ಕೇಳುವವರಿಗೆ ನನ್ನ ನುಡಿ ಯಾಕೆ?

ಬಾಕುಡರ ಯಜಮಾನ : ಮೌನ.

ಉಲ್ಲಾಲ್ತಿ ಕಿನ್ಯಕ್ಕ : ನೀವು ಒಂದೋ ನನ್ನನ್ನು ನಂಬಿ, ನನ್ನಲ್ಲಿ ಕೇಳಿ. ಅಥವಾ ಅಷ್ಟ ಮಂಗಳ ಪ್ರಶ್ನೆಯಲ್ಲಿ ಕೇಳಿ. ಅಲ್ಲಿ ಹೇಳಿದಂತೆ ನಾಗ ಬನದ ಜೀರ್ಣೋದ್ಧಾರ ಮಾಡಿ. ಎರಡು ದೋಣಿಯ ಮೇಲೆ ಕಾಲಿಟ್ಟು ದೋಣಿ ಪ್ರಯಾಣ ಬೇಡ.

ಬಾಕುಡರ ಯಜಮಾನ :ಮೌನ.

ಉಲ್ಲಾಲ್ತಿ ಕಿನ್ಯಕ್ಕ : ಯೋಚಿಸಿ. ಬರುವ ವರ್ಷ ಬನ್ನಿ

ಅಲ್ಲಿಗೆ ಆ ಸಂಭಾಷಣೆ ಮುಗಿಯುತ್ತದೆ.

ಜನಪದರು ತಮ್ಮ ಮೂಲ ಸಂಸ್ಕೃತಿಯಿಂದ ಬ್ರಾಹ್ಮಣ ಸಂಸ್ಕೃತಿಗೆ ಪರಿವರ್ತನೆ ಯಾಗುತ್ತಿರುವುದನ್ನು ಉಲ್ಲಾಲ್ತಿ ಪ್ರತಿಭಟಿಸಿದ ರೀತಿ ಮಾತ್ರ ಸಾಧುವಾದ್ದುದು.

(ಹೇಳಿದವರು :ಎಂ. ನವೀನ, ಪ್ರಾಯ : ೩೧, ಕಾಸರಗೋಡು
ರಾಮ ಮೂಲಿ, ಪ್ರಾಯ : ೪೫, ಕಾಸರಗೋಡು
ದಿನಾಂಕ ೨೦-೩-೨೦೦೭ ಬಾಕುಡರ ಕೋಲದ ಕ್ಷೇತ್ರ ಕಾಸರಗೋಡು)

ನಾಗ ಬಿರ್ಮೆರ್

ಸಂಧಿ ಪಾಡ್ದನ (ಕೋಲದ ಮಾಧ್ಯಮನ ಆವೇಶಕ್ಕೆ ಪಾಡ್ದನ ಇದು)

ಹಾಡಿದವರು : **ಕೊಡಂಚೇರ್ ಕಮಲ,** ಜಾತಿ : ನಲ್ಕೆ
ಬಳಿ : ಸಾಲಿ/ಸಾಳ್ವ, ಪ್ರಾಯ ೩೮
ಕುಳೂರು, ಕಾಸರಗೋಡು, ೧೨.೧೨.೨೦೦೬

ತುಳು ಮೂಲ

ಆ...ನಾ........ಯೇ........ಯೇ........ಆ........
ಓ....ಅಮ್ಮೆಂದ್ ಪನ್ನಗ ಉಲ್ಲೆರ್‍ಯೇ ನಮ್ಮ 'ಮುದ್ದ ನರಯನೆ'
ಅಪ್ಪೆಂದ್ ಪನ್ನಗ 'ಅಪ್ಪೆ ಮುಂಗುಲಿ ಪೊಂಜೊವು.'
ಅಪಗಂಡ ಪನ್ಪೇರ್ 'ಯೆನ್ನ ಲೆಕ್ಕಂತಿ, ಪೊಣ್ಣು ಪೊಂಜೊವು
ತಿಂಗೊಲಡಿ ಮೀಪೆರ್ ವರ್ಷದಡಿ ಪೆದ್ಪೆರ್
ಆನ್ ಪೆದ್ಪೆರ್ ಆನ ಪೊರ್ಲು ತೂಪೆರ್ ಪೊನ್ನ ಪೆದ್ಪೆರ್ಗೆನಾ
ಪೊನ್ನು ಪೆದ್ಪೆರ್ ಪೊನ್ನ ಪೊರ್ಲು ತೂಪೆರ್ಗೆನಾ
ಪೊನ್ನ ಪೆದ್ಪೆರ್ಗೆನಾ ಪೊನ್ನ ಪೊರ್ಲು ತೂಪೆರ್ಗೆನಾ
ಯೆಂಕಾಂಡ ಸಂತಾನದ ಉತ್ತರ ಫಲ
ನೀರ್ ನಿಲೆತ್ ಬರ್ಪುಜಿಯೇ ......ಯೇ..'

೨

ಓ..ಪಂಡಿನಾ ಮಡಿವೊಡಾಂಡ
ತನ್ನ ಬೂಡುಗು ತಾನ್ ದೂರಾದ್ ಕುಲ್ಲಿಯೆರ್ ಪೊಂಜೊವು
ಒಂಜಿ ಕುಲ್ಲಿಯೆರ್ ರಡ್ಡ್ ಕುಲ್ಲಿಯರ್
ಮೂಜೆಟ್ಟ್ ಪನ್‌ಪೆರ್ 'ಮಡ್ಡೆಲ ಕರಿಯಗ್
ಬಾಲ ಮುಟ್ಟುಗು ಬರ್ಪುಂಡು
ಮೀಯೆರೆ ಪೋವೊಡು' ಪನ್ಪೆರ್ ಪೊಂಜೊವು

ಮೂಲ ತುಳು ಪದದಲ್ಲಿರುವ ರಾಗ ತಾಳ ಲಯವನ್ನು ಅನುವಾದ ಮಾಡಲಾಗದು. ಹೀಗಾಗಿ ಆ ಭಾವರಾಗವನ್ನು ಉಳಿಸಿಕೊಳ್ಳುವ ಪ್ರಯತ್ನವಾಗಿ ಅಂತಹ ಕಡೆ ... ಯೇ* ಎಂಬ ಸೂಚಿಯನ್ನು ನೀಡಲಾಗಿದೆ. 'ಯೇ' ಅಕ್ಷರವನ್ನು ರಾಗವಾಗಿ ಎಳೆದು ಹಾಡಲು ಅದು ಸೂಚನೆ.

ಕನ್ನಡ ಅನುವಾದ

ಆ...ನಾ........ಯೇ........ಯೇ........ಆ........
ಓ....ಅಪ್ಪ ಎಂದರೆ ಇದ್ದಾರೆ ನಮ್ಮ 'ಮುದ್ದ ನರಯನೆ'
ಅಬ್ಬೆ ಅಂದಾಗ 'ಅಬ್ಬೆ ಮುಂಗುಲಿ ಹೆಂಗುಸು"
ಆವಾಗ ಹೇಳುತ್ತಾರೆ ನನ್ನಂತಹ ಹೆಣ್ಣು ಹೆಂಗುಸು
ತಿಂಗಳಾಗುತ್ತಾ ಸ್ನಾನ ಮಾಡುತ್ತಾರೆ ವರ್ಷದೊಳಗೆ ಹೆರುತ್ತಾರೆ.
ಗಂಡು ಹೆರುತ್ತಾರೆ ಗಂಡು ಸೊಗಸು ನೋಡುತ್ತಾರೆ ಹೆಣ್ಣು ಹೆರುತ್ತಾರಂತೆ ಯೇ*
ಹೆಣ್ಣು ಹೆರುತ್ತಾರೆ ಹೆಣ್ಣು ಸೊಗಸು ನೋಡುತ್ತಾರೆ.....ಯೇ*
ಹೆಣ್ಣು ಹೆರುತ್ತಾರಂತೆಯಾ ಹೆಣ್ಣು ಸೊಗಸು ನೋಡುತ್ತಾರೆ......ಯೇ*
ನನಗಾದರೆ ಸಂತಾನದ ಉತ್ತರ ಫಲ
ನೀರ್ ನಿಂತು(ಗರ್ಭಕಟ್ಟಿ) ಬರುವುದಿಲ್ಲವೇ.....ಯೇ*

೨

ಓ...ಹೇಳಿದ್ದು ಹೊರಳುವ ಮೊದಲೇ
ತನ್ನ ಬೀಡಿಗೆ ತಾನು ದೂರವಾಗಿ ಕುಳಿತರು ಹೆಂಗಸು
ಒಂದು(ದಿನ)ಕುಳಿತರು ಎರಡು ಕುಳಿತರು
ಮೂರರಲ್ಲಿ ಹೇಳುತ್ತಾರೆ ಮಡಿವಾಲರ ಗುಂಡಿಗೆ
ಬಾಲದೋಷ ಬರುತ್ತದೆ
ಮೀಯಲು ಹೋಗಬೇಕು" ಹೇಳುತ್ತಾರೆ ಯೇ*

೩

ಎಡತನ ಕೈಯಿಟ್ ಮೈಲೆದ ಪಟ್ಟೆ ಸೀರೆ.
ಬಲತನ ಕೈಯಿಟ್ ಕುಕ್ಕಿನ ಕುಡಿ ತಂಬಿಲ
ಪನೆವುಲ್ಲ ತತ್ರ ಪತ್ತಿಯೆರ್ಗ್ಗೆನಾ ...
ಎಡತನ ಕೈಯಿಟ್ ಮೈಲೆದ ಪಟ್ಟೆ ಸೀರೆ.
ಬಲತನ ಕೈಯಿಟ್ ಕುಕ್ಕಿನ ಕುಡಿ ತಂಬಿಲ
ಪನೆವುಲ್ಲ ತತ್ರ ಪತ್ತಿಯೆರ್ಗ್ಗೆನಾ.
ಎಡತನ ಕೈಯಿಟ್ ಮೈಲೆದ ಪಟ್ಟೆ ಸೀರೆ.
ಬಲತನ ಕೈಯಿಟ್ ಕುಪ್ಪಿನ ಕುಡಿ ತಂಬಿಲ
ಪನೆವುಲ್ಲ ತತ್ರ ಪತ್ತಿಯೆರ್ಗ್ಗೆನಾ ...
ದುಂಬುಡು ಪಾಸಾಡಿ ಪಿರಾವುಡು ಸಂಗೀತ ಕೂಡಿಯೆರ್

೪

ಮಡ್ಯೆಲ ಕರಿಯಗ ಪೋಪೆರ್ ದ್ಯೆಯ್ಯಾರ್
ಒವ್ವೊಂಜಿ ಕರಿಯ; ಸುದ್ದದ ಕರಿಯ
ಒವ್ವೊಂಜಿ ಕರಿಯ ಮೈಲೆದ ಕರಿಯ
ಮೈಲೆದ ಕರಿಯಡ್ ಮೈಲೆ ಮಾತೆರ್
ಸುದ್ದದ ಕರಿಯಡ್ ಸುದ್ದ ನೀರ್ ಮೀಯೆರ್‌ಗೆನಾ..
ಅಡಿಯಾರ ಕಂತೆರ್ಗ್ಗೆನಾ ಮೇಲಾರ ನೆಗೆತೆರ್
ನೆಗೆಮುಲ್ಲ ಕಲ್ಲ್‌ಡ್ ಉಂತಿಯರ್ಗ್ಗೆನಾ ಪೊಂಜೊವು. ವ.....ಆ....

೫

ಓ.......... ತರೆಕುಡ್ತು ಚಂಡಿ ಪಾರಾನಗಾ....
ಅಡಿಯಾರ ಇತ್ತಿನಾ ನೀರ ಮಚ್ಚೊಲು ಮೇಲಾರ ಬರ್ಪ.
ಅಯ್ಯೊಯ್ಯೋ ಪಾಪನೇ ಉಲೊ ಉಲೋ ದೋಸನೇ
ಪಾಪ ಕಟ್ಟಿಯೆನೇ ದೋಸ ಬರ್ಪುಂಡು
ದೋಸ ಪೊರ್ಲುಂಡು
ತನ್ನ ಇಲ್ಲಡೇ ತಾನ್ ಮಾನ ಕೊಂಡೆ

೩

ಎಡದ ಕೈಯಲ್ಲಿ ಮೈಲಿಗ್ಗೆಯ ಪಟ್ಟೆ ಸೀರೆ
ಬಲದ ಕೈಯಲ್ಲಿ ಮಾವಿನ ಚಿಗುರು ತಂಬಿಲ
ಪನೆ ಛತ್ರ ಹಿಡಿದರಂತೆ .....ಯೇ*
ಎಡದ ಕೈಯಲ್ಲಿ ಮೈಲಿಗೆಯ ಪಟ್ಟೆ ಸೀರೆ
ಬಲದ ಕೈಯಲ್ಲಿ ಮಾವಿನ ಚಿಗುರು ತಂಬಿಲ
ಪನೆ ಛತ್ರ ಹಿಡಿದರಂತೆ.....ಯೇ*
ಎಡದ ಕೈಯಲ್ಲಿ ಮೈಲಿಗೆಯ ಪಟ್ಟೆ ಸೀರೆ
ಬಲದ ಕೈಯಲ್ಲಿ ಮಾವಿನ ಚಿಗುರು ತಂಬಿಲ
ಪನೆ ಛತ್ರ ಹಿಡಿದರಂತೆ....ಯೇ*
ಎದುರಲ್ಲಿ ಮೂಲದಾಳು ಹಿಂದಿನಲ್ಲಿ ಸಂಗೀತ, ಕೂಡಿದರು

೪

ಮಡಿವಾಲ ಕರಿಯಗೆ ಹೋದರು ದೈಯ್ಯಾರು
ಯಾವುದದು ಕರಿಯ(ನೀರಿನ ಗುಂಡಿ); ಶುದ್ಧದ ಕರಿಯ
ಯಾವುದದು ಕರಿಯ ಮೈಲಿಗೆಯ ಕರಿಯ
ಮೈಲಿಗೆಯ ಕರಿಯದಲ್ಲಿ ಮೈಲಿಗೆ ಕಳೆದರು
ಶುದ್ಧದ ಕರಿಯದಲ್ಲಿ ಶುದ್ಧ ನೀರು ಮೀದರಂತೆ
ಅಡಿ ಭಾಗಕ್ಕೆ ಮುಳುಗಿ ಮೇಲ್ಭಾಗಕ್ಕೆ ನೆಗೆದರು
ತೇಲುವ ಕಲ್ಲಿನಲ್ಲಿ ನಿಂತರಂತೆ....ಯೇ* ಹೆಂಗಸು ವ...ಆ...

೫

ಓ.......ಕೂದಲು ಕೊಡವಿ ಒದ್ದೆ ಹಾರಿಸಿದಾಗ.....
ಅಡಿಯಲ್ಲಿ ಇದ್ದ ನೀರ ಮೀನುಗಳು ಮೇಲ್ಭಾಗಕ್ಕೆ ಬರುತ್ತವೆ
ಅಯ್ಯೊಯ್ಯೋ ಪಾಪವೇ ಉಲೊ ಉಲೋ ದೋಷವೇ
ಪಾಪ ಕಟ್ಟಿದೆನೇ ದೋಷ ಬರುತ್ತದೆ
ದೋಷ ಹೊರುತ್ತದೆ
ತನ್ನ ಮನೆಯಲ್ಲಿ ತಾನು ಮಾನ ಕಳಕೊಂಡೆ

೬

ಕಡೆಯೆರ್ ಪೊಂಜೊವು
ಐನ್ ಕೊಂಡೆನಾ ಬೊಲೆಂತನಾ ಅರಿಯೇ
ಮೂಡಲ ಬಜ್ಜೈ ಕೊಳ್ಯೂರ ಬಚ್ಚಿರೆ
ಬಂಗ ಬಾರೆನಾ ಕೊಡಿ ಇರೆ ಲೆಪ್ಪಾಯೆರ್‌ಗೆನಾ
ಅಡಿಯಾರೆ ಇತ್ತಿನಾ ನೀರ ಮಚ್ಚೊಲು ಮೇಲಾರೆ ಬಲೆಗೆನಾ..
ಅರಿ ಪಾಡುವೆ ಅರಿತ ಪುಣ್ಯ ತೂಪೆ ಪನ್ಪೆರ್‌ಯೇ..
ಯೇ...... ಏ.............................ಆ..........
ಓ ಕಲ್ಲ್‌ಗ್ ಅರಿಲಾ ಪದರಿಯೆರ್
ಅರಿ ಪಾಡ್ದ್ ಅರಿತಾ ಪುಣ್ಯ ತೂನಗ
ಕಡೆ ಇರೆ ಕಂತ್‌ಂಡ್ ಕೊಡಿ ಇರೆ ನೆಗೆತ್‌ಂಡ್
ಅಪಗಾಂಡ ಪನ್ಪೆರ್ 'ಮಚ್ಚೊಲೆ ಬಂಜಿಡ್ ಮಚ್ಚೊಲೆ ಜಲ್ಮಿಡ್'
ಯೆನ್ನ ಬಂಜಿಡ್ ಸಾರ ಸಂತಾನದ ಫಲ
ನೀರ್ ನಿಗಿತ್ ಬರಡ್' ಪನ್ಪೆರ್‌ಗೆನಾ ಆ........

೭

ತನ್ನ ಇಲ್ಲಡೆ ತಾನ್ ಪೊಗ್ಗಿಯೆರ್
ಅಟಿಲ್ದ್ ಪೊಣ್ಣುಲ ಅಟಿಲ್ಡ್ ಉಲ್ಲೆರ್
ಎಯರದ ಪೊಣ್ಣುಲು ಎಯರಡಾಯೆರ್
ಓ...ತೆನ್ನಾಯಿ ಇಲ್ಲಡ್ ಸಿರಿಯೇ ಕನಿಲಡ್
ಬಂಗ ಬಾರೆನಾ ಕೊಡಿ ಇರೆ ಪಾಂಡ್

೮

ಇರೆ ಜಿಂಜ ಬವನಾ ಬಲಸ್‌ಂಡ್ ಪೊಂಜೊವೆಗ್
ಪೊತ್ತ ಪೊತ್ತ ಉಂಡೆರ್ ಬಗ ಬಗ ಬೆಗತೆರ್
ಅಪಗಂಡ ಪನ್ಪೆರ್ "ಕೈಕೊತ್ತು ಕಾಯೆರ್" ತಿನ್ನಗ ಪನ್ಪೆರ್
'ಅಕ್ಕೊಲು ಮುಕ್ಕೊಲು ಮೀಯೆರೆ ಬಲ್ಲಿಯೇ
ಬೇನೆದ ಕಲ್ಕ ಕೊನಿಯೆರೆ ಬಲ್ಲಿ
ಉಂದುವೇ ನೀರ್ ನಿಲೆತ್ ಬರೊಡುಗೆನಾ

೬

ರುಬ್ಬಿದರು ಹೆಂಗುಸು
ಐದು ಕುಡ್ತೆ ಬಿಳಿಯ ಅಕ್ಕಿಯೇ
ಮೂಡಣ ಅಡಿಕೆ ಕೊಳ್ಳೂರ ವೀಳ್ಯದೆಲೆ
ಬಂಗ ಬಾಳೆಯ ತುದಿ ಎಲೆ ತರಿಸಿದರು
ಅಡಿಯಲ್ಲಿ ಇದ್ದ ನೀರ ಮೀನುಗಳು ಮೇಲ್ಭಾಗಕ್ಕೆ ಬನ್ನಿಯಲ್ಲಾ
ಅಕ್ಕಿ ಹಾಕುವೆ ಅಕ್ಕಿಯ ಪುಣ್ಯ ನೋಡುವೆ ಹೇಳುತ್ತಾರೆ....ಯೇ*
ಯೇ......................ಏ......................ಆ..........................
ಓ ಕಲ್ಲಿಗೆ ಅಕ್ಕಿಯನೆ ಹರಡಿದರು
ಅಕ್ಕಿ ಹಾಕಿ ಅಕ್ಕಿಯ ಪುಣ್ಯ ನೋಡುವಾಗ
ಕಡೆ ಎಲೆ ಕಂತಿತು ತುದಿ ಎಲೆ ನೆಗೆಯಿತು
ಆವಾಗಾದರೆ ಹೇಳುತ್ತಾರೆ ಮೀನಿನ ಹೊಟ್ಟೆಯಲ್ಲಿ ಮೀನುಗಳು ಜನಿಸಲಿ
ನನ್ನ ಹೊಟ್ಟೆಯಲ್ಲಿ ಸಾವಿರ ಸಂತಾನ ಫಲ
ಗರ್ಭ ಕಟ್ಟಿ ಬರಲಿ ಹೇಳುತ್ತಾರೆ....ಯೇ* ಆ..........................

೭

ತನ್ನ ಮನೆಗೆ ತಾನು ಹೊಕ್ಕರು
ಅಡುಗೆಯ ಹೆಣ್ಣುಗಳು ಅಡುಗೆಯಲ್ಲಿ ಇದ್ದಾರೆ
ವಯ್ಯಾರದ ಹೆಣ್ಣುಗಳು ವಯ್ಯಾರದಲ್ಲಾದರು
ಓ ತೆಂಕಲ ಮನೆಯಲ್ಲಿ ಸಿರಿಯೇ ಬೆಳೆಯಲಿ
ಬಂಗ ಬಾಳೆಯ ತುದಿ ಎಲೆ ಹಾಕಲಾಯಿತು

೮

ಎಲೆ ತುಂಬ ಭೋಜನ ಬಡಿಸಿದರು ಹೆಂಗುಸಿಗೆ
ಬಿಸಿ ಬಿಸಿ ತಿಂದರು ಬಗ ಬಗ ಬೆವರಿದರು
ಅವಾಗ ಹೇಳುತ್ತಾರೆ ತಾಂಬೂಲ ಮೆಲ್ಲುವಾಗ
'ಆರುಸಲ ಮೂರುಸಲ ಮೀಯಬಾರದು
ನೋವಿನ ಕಲ್ಕ ಚಿಗುರಬಾರದು
ಇದೇ ಗರ್ಭ ಕಟ್ಟಿ ಬರಬೇಕಂತೆ....ಯೇ*

೯

ಅವ್ವೆ ನೀರ್ ನಿಲೆತ್ ಬತ್ತಂಡ್ಗೆನಾ
ಒಂಜಿ ಪೋಂಡು ಪೊಂಜೊವೆ ರಡ್ಡ್ ತಿಂಗೊಲಾಂಡ್
ಐನ್ ಆಜಿ ಏಲ್ ತಿಂಗೊಲ್ಲುಡು ಪನ್ಪೆರ್
"ಎಂಕ್ಲೇ ಮರ್ಮಲ್ ಕಡೀರ ಬಂಜಿನಾಲ್
ಬಂಜಿದಾ ಬಯಕೆ ತೀರ್ಪೊಡು' ಪನ್ಪೆರ್

೧೦

ಪರ ಕೊಡಿ ಮಾಪಾಯೆರ್ ಪೊಸ ಕೊಡಿ ಕೊರಿಯೆರ್.
ಪೂವು ಕೊನತೆರ್ ಪೂತ ಜೆಲ್ಲಿ ಪಾಡಿಯೆರ್
ಬಂಜಿದಾ ಬಾಯಿದಾ ಅರೆ ಮರೆ ಕರಿತೆರ್ಗೆನಾ
ಏಲ್ ಪೋತುಂಡು ಎನ್ಮ ತಿಂಗೊಲು ನೆರೆತ್ಂಡ್ ಯೇ .....
ಓ.....ಎನ್ಮ ಪೋತುಂಡು ಒರ್ಬ ತಿಂಗೊಲು ಆತ್ಂಡ್
ಒರ್ಬ ಪೋತುಂಡು ಪತ್ತ್ ಪನರೆ ತಿಂಗೊಲುಡು
ಅಪ್ಪೆ ಮುಂಗುಲಿ ಪೊಂಜೊವೆಗ್
ಸೆಲಿಗುಲ್ಲಾ ಮೋನೆಡ್ ಬೇನೆದಾ ಕಲ್ಪನಾ
ಬೆರಿಟ್ ಬರ್ಪುಂಡು ಬ್ರಹ್ಮ ದೇವೆರೆ ಬೇನೆನಾ ಆ......
ಬಂಜಿಡ್ ಬರ್ಪುಂಡು ಬಾಲೆದೆಚ್ಚಿದಾ ಬೇನೆನಾ ಆ..

೧೧

ಒಂಜಿ ಬೇನೆ ಬನ್ನಗಾ ...ಒಂಜಿ ಮಾಲೆ ತೆತ್ತಿಗೆನಾ ...
ರಡ್ಡ್‌ಬೇನೆ ಬನ್ನಗಾ ರಡ್ಡ್ ಮಾಲೆ ತೆತ್ತಿಗೆನಾ
ರಡ್ಡ್ ಮಾಲೆ ತೆತ್ತಿಡೇ ವರನ ಕಾರ್ ತೆರ್ಪುಂಡು
ಅಯೆಲಿ ಮುಗೆಲೀ ವರನ ಕಾರ್‌ಲಾ ತೇರ್ಪುಂಡೇ
ಮೂಜಿ ಬೇನೆ ಬನ್ನಗಾ ಮೂಜಿ ಮಾಲೆ ತೆತ್ತಿಡೇ
ಒಲ್ಲೆ ಪಾವೊರಿ ವರನ ಕಾರ್ ತೆರ್ಪುಂಡೋ
ನಾಲ್ ಬೇನೆ ಬನ್ನಾಗಾ ನಾಲ್ ಮಾಲೆ ತೆತ್ತಿಡೇ
ತವುಡು ಪುಡೆನೇ ವರನ ಕಾರ್ ತೆರ್ಪುಂಡಾ
ಆಜಿ ಬೇನೆ ಬನ್ನಗಾ ಆಜಿ ಮಾಲೆ ತೆತ್ತಿಡೇ

೯

ಅದೇ ಗರ್ಭ ಕಟ್ಟಿ ಬಂತಂತೆ.
ಒಂದು ಹೋಯಿತು ಹೆಂಗುಸೇ ಎರಡು ತಿಂಗಳಾಯಿತು
ಐದು ಆರು ಏಳು ತಿಂಗಳಲ್ಲಿ ಹೇಳುತ್ತಾರೆ
'ನಮ್ಮ ಸೊಸೆ ಮೊದಲ ಬಸುರಿ
ಹೊಟ್ಟೆಯ ಬಯಕೆ ತೀರಬೇಕು' ಹೇಳುತ್ತಾರೆ.

೧೦

ಹಳೆ ಸೀರೆ ಕಳಚಿಸಿದರು ಹೊಸ ಸೀರೆ ಕೊಟ್ಟರು
ಹೂ ತಂದರು ಹೂವಿನ ಜೆಲ್ಲಿ ಹಾಕಿದರು
ಹೊಟ್ಟೆಯ ಬಾಯಿಯ ಬಯಕೆ ತೆಗೆದರು
ಏಳು ಹೋಗಿದೆ ಎಂಟು ತಿಂಗಳು ತುಂಬಿತು ಯೇ*...
ಓ......ಎಂಟು ಹೋಯಿತು ಒಂಭತ್ತು ಆಯಿತು
ಒಂಭತ್ತು ಹೋಯಿತು ಹತ್ತು ಹೇಳಲು ತಿಂಗಳಲ್ಲಿ
ಅಬ್ಬೆ ಮುಂಗುಲಿ ಹೆಂಗುಸಿಗೆ
ನಗು ತುಂಬಿದ ಮೊಗದಲ್ಲಿ ನೋವಿನಾ ಕಪಟ
ಬೆನ್ನಿನಲ್ಲಿ ಬರ್ತದೆ ಬ್ರಹ್ಮ ದೇವರ ನೋವು...ಆ......
ಹೊಟ್ಟೆಯಲ್ಲಿ ಬರುತ್ತದೆ ಮಗುವಿನಿಚ್ಚೆಯ ನೋವು ಆ...

೧೧

ಒಂದು ನೋವು ಬಂದಾಗ ...ಒಂದು ಮಾಲೆ ಮೊಟ್ಟೆಯಂತೇ.*
ಎರಡನೇ ನೋವು ಬಂದಾಗ ಎರಡು ಮಾಲೆ ಮೊಟ್ಟೆಯಂತೆ
ಎರಡು ಮಾಲೆ ಮೊಟ್ಟೆಯಲ್ಲಿ ಲಕ್ಷಣ ತಿಳಿಯುತ್ತದೆ
ಅಯೆಲಿ ಮುಗಲೀ ಲಕ್ಷಣ ತಿಳಿಯುತ್ತದೆ
ಮೂರನೇ ನೋವು ಬರುವಾಗ ಮೂರು ಮಾಲೆ ಮೊಟ್ಟೆಯಲ್ಲಿ ಯೇ*
ಒಲ್ಲೆ ಪಾವೊರಿ ಲಕ್ಷಣ ತಿಳಿಯುತ್ತದೆ.
ನಾಲ್ಕು ನೋವು ಬಂದಾಗ ನಾಲ್ಕು ಮಾಲೆ ಮೊಟ್ಟೆಯಲ್ಲಿ
ತವುಡು ಮಡೆ ಲಕ್ಷಣ ತಿಳಿಯುತ್ತದೆ
ಆರು ನೋವು ಬಂದಾಗ ಆರು ಮಾಲೆ ಮೊಟ್ಟೆಯಲ್ಲಿ

ಕೇರೆ ಮಾರಾಜೆ .....ವರನ ಕಾರ್‌ಲಾ ತೆರ್ಪುಂಡೋ
ಏಲ್ ಬೇನೆಲಾ ಬನ್ನಗಾ ಖಿಲ್ ಮಾಲೆ ತೆತ್ತಿಡೇ
ಕರಿಯ ಸಂಕಪಾಲೆ ಬೊಳಿಯ ಸಂಕಪಾಲೆ
ವರನ ಕಾರ್ ತೆರ್ಪುಂಡೋ.

ಭಾಗ ೨

ಎಂಕಡತ ಮೂಲೆ ಮಾನೆ
ವಾವ್ವ ದಿಕ್ಕ್‌ಡ್ ಉಲ್ಲೆಲಾ
ಕಾರ್ಯದ ನಿಲೆಟೇ ಕಾರ್ಯದ ಸಂಕಲಮ್ಮೆ
ಅಕಲೇ ತಂಗಡಿ ಪನ್ನಗಾ
ಪಲ್ಲಿ ತೋಕುಡು ಬಾಕುಡೆದಿ
ತಾರಿ ಪಡ್ಪು ಕಲೆಯೆಲ್ ತಾರಿನೊಲಿ ಲೆಪ್ಪಾಯೆಲ್
ತೆಲಿ ದೊಂಬುಗು ಪಾಡಿಯೆಲ್ ದಯ ದೊಂಬು ದೆತ್ತೆಲಾ
ಸನ್ನ ಸನ್ನ ತಿಗ್‌ರಿಯಲ್ ಪಜೆಗ್ ನಡಿಲಾ ಪಾಡಿಯೆಲಾ
ಮಗ್‌ತೊಂಜಿ ಅಂಗಾರೆ ಬಾರೊಡು
ಪಜೆಲಾ ಕರೆಲಾ ಕಟ್ಟಿಯಲ್
ಒಂಜಿ ಕರೆ ಪೋತುಂಡು ಸರ್ಪ ಜಿಡೆ ಲೆಕ್ಕ
ಸರ್ಪ ಜೆಡೆ ಲೆಕ್ಕ ಪಜೆತ ತರೆ ಲೆಕ್ಕ.
ಪಜೆಲಾ ಮಡ್ತ್ ಕಟ್ಟಿಯೆಲ್ಲ್ ಕೊಡಂಚೀರ ಬೂಡುಗು ಬರುವಲಾ
'ಪಜೆ ಬೋಡೆ ಪಜೆ ಬೋಡೆ ನೇಲ್ಯ ಬೊಲ್ಯೇರೇ.....'

೨

ಕೊಡಂಚಿರ್ ಬೂಡುಗು ಬನ್ನಗ
ಇನಿಪನ ಪುಂಚೊಡು. ಇನಿಪನ ಪುಂಚೊಡು
ಮನಿಪನಾ ಮನಿ ನಾಗೆ.
'ಬಾಲೆಲಾ ಬುಲಿಪುನ ಸರವೋಲು, ಓಲುಗೆ ಕೇನುಂಡೆ'
ಪಜೆಲಾ ದೀಯಲು ಬಾಲೆನ್ ಪತ್ತೆರೆ ಪೋಪೊಲೇ
'ಯೆನನೇ ಪತ್ತಾಡ ಯೆನನೇ ಮುಟ್ಟಾಡ
ನಿನ್ನ ಸಂತೇಸಿನ್ ಪತ್ತ್‌ಲಾ ನಾಗನಾರಾದನೆ ಮಲ್ಪುಲಾ
ನಾಗ ಕಲ್ಲ್ ಪಾಡ್‌ಲಾಂದ್'

ಕೇರೆ ಮಾರಾಜೆ ಲಕ್ಷಣ ಕೂಡ ತಿಳಿಯುತ್ತದೆ
ಏಳು ನೋವು ಬಂದಾಗ ಏಳು ಮಾಲೆ ಮೊಟ್ಟೆಯಲ್ಲಿ
ಕರಿಯ ಸಂಕಪಾಲೆ, ಬಿಳಿಯ ಸಂಕಪಾಲೆ
ಲಕ್ಷಣ ತಿಳಿಯುತ್ತದೆ.

ಭಾಗ ೨

ಎಂಕಡತ ಮೂಲದ ಜೀತದಾಳು
ಯಾವ ದಿಕ್ಕಿನಲ್ಲಿ ಇದ್ದಾನಾ
ಕಾರ್ಯದ ನೆಲೆಯಲ್ಲಿ ಕಾರ್ಯದ ಸಂಕಲಪ್ಪ
ಅವರ ತಂಗಿ ಎಂದಾಗ
ಪಳ್ಳಿ ತೋಕುಡು ಬಾಕುಡೆದಿ
ತಾಳೆ ಮರದ ಬಯಲು ಕಳೆದಳು ತಾಳೆಯ ಗರಿ ತೆಗೆಸಿದಳು
ಎಳೆ ಬಿಸಿಲಿಗೆ ಹಾಕಿದಳು ತಣ್ಣನೆ ಬಿಸಿಲಿಗೆ ತೆಗೆದಳು
ಸಣ್ಣದಾಗಿ ಸೀಳಿದಳು ಚಾಪೆಗೆ ನಡೆ ಹಾಕಿದಳು
ಮಗದೊಂದು ಮಂಗಳವಾರ ವಾರದಲ್ಲಿ
ಚಾಪೆಯ ಅಂಚು ಕಟ್ಟಿದಳು
ಒಂದು ಕಡೆ ಹೋಯಿತು ಸರ್ಪ ಹೆಡೆಯಂತೆ
ಸರ್ಪ ಹೆಡೆಯಂತೆ ಹುತ್ತದ ತುದಿಯಂತೆ
ಚಾಪೆ ಮಡಚಿ ಕಟ್ಟಿ ಕೊಡಂಚೀರ ಬೀಡುಗೆ ಬರುವರು
'ಚಾಪೆ ಬೇಕೇ...ಚಾಪೆ ಬೇಕೇ.. ದೊಡ್ಡ ಬಿಳಿಯರೇ'

೨

ಕೊಡಂಚಿರ್ ಬೀಡಿಗೆ ಬರುವಾಗ'
ಇನಿಪನ ಹುತ್ತದಲ್ಲಿ ಇನಿಪನ ಹುತ್ತದಲ್ಲಿ
ದೈವ ರೂಪಿ ಮಣಿ ನಾಗ
ಮಗೊವೊಂದು ಅಳುತ್ತಿದೆ ಸ್ವರ ಎಲ್ಲಿ ಎಲ್ಲಿ ಕೇಳಿಸುತ್ತಿದೆ?
ಚಾಪೆ ಇಟ್ಟಳು ಮಗುವನ್ನು ಎತ್ತಲು ಹೋದಳು
'ನನ್ನನ್ನು ಎತ್ತದಿರು ನನ್ನನ್ನು ಮುಟ್ಟದಿರು
ನಿನ್ನ ಸಂತಾನವನ್ನು ಹಿಡಿದು ನಾಗನ ಆರಾಧನೆ ಮಾಡು
ನಾಗ ಕಲ್ಲು ಹಾಕು ಎಂದು

೩

ಮನಿಪನ ಮನಿ ನಾಗೆ ಮಾಯೆ ಆಯೆನಾ..
ಪಜೆಲಾ ಮಡ್ತ್ ಕಟ್ಟಿಯಲ್ ಕೊಡಂಚೀರ ಬೂಡು ಕರಿಯಲ್
ಮಜಲ್ ಗಡಿ ಊರಿಯಲ್
ಮೂಡಲ ಬೂಡುಗು ಬರುವಲ್
ಮೂಡಲ ಬೂಡು ಕರಿಯಲ್
ಪಡ್ಡಲ ಬೂಡುಗು ಬರುವಲ್
ಪಡ್ಡಲ ಬೂಡು ಕರಿಯಲ್
ಮುಳ್ಳುದ ಕರಿಯ ಕಡತಾಲೆ
ಕೊಡೆಲ್ ಮುಡಂಜಲ ಕರಿಯಾಲೆ
ಐಲ ಕುದಿಂಪಿಲ್ ಕರಿಯಾಲೆ.
ಮುಟ್ಟ ಬರೆಂಚಿಲ್ ಕರಿಯಾಲೆ.
ಅಡ್ಕದ ನೆಲೆಕ್‌ಲಾ ಬರುವಾಲೆ.
ಗೋಲಿದಗೆಲ್ಲ್ ಪೊಲಿತಾಲೆ.
ಪಜೆನ್ ತೂಕುಡಿಯಾಲ್
ಉರ್ಮಿ ಕಟ್ಟಗ್ ಪೋಯಲ್
ತರೆಕ್ ಮೈಯಿಕ್ ಮೀಯಲ್

೪

"ಯಾನ್‌ಂದ್ ಪಿಂಬರೋ ಯಾನ್‌ಂದ್ ಪಿನಯರೋ
ಕೊಡಂಚಿರ ನಾಗೆಲಾ ಎರ್ಮೆಲಾ ಬಿರ್ಮೆರ್‌ಲಾ
ಎರ್ಮೆಲಾ ಬಿರ್ಮೆರ್‌ಲಾ ಕೊಡಂಚೀರ ನಾಗೆಲಾ
ನಿಕುಲು ಉಲ್ಲರ್‌ಡಾ ಎನನ್ ಮಾಯಲಾ ಮಲ್ಪೊಡು.'
ಬಿರ್ಮೆರೆ ಬರ ಬವ್ವೊಡು ಮಾಯಗೊ ಪೋಯಲ್

೩

ದೈವ ರೂಪಿ ಮಣಿ ನಾಗ ಮಾಯ ಆದನೇ.....
ಚಾಪೆ ಸುತ್ತಿ ಕಟ್ಟಿದಳು ಕೊಡಂಚೇರ್ ಬೀಡು ದಾಟಿದಳು
ಮಜಲು ಗಡಿ ಊರಿದಳು
ಮೂಡಲ ಬೀಡುಗೆ ಬರುವಳು
ಮೂಡಲ ಬೀಡು ದಾಟಿದಳು
ಪಡುಮನೆ ಬೀಡುಗೆ ಬರುವಳು
ಪಡುಮನೆ ಬೀಡು ದಾಟಿದಳು
ಮುಳ್ಳಿನ ಕರಿಯ ದಾಟಿದಳು
ಕೊಡೆಲ ಮುಡಂಜಲ ಕಳೆದಳೇ
ಐಲ ಕುದಿಂಪಿಲ ಕಳೆದಳೇ
ಮುಟ್ಟ ಬಾಳಿಕೆ ಮನೆ ಕಳೆದಳು
ಅಡ್ಡ ನೆಲೆಗೆ ಬರುವಳೇ
ಆಲದ ರೆಂಬೆ ಮುರಿದಳೇ
ಚಾಪೆಯನ್ನು ತೂಗು ಹಾಕಿದಳು
ಉರ್ಮಿ ಕಟ್ಟಗೆ ಹೋದಳು
ತಲೆಗೆ ಮೈಗೆ ಮಿಂದಳು

೪

"ನಾನೆಂದು ಅರಿತಿರೆ? ನಾನೆಂದು ತಿಳಿಯರೇ
ಕೊಡಂಚಿರ್ ನಾಗನೂ ಎಮ್ಮೆಯೂ ಬಿರ್ಮರೂ
ಎಮ್ಮೆಯೂ ಬಿರ್ಮರೂ ಕೊಡಂಚೀರ ನಾಗನೂ
ನೀವು ಇದ್ದರೆ ನನ್ನನ್ನು ಮಾಯ ಮಾಡಬೇಕು
ಬಿರ್ಮೆರ ಬರ ಬವ್ವದಲ್ಲಿ ಮಾಯೆಗೆ ಹೋದಳು

ಭಾಗ ೩

ಒಂಜ ಕೊಡಂಚಿರ್‌ಡೇರ್ ಕೊಂಡು ತಾಂಕಿನಾ
ಕೊಡಂಚೀರ ನೆಲಟ 'ಕೊಂಡದನಕುಲು'
ಒಂಜ ಕೊಡಂಚಿರಡೇರ್ ಕೊಂಡು ತಾಂಕಿನಾ
ಅಡ್ಕದ ನೆಲಟ್ 'ಕುಂಜದನಕುಲು'
ಒಂಜ ಕೊಡಂಚಿರಡೇರ್ ಕೊಂಡು ತಾಂಕಿನಾ
ಅಪೆದನಕುಲು ಕೊಂಡುದು ನಕುಲು ತಾಂಕಿಯೆರ್
ಒಂಜ ಕೊಡಂಚಿರಡೇರ್ ಕೊಂಡು ತಾಂಕಿನಾ
ಬಡಜದ ನೆಲಟ್ ಕಿನ್ನದನಕುಲು
ಒಂಜ ಕೊಡಂಚಿರಡೇರ್ ಕೊಂಡು ತಾಂಕಿನಾ
ಕೋನಂದನಕುಲು ಕೊಂಡು ತಾಂಕಿನೇ
ಒಂಜ ಕೊಡಂಚಿರಡೇರ್ ಕೊಂಡು ತಾಂಕಿನಾ
ಪಡೆದನಕುಲು ಕೊಂಡು ತಾಂಕಿನೇ
ಪಂಚರಂಬಿಲ ಕಟ್ಟಿಯೆರ್ ಬೀರ ತಂಬಿಲ ಕರಿತೆರ್
ಮಾಡೊಗು ಮಿತಾಯೆರ್ ಅರಿ ಪದರಿಯೆರ್..
ಒಂಜ ಕೊಡಂಚಿರಡೇರ್ ಕೊಂಡು ತಾಂಕಿನಾ
ಸೋಂದನಕುಲು ಕೊಂಡದನಕುಲು ತಾಂಕಿನೇ

⌘⌘⌘

ಭಾಗ ೩

ಒಂದು ಕೊಡಂಚೀರಡರು(ಕೊಡಂಚೀರ ದಿರಡರು?)ಕೊಂಡು ಸಾಕಿದಾ
ಕೊಡಂಚೀರ್ ನೆಲದಲ್ಲಿ ಕೊಂಡದನವರು
ಒಂದೋ ಕೊಡಂಚೀರ ದಿರಡರು ಕೊಂಡು ಸಾಕಿದಾ
ಅಡ್ಕದ ನೆಲದಲ್ಲಿ 'ಕುಂಜದನವರು'
ಒಂದು ಕೊಡಂಚೀರ ದಿರಡರು ಕೊಂಡು ಸಾಕಿದಾ
'ಅಪೆದನಕುಲು' ಕೊಂಡು ಸಾಕಿದಾ
ಒಂಜ ಕೊಡಂಚೀರ ದಿರಡರು ಕೊಂಡು ಸಾಕಿದಾ
ಬಡಜದ ನೆಲೆಯಲ್ಲಿ ಕಿನ್ನದನವರು
ಒಂಜ ಕೊಡಂಚೀರ ದಿರಡರು ಕೊಂಡು ಸಾಕಿದಾ
ಕೋನಂದನವರು ಕೊಂಡು ಸಾಕಿದಾ
ಒಂಜ ಕೊಡಂಚೀರ ದಿರಡರು ಕೊಂಡು ಸಾಕಿದಾ
ಪಡೆದನವರು ಕೊಂಡು ಸಾಕಿದಾ
ಪಚ್ಚರಂಬಿಲ ಕಟ್ಟಿದರು ಬೀರ ತಂಬಿಲ ಮುಗಿಸಿದರು
ಮಾಡಕ್ಕೆ ಏರಿದರು ಅಕ್ಕಿ ಹರಡಿದರು
ಒಂದು ಕೊಡಂಚೀರ ದಿರಡರು ಕೊಂಡು ಸಾಕಿದಾ
ಸೋಂದನವರು ಕೊಂಡದನವರು ಕೊಂಡು ಸಾಕಿದರು

⌘⌘⌘

ಕೊಡಂಚೀರಡರು=ಕೊಡಂಚೀರ ದಿರಡರು
ದಿರಡರು ಎನ್ನುವ ಜನಾಂಗ ಸೂಚಕ ಪದದ ಜೊತೆ ಅವರ ವಾಸದ ಪ್ರದೇಶದ ಹೆಸರೂ ಇರುವುದು ಗಮನಿಸಬೇಕಾದ ವಿಷಯ.

ೞ

ಬಿರ್ಮೆರ ಸಂಧಿ ೩

ಹಾಡಿದವರು : ಕರಿಯ, ಜಾತಿ: ನಲ್ಕೆ, ಬಜೆ : ಬಾಗ್ಯೆಟ್ಟಿ ಬನ್ನಾಯ
ಪ್ರಾಯ ೬೮; ಪೊಸೊಳಿಕೆ, ಧರ್ಮಸ್ಥಳ
೧೮.೪.೨೦೦೬ ಮತ್ತು ೧೯.೪.೨೦೦೬

"ಬಿರ್ಮೆರ್‌ಗ್ ತಂದೆ ತಾಯಿ ಇಲ್ಲ. ಹುತ್ತದಿಂದ ಉದಿಸಿದವರು ಬಿರ್ಮೆರ್ ಅಂದರೆ ಸ್ತ್ರೀ ಮತ್ತು ಪುರುಷ ಶಕ್ತಿ."

ಈ ಸಂಧಿಯನ್ನು ಧರ್ಮಸ್ಥಳದಲ್ಲಿ ಸಂಗ್ರಹಿಸಲಾಗಿದೆ. ಕರಿಯ ತನ್ನ ವಯಸ್ಸು ೬೮ ಎಂದು ಹೇಳಿದ್ದು ಒಂದು ಅಂದಾಜಿನಲ್ಲಿ. ಜನ್ಮ ದಾಖಲೆ ಇಲ್ಲದ ಆತ ೬೮ ಎಂದು ಹೇಳುವುದನ್ನು ರೂಢಿಸಿದ್ದ. ವಯಸ್ಸು ೬೮ಕ್ಕಿಂತ ಹೆಚ್ಚು ಆಗಿರಬಹುದು ಎಂದು ಆತನ ಕುಂದಿದ ದೇಹ ತೋರಿಸುತ್ತಿತ್ತು. ಆದರೆ ಸಂಧಿ ಹೇಳುವಾಗ ಮಾತ್ರ ಆತನ ಚೈತನ್ಯ ಯುವಕನಂತಿತ್ತು. ಶ್ರದ್ಧೆ ಪುಟಿಯುತ್ತಿತ್ತು. ಆತ ನರ್ತಿಸಿ, ಅಭಿನಯಿಸಿ ಸುಶ್ರಾವ್ಯವಾಗಿ ಸಂಧಿ ಹಾಡಿದ್ದ. ಬಾಣದಲ್ಲಿ ಭತ್ತದ ಬೀಜದ ಮುಡಿಯನ್ನು ಎತ್ತುವ ಅಭಿನಯವನ್ನು ಸೊಗಸಾಗಿ ಮಾಡಿದ್ದ. ಮುಂದೆ ಕ್ಷೇತ್ರಕಾರ್ಯಗಳಲ್ಲಿ ನಾನು ನೋಡಿದ ಆಚರಣೆಗಳಿಗಿಂತಲೂ ಆತನ ಅಭಿನಯವೇ ಹೆಚ್ಚು ಸೊಗಸಾಗಿತ್ತು.

ಇಂದಿನ ಪೀಳಿಗೆಯವರು ಶ್ರದ್ಧಾ ಭಕ್ತಿಯ ಕಲೆಯನ್ನು ವ್ಯಾಪಾರದ ಸರಕಾಗಿಸಿ ಶ್ರದ್ಧೆ ಭಕ್ತಿ ಇಲ್ಲದೆ, ಪರಂಪರೆಯ ಮೌಲ್ಯವನ್ನು ಕಡೆಗಣಿಸುತ್ತಿದ್ದಾರೆ ಎಂಬ ಖೇದವನ್ನು ಆತ ಹೊರಗೆಡಹಿದ್ದ. ಗೋವಿಂದ ಪೈ ಸಂಶೋಧನಾ ಕೇಂದ್ರದಲ್ಲಿ ಆತನ ಬಂಧುವೊಬ್ಬ ನೀಡಿದ ಬಣ್ಣಗಾರಿಕೆಯ ಚಿತ್ರ ತೋರಿಸಿ ಬೇಸರ ಪಟ್ಟು ಪ್ರತಿಕ್ರಿಯಿಸಿದ: "ಮಾಹಿತಿ ಪಡೆಯುವವರಿಗೆ ಸರಿಯಾದ ಮಾಹಿತಿ ನೀಡಬೇಕು"

ಅವನ ಅನಂತರದ ಅವನ ಬಳಗದ ಪೀಳಿಗೆ ಕೂಡ ಬಿರ್ಮೆರ್ ಬಣ್ಣಗಾರಿಕೆಯಲ್ಲಿ ಮತ್ತು ಆವೇಶದಲ್ಲಿ ಪದ್ಧತಿಯನ್ನು ಅನುಸರಿಸುವುದಿಲ್ಲ. ಅವರಲ್ಲಿ ಶ್ರದ್ಧೆಯೂ ಉಳಿದಿಲ್ಲ ಎನ್ನುವ ನೋವನ್ನು ಹೇಳಲು ಅವನು ಮರೆಯಲಿಲ್ಲ.

ಈ ಸಂಧಿಯನ್ನು ದೈವ ಮಾಧ್ಯಮನೇ ಹಾಡುತ್ತಾನೆ. ಒಟ್ಟು ೧೬ ಸಂಧಿ ಇದೆ. ೧೬ ಬಾರಿ ವಸಯ(ಆವೇಶ) ಇದೆ. ವಿರಮಿಸಿ ಆವೇಶ ಆಗುವಾಗ ಹಾಡುವ ಬೀರ

(ಹೊಗಳಿಕೆ)ವನ್ನು ಸಂಧಿ ಎನ್ನುತ್ತಾರೆ. ಕರಿಯನ ಪ್ರಕಾರ ನೇಮ ಮಾಡಿ ಬೀರ ಹೇಳುವುದು ಅಂದರೆ ದೈವವನ್ನು ಹೊಗಳುವುದು. ಮುನಿದವಗೆ ಮೂರುದಿನ ನೆನದವಗೆ ಮುನ್ನೂರು ದಿನ ಬಾಲಿಸುತ್ತೇನೆ ಎನ್ನುವ ಸತ್ಯಗಳು ಬಿರ್ಮೆರ್ ಮತ್ತು ಪರಿವಾರ ದೈವಗಳು.

ಈ ಬೀರದಲ್ಲಿ ಬೇಲೂರು, ಬೆಲ್ಗಾಮ್ ಪಟ್ಟೆಯ ಪ್ರಸ್ಥಾಪ ಬರುತ್ತದೆ. ಬೇರೆ ದೈವ ಗಟ್ಟ ಇಳಿದರೂ ಬೆರ್ಮೆರನ್ನು ಗಟ್ಟ ಇಳಿಯಲು ಕುಕ್ಕೆ ಸುಬ್ರಾಯ ದೇವರು ಬಿಡುವುದಿಲ್ಲ. ಆಗ ಬಂಗಾಡಿ ಗಟ್ಟ ಇಳಿದು ಬಂದವರು ಬಿರ್ಮೆರ್.

ಕರಿಯನ ಪ್ರಕಾರ ಬಿರ್ಮೆರ ಪಾತ್ರಿಯ ರೂಪ : ಬಿರ್ಮೆರ್‌ಗೆ ಸಿರಿ ಮುಡಿ(ತಲೆ ಪಟ್ಟಿ) ಅಡಿಕೆ ಹಾಲೆಯಿಂದ ತಯಾರಿಸಬೇಕು. ಅಥವಾ ಬೆಳ್ಳಿಯದು. ಬೆಳ್ಳಿಯ ಸಿರಿ ಮುಡಿಯಲ್ಲೂ ಹಾವು ಹೆಡೆ ಬಿಚ್ಚಿರಬೇಕು. ತೆಂಗಿನ ಎಳೆ ಗರಿ–ಸಿರಿ ಒಲಿ ಆಗುವುದಿಲ್ಲ.

ತುಳು ಮೂಲ

ಸಂಧಿ ೧

ಆ... ಆ...ಯೇ... ಯೇ ಲಾ ಯೇ ಒಲೆನ ಕುಂಡ ಯೇ
ಒಲೆ ಕುಂಡ ಕುತ್ತಿಕುಂಜೆರ್‌ಗೆನಾ
(ಹಾಡಿನ ವೇಗ ಹೆಚ್ಚುತ್ತದೆ)

ಕಂಚಿ ಕರಿಯೊಡು ಮುದ್ದು ದೇಸೊಡು ಮುಡಿ ಚವಲೊಡು
ಇಡಿ ಪಿಂಗಾರೊಡು ಮಡಿ ಕಲೆವೊಂದು ಊ ....(ರಾಗ ಎಳೆಯುತ್ತಾನೆ)
ಒಕ್ಕಯಿ ಮಲ್ಲಿಗೆಡ್ ಊ
ಪೊರಂಪಾಯಿದ ಕೇದಗೆಡ್ ಯೇ .....
ಸಾಪೊಂದ ಬೂತೊಲು
ಉದಿಪನಾಯೆರ್ ಗೆ ನಾ .... ಆ.... ಏ.... ಏ... ಏ....
ಪಾಪೆಗ್ ಸರಿಯಾಯಿ ನೇಮ ಆಂಡ್ ಯೇ

ಸಂಧಿ ೨

ಕಂಚಿ ಕಡಂಗಿಡ್ ಉದ್ಯಬೆಂದರ್
ಮುಡಿ ಚವಲಂದ ಬೂತೊಲುಯೇ ಯೇ ಊ ....
ಓ ಪಟ್ಟ ಪರಕೆಡ್ ಬಾವನದ ಬೆಡಿ ಪುಡಪಾದೆರ್ ....
ಎಡತ್ತ್‌ಂಡ್ ಉಂಡೇ ಎಲ್ಪತ್ತ್ ಏಲ್ ಕೋಟಿ ನಾಗೆರ್‌ಕುಲ್
ಬಲತ್ತ್‌ರ್ದ್ ಉಂಡು ಎಲ್ಪತ್ತ್ ಏಲ್ ಕೋಟಿ ಪಾವುಲು
ಕೊಂಡು ಉದ್ಯ ಬೆಂದೆರ್ .... ಆ.... ಏ.... ಆ..... ಏ....
ಪಾಪೆಗ್ ಸರಿಯಾಯಿ ನೇಮ ಆಂಡ್‌ಯೇ

ಕನ್ನಡ ಅನುವಾದ

ಸಂಧಿ ೧

ಆ....ಆ....ಯೇ....ಯೇ...ಲಾ.....ಆವಾಹನೆ ಗೊಂಡ...ಯೇ*
ಆವಾಹನೆ ಗೊಂಡರು ಕುತ್ತಿ ಕುಂಜರು ಅಂತ ಯೇ*
(ಹಾಡಿನ ವೇಗ ಹೆಚ್ಚುತ್ತದೆ)

ಕಂಚಿ ಕರಿಯದಲ್ಲಿ ಮುದ್ದು ದೇಶದಲ್ಲಿ ಹೆಡೆಯ ಕೂದಲಲ್ಲಿ
ಇಡಿ ಪಿಂಗಾರದಲ್ಲಿ ಶುದ್ಧ ಆಗಿ ಊ....(ರಾಗ ಎಳೆಯುತ್ತಾನೆ
ಒಂದು ದಳ ಮಲ್ಲಿಗೆಯಲ್ಲಿ ಊ
ಮೊಣಕಾಲುದ್ದ ಕೇದಗೆಯಲ್ಲಿ ...ಯೇ*.
ಅನುಗ್ರಹಿಸುವ ಭೂತಗಳು
ಉದಯವಾದರಂತೆ ನಾ.....ಆ....ಆ...ಏ...ಏ.....
ರೂಪಕ್ಕೆ ಸರಿಯಾದ ನೇಮ ಆಯಿತು ಯೇ*

ಸಂಧಿ ೨

ಭೂಮಿಯಡಿಯಿಂದ ಉದಿಸಿಬಂದರು
ಹೆಡೆ ಕೂದಳ ಭೂತಗಳು ಯೇ* ಊ...
ಓ ಹರಕೆಯಲ್ಲಿ ಗೌರವದ ಸಿಡಿಮದ್ದು ಸಿಡಿಸಿದರು
ಎಡಗಡೆಯಲ್ಲಿ ಇದೆ ಎಪ್ಪತ್ತೇಳು ಕೋಟಿ ನಾಗಗಳು
ಬಲಗಡೆಯಲ್ಲಿ ಇದೆ ಎಪ್ಪತ್ತೇಳು ಕೋಟಿ ಹಾವುಗಳು
ಜೊತೆಗೆ ಉದಿಸಿ ಬಂದರು ಆ ..ಏ....ಅ...ಏ....
ರೂಪಕ್ಕೆ ಸರಿಯಾದ ನೇಮ ಆಯಿತು ಯೇ*

ಸಂಧಿ ೩

ಎಂಕ್ಲೆಗಾಂಡ ಗಟ್ಟ ಜಪ್ಪೊಡೇ ಕನ್ಯ ತರೆಪರೆ
ದಿಕ್ಕ್‌ಬೊಡು ದಿನ ಮನ ವೊಂದಿಪ್ಪೊಡು ...ಈ
ಗಟ್ಟ ಜಪ್ಪೊಡೇ ಕನ್ಯ ತರೆಪರೆ ಓ ...
ದಿಕ್ಕ್‌ಡೆ ದಿನ ಮನ ಉಂಡು
ಒರ ಕೆಲ್ಯ ಮುರೆ ಕಲಿ ಕೊರ್ದು ಕಲ್ಯ ಮೊರೆ ತೆಲಿ ಕೊರ್ದು
(ಹಾಡುವ ವೇಗ ಹೆಚ್ಚುತ್ತದೆ)
ಗಡ್ಡಕಳೆದ್ ಪನಿಯರ್ದನ ಮಲ್ಪೆರೆಗೇ
ಗಡ್ಡಕಳೆವರೆ ಪನಿಯರ್ದನ ಮಲ್ಪರೆ
ನಮ್ಮ ರಾಜ್ಯೊಡು ಏರ್ ಉಲ್ಲೆರ್ ಮಾನೆರ್‌ಯೇ
ಗಟ್ಟದ ಮಿತ್ತ್‌ಡ್ ಉಲ್ಲೆರ್ ಕನ್ನಡಿ ಕಲಸುಮಗೆ
ಓಲೆದ ಒಕ್ಕಣೆ ಬಾಯಿಡ್ ಪಾಡೊಡು
ಬಾಯಿದ ಒಕ್ಕಣೆ ಓಲೆಡ್ ಪಾಡೊಡು ಓ.... ಏ....
ಬರವುದಾ ಓಲೆ ಕಾಡಾವೊಡು ಮಾನಿ ಏ.... ಓ....
ಪಾಪೆಗ್ ಸಿರಯಾಯಿ ನೇಮ ಆಂಡ್ ಯೇ

ಸಂಧಿ ೪

ಬರೆಯಿ ಓಲೆಗ್ ಕಾಡಾಯಿ ಮಾನೆಗ್
ನೀರ ಬಟ್ಟಲ್ ಬಾಲ್ ಸೂಡಿ ಪತ್ತೊಂದು ಬರುವೆ ಕನ್ನಡಿ ಕಲಸು ಮಗೆ ಓ ...
ಗಡ್ಡ ಕಳೆವರೆ ಪಯರ್ದನ ಪಡೆಯರೆ ಬಿನ್ನಂದ ಕರಿಯೆ
ಮುಡಾಯಿ ತುಟ್ಟಿ ಕೆರೆ ನಡೆ ಪೋಯೆರ್
ಬೊಲ್ಯ ಪಟ್ಟೆ ಕಂಬೊಲಿ ಕರಿಯ ಪಟ್ಟೆ ಹಾಸಿದೆರ್
ಅರೆಯೆರ್
ಪಂಚಲೆ ಪತ್ತಿಯೆರ್ ಬಲ ಗೆನ್ನೆ ಉರ್ದಿಯೆರ್

ಸಂಧಿ ೩

ನಮಗಾದರೆ ಗಟ್ಟಿ ಇಳಿಯಬೇಕ್ಕು ಕನ್ಯ ಸವೆಸಲು(?)
ದಿಕ್ಕು ಬೇಕು ದಿನಮನ ಒಂದಿರಬೇಕು ಈ
ಗಟ್ಟಿ ಇಳಿಯಬೇಕು ಕನ್ಯ ಸವೆಸಲು
ದಿಕ್ಕಿನಲ್ಲಿಯೇ ದಿನ ಇದೆ.
ಒಮ್ಮೆ ಕಡ್ಯದ ನೊರೆ ಕಲಿ(ಕಳ್ಳು) ಕೊಟ್ಟು ಮಡಕೆಯ ತೆಲಿ(ಗಂಜಿ) ಕೊಟ್ಟು
(ಹಾಡುವ ವೇಗ ಹೆಚ್ಚುತ್ತದೆ)
ಗಡ್ಡ ತೆಗೆದು ಶುದ್ಧ ಮಾಡಲಂತೆ
ಗಡ್ಡ ಕಳೆಯಲು ಶುದ್ಧ ಮಾಡಲು
ನಮ್ಮ ರಾಜ್ಯದಲ್ಲಿ ಯಾರಿರುವರು
ಗಟ್ಟದ ಮೇಲೆ ಇದ್ದಾರೆ ಕನ್ನಡಿ ಭಂಡಾರಿ*
ಓಲೆಯ ಒಕ್ಕಣೆ ಬಾಯಿಯಲ್ಲಿ ಹಾಕಬೇಕು
ಬಾಯಿಯ ಒಕ್ಕಣೆ ಓಲೆಯಲ್ಲಿ ಹಾಕಬೇಕು ಓ...ಏ...
ಬರಹದಾ ಓಲೆ ಕಳುಹಿಸಬೇಕು ಹುಡುಗ ಏ...ಓ...
ರೂಪಕ್ಕೆ ಸರಿಯಾಗಿ ನೇಮ ಆಯಿತುಯೇ.....

ಸಂಧಿ ೪

ಬರೆದ ಓಲೆಗೆ ಕಳುಹಿಸಿದ ಹುಡುಗನಿಗೆ
ನೀರಿನ ಬಟ್ಟಲು ಬಾಲ್ 'ಸೂಡಿ' ಹಿಡಿದು ಬರುವನು ಕನ್ನಡಿ ಕಲಸು ಮಗ ಓ..
ಗಡ್ಡ ಕಳೆಯಲು ಶುದ್ಧ ಆಗಲು ಬಿನ್ನಹದ ಕರಿಯ
ಮೂಡಲ ತುಟ್ಟಿ ಕೆರೆ ಕಡೆ ಹೋದರು
ಬಿಳಿಯ ಪಟ್ಟೆ ಕಂಬಳಿ ಕಪ್ಪು ಪಟ್ಟೆ ಹಾಸಿದರು
ಹರಿತಗೊಳಿಸಿದರು
ಪಂಚಲೆ ಹಿಡಿದರು ಬಲ ಕೆನ್ನೆ ಗೀರಿದರು

ಮುಂದೆಲೆ ಪತ್ತಿಯೆರ್ ಎಡ ಗೆನ್ನೆ ಉರ್ದಿಯೆರ್
ಕರಿಮೀಸೆ ಕತ್ತರಿಯೆರ್ ಪಿಲಿ ಮೀಸೆ ಉರ್ದಿಯೆರ್
ಪಾಪೆಗ್ ಸಿರಿಯಾಯಿ ನೇಮ ಆಂಡ್ ಯೇ

ಸಂಧಿ ೫

ಬಂಡಾರಿ ಮಗೆ ಮುಟ್ಟಂಚಿ ಮೈಲೆಗ್
ದಾದ ಮೈಲೆ ಉಂಡು
ಎಂಕ್ಲೆಗಾಂಡ್ ಬಿನ್ನಯ ಕರಿಯೆ ಮುಟ್ಟಿನ
ಮೈಲೆ ಪೋಡಾಂಡ
ನೂದು ಕಡ್ಯ ಬೆಂದ್‍ರಾವೊಡು
ನೂದು ಕಡ್ಯ ಚಂಡೀರಾವೊಡು ಪನ್ಪೆರ್ ಯೇ
ಪಾಪೆಗ್ ಸರಿಯಾಯಿ ನೇಮ ಆಂಡ್ ಯೇ

ಸಂಧಿ ೬

ಎನ್ನೆದ ಮೈಲೆ ಸೀಗೆಡ್ ಕಲೆಯೆರ್
ಸೀಗೆದ ಮೈಲೆ ಎನ್ನೆಡ್ ಕಲೆಯೆರ್
ಎನ್ನೆದ ಮೈಲೆನ್ ಸಾರ ಕಡ್ಯ
ಬೆಂದ್‍ರ್‍ಡ್ ಬೆಪ್ಪು ದೆತ್ತರೆ
ಸೀಗೆದ ಮೈಲೆನ್ ಸಾರ ಕಡ್ಯ
ಚಂಡಿ ನೀರ್‍ಡ್ ತಪ್ಪು ದೆತ್ತೆರ್
ಮೈಲೆ ಮಾತೆರ್ ಮಡಿ ತುತ್ತಿಯೆರ್

ಎಂಕ್ಲೆಗ್ ವರ್ಷಲಾ ಆಜಿ ತಿಂಗೊಲು
ಸುಖ ಪರ್ಣಾಮದ ನಿದ್ರೆ ದೆಪ್ಪೆರೆ

ಮುಂದಲೆ ಹಿಡಿದರು ಎಡಗೆನ್ನೆ ಉಜ್ಜಿದರು
ಕಪ್ಪು ಮೀಸೆ ಕತ್ತರಿಸಿದರು ಹುಲಿ ಮೀಸೆ ಉಜ್ಜಿದರು
ರೂಪಕ್ಕೆ ಸರಿಯಾದ ನೇಮ ಆಯಿತು ಯೇ*

ಸಂಧಿ ೫

ಬಂಡಾರಿ ಮಗ ಮುಟ್ಟಿದ ಮೈಲಿಗೆಗೆ
ಯಾವ ಮೈಲಿಗೆ ಇದೆ
ನಮಗಾದರೆ ಬಿನ್ನಹದ ಕರಿಯ
ಮುಟ್ಟಿದ ಮೈಲೆ ಹೋಗಬೇಕಾದರೆ
ನೂರು ಕೊಡ ಬೀಸಿ ನೀರು ಆಗಬೇಕು
ನೂರು ಕೊಡ ತಣ್ಣೀರಾಗಬೇಕು ಹೇಳುತ್ತಾರೆ...ಯೇ*
ರೂಪಕ್ಕೆ ಸರಿಯಾದ ನೇಮ ಆಯಿತು ಯೇ*...

ಸಂಧಿ ೬

ಎಣ್ಣೆಯ ಮೈಲಿಗೆ ಸೀಗೆಯಲ್ಲಿ ಕಳೆದರು
ಸೀಗೆಯ ಮೈಲಿಗೆ ಎಣ್ಣೆಯಲ್ಲಿ ಕಳೆದರು
ಎಣ್ಣೆಯ ಮೈಲಿಗೆಯನ್ನು ಸಾವಿರ ಕೊಡ
ಬಿಸಿನೀರಲ್ಲಿ ಬೆಪ್ಪು ತೆಗೆದರು
ಸೀಗೆದ ಮೈಲಿಗೆಯನ್ನು ಸಾವಿರ ಕೊಡ
ತಣ್ಣೀರಲ್ಲಿ ತಪ್ಪು ತೆಗದರು
ಮೈಲಿಗೆ ಬಿಚ್ಚಿದರು ಮಡಿ ಉಟ್ಟರು

ನಮಗೆ ವರ್ಷ ಅರು ತಿಂಗಳು
ಸುಖ ಪರಿಣಾಮದ ನಿದ್ರೆ ಮಾಡಲು

ಪಟ್ಟೆ ಹಾಸರೆ ಪಟ್ಟೆ ಇಜ್ಜಿ
ಬೇಲೂರು ಕಾಣಿಕೆ ಕಡದೆಳ್
ಬೆಲ್ಗಾಂ ಪಟ್ಟೆ ತರ್‌ಪಾದೆರ್
ಓ ... ಮೂಡಾಯಿ ಕಾಣಿಕೆ ಕಡದೆರೆ
ಮುನ್ನೂದು ಗಾವುದೊಗು ರಾವಣ ಪಟ್ಟೆ
ಪಡ್ಡಾಯಿ ದೇಸ ಕಡತೆರ್
ಉಗ್ರ ನರಸಿಂಹೊಗು ಒತ್ತನ ಪಟ್ಟೆ ಯೇ ....
ಬಡಕಾಯಿ ದೇಸೊಗು ಕಡದೆರ್
ಮೂಂಕುದ ಸುಳಿಗ್ ರಾವಣ ಪಟ್ಟೆ
ಪಟ್ಟೆ ಹಾಸಿದ್ ಒಂಜಿ ವರ್ಷ ಆಜಿ ತಿಂಗೊಲು
ಸುಖ ಪರ್ಣಾಮದ ನಿದ್ರೆ ದೆತ್ತೆರ್ ಉಲ್ಲಾಕುಲು ನಾ ಆ.... ಏ.... ಆ.... ಏ....

ಮೈಲೆ ಮಾತೆರ್ ಮಡಿ ತುತ್ತಿಯೆರ್ ಯೇ
ಸಾಪಂದ ಉಲ್ಲಾಕುಲು ಯೇ ... ಏ... ಏ.... ಓ...
ಗಟ್ಟ ಗಟ್ಟ ಉಂಡೇ ಪದಿನಾಜಿ ಗಟ್ಟವೋ .... ಓ..... ಓ.....
ವಾ ಗಟ್ಟ ಜಪ್ಪುನು ಪನ್ಪೆರ್
ಸಾಪಂದ ಉಲ್ಲಾಕುಲು .... ಏ... ಓ
ಪಾಪೆಗ್ ಸರಿಯಾಯಿ ನೇಮ ಆಂಡ್ ಯೇ ....

ಸಂಧಿ ೭

....ಓ ....ಓ .... ಒಂಜಿ ಗಟ್ಟ ಉಂಡುಯೇ
ಕಾವೇರಿ ಗಟ್ಟ ಉಂಡುಯೇ ಕಾವೇರಿ ಗಟ್ಟ ಜಪ್ಪರೆ
ಎನ್ನ ಬಜೆ ಗಟ್ಟ ಜಪ್ಪರೆ ಬಲ್ಲಿಪನ್ಪೆರ್ ಕಾವೇರಮ್ಮ ದೇವರ್
ಪಾಪೆಗ್ ಸರಿಯಾಯಿ ನೇಮ ಆಂಡ್ ಯೇ

ಪಟ್ಟೆ ಹಾಸಲು ಪಟ್ಟೆ ಇಲ್ಲ
ಬೇಲೂರು ಕಾಣಿಕೆ ಕಳುಹಿಸಿದ್ದರು
ಬೆಲ್ಗಾಮ್ ಪಟ್ಟೆ ತರಿಸಿದರು
ಓ...ಮೂಡಣ ಕಾಣಿಕೆ ಕಳುಹಿಸಿದರು
ಮುನ್ನೂರು ಗಾವುದಕ್ಕೆ ರಾವಣ ಪಟ್ಟೆ
ಪಡುವಣ ದೇಶ ಕಳುಹಿಸಿದರು
ಉಗ್ರ ನರಸಿಂಹಗೆ ಒಪ್ಪುವ ಪಟ್ಟೆ...ಯೇ*
ಬಡಗು ದೇಶ ಕಳುಹಿಸಿದರು
ಮೂಗಿನ ಸುಯ್ಲಿಗೆ ರಾವಣ ಪಟ್ಟೆ
ಪಟ್ಟೆ ಹಾಸಿ ಒಂದು ವರ್ಷ ಆರು ತಿಂಗಳು
ಸುಖ ಪರಿಣಾಮದ ನಿದ್ರೆ ತೆಗೆದರು ಉಲ್ಲಾಕುಲು ನಾ ಆ...ಆ....ಆ....

ಮೈಲಿಗೆ ಬಿಚ್ಚಿದರು ಮಡಿ ಉಟ್ಟರು
ಅನುಗ್ರಹದ ಉಲ್ಲಾಕು ಯೇ ....ಏ...ಏ....ಓ
ಗಟ್ಟ ಗಟ್ಟ ಇದೆಯೇ ಹದಿನಾರು ಗಟ್ಟವೋ ....ಓ.....ಓ...
ಯಾವ ಗಟ್ಟ ಇಳಿಯುವುದು ಎನ್ನುತ್ತಾರೆ
ಅನುಗ್ರಹಿಪ ಉಲ್ಲಾಕುಲು...ಏ....ಓ
ರೂಪಕ್ಕೆ ಸರಿಯಾದ ನೇಮ ಆಯಿತು ಯೇ*

ಸಂಧಿ ೭

.ಓ.....ಓ...ಒಂದು ಗಟ್ಟ ಇದೆ...ಯೇ*
ಕಾವೇರಿ ಗಟ್ಟ ಇದೆಯೇ ಕಾವೇರಿ ಗಟ್ಟ ಇಳಿಯಲು
ನನ್ನ 'ಬಟಿ ಗಟ್ಟ' ಇಳಿಯಬಾರದು ಎನ್ನುತ್ತಾರೆ ಕಾವೇರಮ್ಮ ದೇವರು
ರೂಪಕ್ಕೆ ಸರಿಯಾದ ನೇಮ ಆಯಿತು ಯೇ*

ಸಂಧಿ ೮

ಓ... ನನೊಂಜಿ ಗಟ್ಟ ಉರಿಡು ಕುಕ್ಕೆದ ಗಟ್ಟ
ಕುಕ್ಕೆಡಾಂಡ ಎನ್ನ ಬರಿಗಟ್ಟ ಜಪ್ಪರೆ ಬಲ್ಲಿ ಪನ್ಪೆರ್ ಯೇ
ಸುಬ್ರಾಯ ದೇವೆರ್
ಪಾಪೆಗ್ ಸರಿಯಾಯಿ ನೇಮ ಆಂಡ್ ಯೇ ....

ಸಂಧಿ ೯

ನನೊಂಜಿ ಗಟ್ಟ ಉಂಡು ಕೊಂಬರ ಗಟ್ಟ ಜಪ್ಪೊಡೂ
ಕೊಂಬರ ಗಟ್ಟ ಜಪ್ಪರೆ ಎಂಕ್ಲೆ ಬಜಿ ಗಟ್ಟ
ಜಪ್ಪರೆ ಬಲ್ಲಿಪನ್ಪೆರೆ ಕೊಂಬರದ ಈಶ್ವರ ದೇವೆರ್ .....
ಸೊಂಟ ಪತ್ತಿಯೆರ್ ಕಿಲಮಡತೆರ್
ಎಂಕ್ಲೆ ಬಜಿ ಗಟ್ಟ ಜಪ್ಪರೆ ಬುಡಯ ಪನ್ಪೆರ್ ಯೇ.....ಏ...

ಓ... ನನೊಂಜಿ ಗಟ್ಟ ಉಂಡು ಶಿರಾಡಿ ಗಟ್ಟ ಓ....
ಓ... ಶಿರಾಡಿ ಗಟ್ಟ ....
ಎನ್ನ ಬಜಿಗಟ್ಟ ಜಪ್ಪರೆ ಬಲ್ಲಿಪನ್ಪೆರ್
ಚಾಮುಂಡಿ ಅಮ್ಮ ದೇವೆರ್ ಓ... ಓ...

ಓ... ನನೊಂಜಿ ಗಟ್ಟ ಉಂಡು ಮುಡರೆ ಗಟ್ಟ
ಮುಡರೆ ಗಟ್ಟ ಜಪ್ಪರೆ ಆ..
ಮಡಾರ್‌ಡ್ ಮುನ್ನೂದು ಬೂತೊಲು
ಒ ಗುಂಡದಬ್ಬೆ, ಬಂಟಕೊರಿಯೆ, ಬಂಟು ಬಸ ನಾಯ್ಕೆ ನಾಗರ ಜೋವು ಮಾಕಾಳಿ
ಅಬ್ಬೆ ಓ... ಓ... ಎಂಕ್ಲೆ ಬಜಿಗಟ್ಟ ಜಪ್ಪರೆ ಬಲ್ಲಿ ಪನ್ಪೆರ್ ಯೇ ಒ... ಏ...
ಓ ಮುಡಾರ್‌ಡ್ ಮೊಡಂಕ್ ತಪ್ಪಂದ್ ಓ...ಏ....
ಮೈರಾರ್‌ಡ್ ಕಲಂಕ್ ತಪ್ಪಂದ್

ಸಂಧಿ ೮

ಓ.....ಇನ್ನೊಂದು ಗಟ್ಟ ಇದೆ ಕುಕ್ಕೆಯ ಗಟ್ಟ
ಕುಕ್ಕೆಯಲ್ಲಾದರೆ ನನ್ನ 'ಬಜಿ ಗಟ್ಟ' ಇಳಿಯಬಾರದು ಎನ್ನುತ್ತಾರೆ ಯೇ*
ಸುಬ್ರಾಯ ದೇವರು
ರೂಪಕ್ಕೆ ಸರಿಯಾದ ನೇಮ ಆಯಿತು ಯೇ*

ಸಂಧಿ ೯

ಇನ್ನೊಂದು ಗಟ್ಟ ಇದೆ ಕೊಂಬರ ಗಟ್ಟ ಇಳಿಯಬೇಕು
ಕೊಂಬರ ಗಟ್ಟ ಇಳಿಯಲು ನಮ್ಮ 'ಬಜಿಗಟ್ಟ'
ಇಳಿಯಬಾರದು ಎನ್ನುತ್ತಾರೆ ಕೊಂಬರದ ಈಶ್ವರ ದೇವರು
ಸೊಂಟ ಹಿಡಿದರು ನಡು ಮಡಚಿದರು
ನಮ್ಮ 'ಬಜಿಗಟ್ಟ' ಇಳಿಯಲು ಬಿಡೆನು ಎನ್ನುತ್ತಾರೆ ...ಯೇ*..ಏ

ಓ.....ಇನ್ನೊಂದು ಗಟ್ಟ ಇದೆ ಶಿರಾಡಿ ಗಟ್ಟ ಓ..
ಓ...ಶಿರಾಡಿ ಗಟ್ಟ ....
ಎನ್ನ ಬಜಿಗಟ್ಟ ಇಳಿಯಲು ಬಾರದು ಹೇಳುತ್ತಾರೆ
ಚಾಮುಂಡಿ ಅಮ್ಮ ದೇವರು....

ಓ.....ಇನ್ನೊಂದು ಗಟ್ಟ ಇದೆ ಮುಡರೆ* ಗಟ್ಟ
ಮೂಡುಕರೆ ಗಟ್ಟ ಇಳಿಯಲು ಆ....
ಮೂಡುಕರೆ ಮನ್ನೂರು ಭೂತಗಳು
ಓ ಗುಂಡದಬ್ಬೆ, ಬಂಟಕೊರಿಯೆ, ಬಂಟು ಬಸನಾಯ್ಕ, ನಾಗರ ಜೋವು
ಮಾಕಳಿ ಅಬ್ಬೆ ಓ...ಓ....ನಮ್ಮ ಬಜಿಗಟ್ಟ ಇಳಿಯಬಾರದು ಹೇಳುತ್ತಾರೆ ಯೇ* ಓ...ಏ.....
ಓ...ಮುಡಾರ್‌ನಲ್ಲಿ ವ್ಯಂಗ್ಯ ತಪ್ಪದು ಓ...ಏ....
ಮೈರಾರದಲ್ಲಿ ಕ್ಲೇಶ ತಪ್ಪದು

ಎಂಕ್ಲೆಗಾಂಡ ನನ ಓ ಬಂಗಾಡಿ ಗಟ್ಟ ಉಂಡು
ಬಡಕಾಯಿ ಗಟ್ಟ ಬಂಗಾಡಿ ಗಟ್ಟ ಓ....
ಸಕ್ತಿಡ್ ನೀತಿಡ್ ಬಂಗಾಡಿ ಗಟ್ಟ ಜಪ್ಪೊಡು ಪನ್ಪೆರ್
ಸಾಪಂದ ಉಲ್ಲಾಕುಲು
ಬಂಗಾಡಿ ಗಟ್ಟ ಜಪ್ಪರೆ ಬಂಗಾಡಿ ಬಾನ ಕುಂಞಮಗಲ್
ಎನ್ನ ಬಜಿ ಗಟ್ಟ ಜಪ್ಪರೆ ಬಲ್ಲಿಪನ್ಪಲ್
ಬಂಗಾಡಿ ಬಾನ ಕುಞಮಗಲ್ ಆ..ಆ..

ಅಂಚಂಡ ನನ ಪನಗ ಏ.. ಏ..
ಬಂಗಾಡಿ ಗಟ್ಟದವುಲು ಎಲ್ಪುರ ಮುಟ್ಟು
ಎಲ್ಲರ ಬಾಕಿಲ್ ಯಾನ್ ಬುಡು ಕೊರಯೆ ಪನ್ಪಲ್ ಯೇ
ಶಕ್ತಿಡ್ ನೀತಿಡ್ ಜತ್ತಿ ಬೂತೊಲೆಗ್
ಬೆಡಿತ ಗುಂಡು
ಪಗರಿದ ಬಾಣ ಬುಡುವೆ ಪನ್ಪಲ್ ಯೇ ಏ... ಏ...
ಪಾಪೆಗ್ ಸರಿಯಾಯಿ ನೇಮ ಆಂಡ್ ಯೇ

ಸಂಧಿ ೧೦

ನಿನ್ನ ಬರಿ ಗಟ್ಟ ಜತ್ತ್‌ಜಿಂಡ 'ಸರ್ಪಸುತ್ತು' ಸಾವಿರ ರೋಗ
ಪಾಡೊಡು ಪನ್ಪೆರ್ ಯೇ
ಸಾಪಂದ ಉಲ್ಲಾಕುಲು
ಒಕ್ಕಡ್ ಒಕ್ಕ್ ಸುತ್ತು ಪಾಡಿಯೆರ್
ಬಂಜಿಡ್ ಪುಂಚ ಪಾಪು ಪಾಡಿಯೆರ್
ಕಿದ್‌ಕಿಲ್‌ಡ್ ಅಮೆ ಸುತ್ತು ಪಾಡಿಯರ್
ತುಡೆಟಾಂಡ ಪಿಂಗಾರ ಪಾಪು ಪಾಡಿತೆರ್
ಕಾರ್‌ಡ್ ಆನಿ ಸುತ್ತುಪಾಡಿಯೆರ್

ನಮಗಾದರೆ ಇನ್ನು ಒಂದು ಬಂಗಾಡಿ ಗಟ್ಟ ಇದೆ
ಬಡಗು ಗಟ್ಟ ಬಂಗಾಡಿ ಗಟ್ಟ ಓ....
ಶಕ್ತಿಯಿಂದ ನೀತಿಯಿಂದ ಬಂಗಾಡಿ ಗಟ್ಟ ಇಳಿಯಬೇಕು ಹೇಳುತ್ತಾರೆ
ಅನುಗ್ರಹಿಪ ಉಲ್ಲಾಕುಲು
ಬಂಗಾಡಿ ಗಟ್ಟ ಇಳಿಯಲು ಮಾನ ಕುಂಞ ಮಗಳು
ನನ್ನ ಬಜಿಗಟ್ಟ ಇಳಿಯಬಾರದು ಎನ್ನುತ್ತಾಳೆ
ಬಂಗಾಡಿ ಮಾನ ಕುಂಞಮಗಳು ಆ..ಆ..

ಹಾಗಾದರೆ ಇನ್ನು ಹೇಳುವುದಾದರೆ ಏ..ಏ...
ಬಂಗಾಡಿ ಗಟ್ಟದಲ್ಲಿ ಎಪ್ಪತ್ತೂರ ಮೆಟ್ಟಲು
ಏಳು ಸಾವಿರ ಬಾಗಿಲು ನಾನು ಬಿಟ್ಟು ಕೊಡಲಾರೆ ಹೇಳುತ್ತಾಳೆ ಯೇ*
ಶಕ್ತಿಯಲ್ಲಿ ನೀತಿಯಲ್ಲಿ ಇಳಿದ ಭೂತಗಳಿಗೆ
ಕೋವಿಯ ಗುಂಡು
ಪಗರಿಯ ಬಾಣ ಬಿಡುವೆ ಎನ್ನುತ್ತಾಳೆ..ಯೇ* ಏ...ಏ....
ರೂಪಕ್ಕೆ ಸರಿಯಾದ ನೇಮ ಆಯಿತು ಯೇ* ....

ಸಂಧಿ ೧೦

ನಿನ್ನ ಬಜಿ ಗಟ್ಟ ಇಳಿಯಲಿಲ್ಲವಾದರೆ 'ಸರ್ಪಸುತ್ತು' ಸಾವಿರ ರೋಗ
ಹಾಕಬೇಕು ಎನ್ನುತ್ತಾರೆಯೇ
ಅನುಗ್ರಹಿಪ ಉಲ್ಲಾಕುಲು
ಸೊಂಟದಲ್ಲಿ ಸೊಂಟ ಸುತ್ತು ಹಾಕಿದರು
ಹೊಟ್ಟೆಯಲ್ಲಿ ಹುತ್ತ ಬಾವು ಹಾಕಿದರು
ಕಂಕುಳಲ್ಲಿ ಅಮೆ ಸುತ್ತು ಹಾಕಿದರು
ತೊಡೆಯಲ್ಲಾದರೆ ಪಿಂಗಾರ ಪಾಪು ಹಾಕಿದರು
ಕಾಲಲ್ಲಿ ಆಣಿಸುತ್ತು ಹಾಕಿದರು

ಪಾಪೆಗ್ ಸರಿಯಾಯಿನ ನೇಮ ಕೊಂಡು ಬೀರ ಪುಗರಿನ. ಯೇ*

ಸಂಧಿ ೧೧

ಉಂದು ದಾನೆ ಕಟ್ಟ ಕಲ್ಜಿಗ ಸೋಯ
ಮಾಯಗ ಪನ್ವಲ್ ಯೇ
ಬಂಗಾಡಿಗಾಂಡ ಮುಟ್ಟು ಬೀರ ಬಲ್ಯಾಯೆನಡೆ
ಬರೆಯೆರ್ ಓಲೆ ಕಾಡಾಯೆರ್ ಮಾನಿ
ಬರೆಯಿ ಓಲೆಗ್ ಕಾಡಾಯಿ ಮಾನೆಗ್
ಓಲೆದ ಬೆರಿ ಪತ್ತ್ ಬರುವೆರ್ ಯೇ
ಮುಟ್ಟು ಬೀರ ಬಲ್ಯಾಯೇ

ಬರೆಯಿ ಓಲೆಗ್ ಕಾಡಾಯಿ ಮಾನೆಗ್
ಬತ್ತರಾಂಡ್ ಕೇಂಡೆಯೇ ಬಂಗಾಡಿ
ಬಂಗ ಕುಂಞ ಮಗಲ್‌ಯೇ ಏ....
ಅಂಚಾಂಡ ಬಲ್ಯಾಯೆರೆ
ಸಾರಿ ಪಾಡ್ದ್‌ತೂನಗ ಎಲ್ಲುರ ಮುಟ್ಟು
ಎಲ್ಸರ ಬಾಕಿಲ್ ಬುಡ್ದುಕೊರೊಡು ಪೆನ್ವರ್ ಬಲ್ಯಾಯೆರ್

ಆತನ ಪೊರ್ತುನಗ ಪಂಡಿ ನಾಲಾಯಿ ದೊಂಡೆಡಾವೊಡಾಂಡ
ಎಲ್ಲುರ ಮುಟ್ಟು ಎಲ್ಸರ ಬಾಕಿಲ್ ಬುಡ್ಡುಕೊರ್ಪೆ
ಪನ್ವಲ್ ಬಂಗಾಡಿ ಬಾನ ಕುಂಞನ ಮಗಲ್ ಏ....
ಆತನ ಪೊರ್ತುನಗ ಪಂಡಿ ನಾಲಾಯಿ ದೊಂಡೆಡಾವೊಡಾಂಡ ಸರ್ಪ ರೋಗ
ಸಾವಿರ ಕುತ್ತ ಮಾಜಿದ್ ಬತ್ತ್‌ಂಡ್‌ಯೇ ಓ....
ಪಾಪೆಗ್ ಸರಿಯಾಯಿ ನೇಮ ಆಂಡ್ ಯೇ

ರೂಪಕ್ಕೆ ಸರಿಯಾದ ನೇಮ ಆಗಿ ಪ್ರತಾಪ ಹೊಗಳಿಕೆ.ಯೇ*

ಸಂಧಿ ೧೧

'ಇದು ಏನು ಕಡು ಕಲಿಯುಗ ಚೋದ್ಯ
ಮಾಯಗ ಹೇಳುತ್ತಾಳೆಯೇ
ಬಂಗಾಡಿಗಾದರೆ ಮುಟ್ಟು ಬೀರ ಬಲ್ಯಾಯನಲ್ಲಿಗೆ
ಬರೆದರು ಓಲೆ ಕಳುಹಿಸಿದರು ಜೀತದಾಳನ್ನು
ಬರೆದ ಓಲೆಗೆ ಕಳುಹಿಸಿದ ಜೀತದಾಳುವಿಗೆ
ಓಲೆಯ ಬೆನ್ನು ಹಿಡಿದು ಬರುವರು. ಯೇ*
ಮುಟ್ಟು ಬೀರ ಬಲ್ಯಾಯೇ..

ಬರೆದ ಓಲೆಗೆ ಕಳುಹಿಸಿದ ಜೀತದಾಳುಗೆ
ಬಂದರಾದರೆ ಕೇಳಿರೇ ಬಂಗಾಡಿ
ಬಂಗ ಕುಂಞ ಮಗಳೂಯೇ ಏ....
ಹಾಗಾದರೆ ಬಲ್ಯಾಯರೇ
ಕವಡೆ ಹಾಕಿ ನೋಡುವಾಗ ಎಪ್ಪತ್ತೂರ ಮೆಟ್ಟಲು
ಏಳುಸಾವಿರ ಬಾಗಿಲು ಬಿಟ್ಟು ಕೊಡಬೇಕು ಎನ್ನುತ್ತಾರೆ ಯೇ*

ಅಷ್ಟು ಹೊತ್ತಿಗೆ ಆಡಿದ ನಾಲಗೆ ಗಂಟಲೊಳಗಾಗುವ ಮುನ್ನ
ಏಳನೂರು ಮೆಟ್ಟಲು ಏಳುಸಾವಿರ ಬಾಗಿಲು ಬಿಟ್ಟು
ಕೊಡುವೆ ಎನ್ನುತ್ತಾಳೆ ಬಂಗಾಡಿ ಬಾನ ಕುಂಞನ ಮಗಳ ಏ......
ಅಷ್ಟು ಹೊತ್ತಿಗೆ ಆಡಿದ ನಾಲಗೆ ಗಂಟಲೊಳಗಾಗುವ ಮುನ್ನ ಸರ್ಪರೋಗ
ಸಾವಿರ ಕಾಯಿಲೆ ಮಾಸುತ್ತಾ ಬಂತುಯೇ ಓ....
ರೂಪಕ್ಕೆ ಸರಿಯಾದ ನೇಮ ಆಯಿತು ಯೇ*

ಸಂಧಿ ೧೨

ಶಕ್ತಿಡ್ ನೀತಿಡ್ ಬಂಗಾಡಿ ಗಟ್ಟ ಜತ್ತೆರ್‌ಯೇ ....
ಸಾಪೊಂದ ಬೂತೊಲು(ಉಲ್ಲಾಕುಲು)
ಪಾಪೆಗ್ ಸರಿಯಾಯಿ ನೇಮ ಆಂಡ್ ಯೇ...

ಸಂಧಿ ೧೩

ಯೇರ್ ಯೇ ಯೇರ್ ಯೇ ಬಂಗಾಡಿ ಕುಞಮಗಲ್
ಓ.... ಬಂಗಾಡಿ ಜತ್ತಿನ ಬೂತೊಲು
ದೊಂಬುದ ಅಂಗದೆನೆ ಸಾದಿದ ಬಡಾವುನು ಬಚ್ಚಿದೆರ್
ಒಂಜಿ ಕೊಂಡೆ ಪೇರ್ ಕೊರುವೆನ ಕೇನ್ನಗ
ಸಾಪಂದ ಉಲ್ಲಾಕುಲು ಆ... ಆ...

ಕಲ್ತೆಗ್ ಬೊರಿನ ಪೇರ್ ಕಲ್ತೆಗೆ ಸಮ ಆಂಡ್
ಬಯ್ಯಗ್ ಬೊರಿನ ಪೇರ್ ಬಯ್ಯಗೇ ಸಮ ಆಂಡ್
ನನೊರ ಬೊರಿಂಡ ಒಂಜಿ ಅತ್ತ್; ರಡ್ಡ್ ಕೊಂಡೆ ಕೊರುವೆ ಪನ್ಪಲ್ ಯೇ
ಬಂಗಾಡಿ ಮಾನ ಕುಞಮಗಲ್ ಯೇ
ಪಾಪೆಗ್ ಸರಿಯಾಯಿ ನೇಮ ಆಂಡ್ ಯೇ

ಸಂಧಿ ೧೪

ಪೇರ್ ಇತ್ತ್‌ದ್ ಕಲ್ಕ್ಯಪಂಡಿ ಪೊನ್ನಗ
ಸಾರ ಕುತ್ತ ಸಾರ ರೋಗ ಪಾಡಿಯೆರ್ ಯೇ
ಅರೆಟ್ ಅರೆ ಮಂಚ ಪಾಡಿಯೆರ್
ಕಣ್ಣಡ್ ಮುಕುಳಿ ಸರ ಪಾಡಿಯೆರ್ ಈ......
ಮೂಂಕುಡು ಇಂದ್ರ ಪಟ್ಟ
ಬಾಯಿಡ್ ಬಸಲೆ ಕುತ್ತ ಬೆರಿಟ್ ಬೆಗರ್‌ದಲೆ

ಸಂಧಿ ೧೪

ಶಕ್ತಿಯಲ್ಲಿ ನೀತಿಯಲ್ಲಿ ಬಂಗಾಡಿ*ಗಟ್ಟ ಇಳಿದರು ಯೇ*.
ಅನುಗ್ರಹಿಪ ಭೂತಗಳು(ಉಲ್ಲಾಕುಲು)
ಪಾಪೆಗೆ ಸರಿಯಾದ ನೇಮ ಆಯಿತು ಯೇ*

ಸಂಧಿ ೧೪

ಯಾರದು ಯಾರದುಯೇ ಬಂಗಾಡಿ ಕುಂಞ ಮಗಳು
ಓ ....ಬಂಗಾಡಿ ಇಳಿದ ಭೂತಗಳು
ಬಿಸಿಲಿನ ದಾಹದಲ್ಲಿ ದಾರಿಯ ಹಸಿವಿನಲ್ಲಿ ಬಳಲಿದರು
ಒಂದು ಕುಡ್ತೆ ಹಾಲು ಕೊಡುವಿಯಾ ಕೇಳುವಾಗ
ಅನುಗ್ರಹಿಪ ಉಲ್ಲಾಕುಲು ಆ...ಆ.....

ನಸುಕಿನಲ್ಲಿ ಕರೆದ ಹಾಲು ನಸುಕಿಗೆ ಸರಿಯಾಯ್ತು
ಸಂಜೆ ಕರೆದ ಹಾಲು ಸಂಜೆಗೆ ಸರಿಯಾಯ್ತು
ಇನ್ನೊಮ್ಮೆ ಕರೆದರೆ ಒಂದಲ್ಲ ಎರಡು ಕುಡ್ತೆ ಕೊಡುವ ಎನ್ನುತ್ತಾಳೆ ಯೇ
ಬಂಗಾಡಿ ಬಾನ ಕುಂಞ ಮಗಳು ಯೇ
ರೂಪಕ್ಕೆ ಸರಿಯಾದ ನೇಮ ಆಯಿತು ಯೇ*.

ಸಂಧಿ ೧೪

ಹಾಲು ಇದ್ದು ಕಪಟ ನುಡಿದ ಹೆಣ್ಣಿಗೆ
ಸಾವಿರ ಕಾಯಿಲೆ ಸಾವಿರ ರೋಗ ಹಾಕಿದರು ಯೇ*
ಅರೆಯಲ್ಲಿ ಅರೆ ಮಂಚ ಹಾಕಿದರು
ಕಣ್ಣಲ್ಲಿ ಕುಂಡೆ(?) ಸರ ಹಾಕಿದರು
ಈ....ಮೂಗಲ್ಲಿ ಇಂದ್ರ ಪಟ್ಟ
ಬಾಯಲ್ಲಿ ಬಸಳೆ ರೋಗ ಬೆನ್ನಲ್ಲಿ ಬೆವರ ಕಜ್ಜಿ

ಬಂಜಿಡ್ ಕುರ್ಕೆ ಪಾಪು ಅಂಗ್ಯೆಟ್
ಅಂಗ್ಯೆ ಸುತ್ತು ಉಗುರುಡ್ಡು ಉಗುರು ಸುತ್ತು
ಒಕ್ಕೊಡು ಒಕ್ಕೊ ಸುತ್ತು ಕಾರ್‌ಗ್ ಆನಿ ಕುತ್ತ
ಓ.... ಪಾಪೆಗ್ ಸರಿಯಾಯಿ ನೇಮ ಆಂಡ್ ಯೇ .... ನೇಮ ಆಂಡ್ ಯೇ

ಸಂಧಿ ೧೫

ಉಂದು ದಾದ ಕಟ್ಟ ಕಲ್ಜಿಗ ಸೋಯಗ ಮಾಯಗ
ಚಾವಡಿಗ್ ಬಲ್ಯಾನ್ ಲೆಪ್ಪಾವೊಡು
ಓಲೆದ ಓದನೆಡ್ ಸಾರಿದಾ ಕಂಟೊಡು
ಚಾವಡಿಗ್ ಬಲ್ಯಾಯನ್ ಲೆಪ್ಪಾಯೆರ್

ಓ... ಓ... ಯೇರ್ ಯೇ ಯೇರ್ ಯೇ... ಬಲ್ಯಾಯೆರೇ
ಕಂಡಿತ ತೂದು ಉಂಡಿತ ಪಣೊಡು
ಓ... ಕಂಡಿತ ತೂದು ಉಂಡಿತ ಪಂಡಡ
ಪನೆ ಪಾಡಿ ಗೂವೆಲ್ ಪೂಕರೆ ಕಂಬುಲ
ಎಲ್ಲರ ಮುಟ್ಟು ಎಲ್ಲಬಾಕಿಲ್ ರಾಜ ಮಾಡ
ಪೂಕರೆನ ಕಂಬುಲ ಸೀಮೆ ಭೂಮಿ ಬುಡು ಕೊರ್ಪೆ ...
ಕಲ್ಕೆ ಪಂಡ್‌ಂಡಾ ನಾಲಾಯಿ ಒಯಿತ್ ಕೊಯ್ಪೆ
ಮೂಂಕುಡು ಮೋನೆಗ್ ಸುಣ್ಣ ನೀರ್ ಬುಡುವೇ

ಚಾವಡಿತ ಕಂಟೆನಡ್ ಓಲೆದ ಓದನೆಡ್ ಕಂಡಿತ
ತೂದು ಉಂಡಿತ ಪನ್ಯ ಬಲ್ಯಾಯಗ್
ಪನೆಪಾಡಿ ಗೂವೆಲ್ ಪೂಕರೆ ಕಂಬುಲ
ಎಲ್ಲರ ಮುಟ್ಟು ಎಲ್ಲ ಬಾಕಿಲ್ ರಾಜ ಮಾಡ

ಹೊಟ್ಟೆಯಲ್ಲಿ ಕುರ್ಕೆ ಊತ ಅಂಗೈಯಲ್ಲಿ
ಅಂಗೈಸುತ್ತು ಉಗುರಲ್ಲಿ ಉಗುರು ಸುತ್ತು
ಉಡಿಯಲ್ಲಿ ಉಡಿ ಸುತ್ತು ಕಾಲಿಗೆ ಆಣಿ ಸುತ್ತು
ರೂಪಕ್ಕೆ ಸರಿಯಾದ ನೇಮ ಆಯಿತು ಯೇ...... ನೇಮ ಆಯಿತು ಯೇ*

ಸಂಧಿ ೧೫

ಇದು ಏನು ಕೆಟ್ಟ ಕಲಿಯುಗ ಸೋಯಗ ಮಾಯಗ
ಚಾವಡಿಗೆ ಬಲ್ಯಾಯನನ್ನು ಕರೆಯಬೇಕು
ಓಲೆಯ ಓದಿನಲ್ಲಿ ತಾಳೆಯ ಕಂತದಲ್ಲಿ
ಚಾವಡಿಗೆ ಬಲ್ಯಾಯನನ್ನು ಕರೆಸಿದರು

ಓ..ಓ...ಯಾರದೂ....ಯಾರದೂ ...ಬಲ್ಯಾಯರೇ
ಕಂಡದ್ದು ನೋಡಿ ಇದ್ದಂಗೆ ಹೇಳಬೇಕು
ಓ ಕಂಡದ್ದು ನೋಡಿ ಇದ್ದಂಗೆ ಹೇಳಿದರೆ
ಏತದ ಬಾವಿ ಪೂಕರೆ ಕಂಬುಲ
ಏಳುಸಾವಿರ ಮೆಟ್ಟಲು ಎಪ್ಪತ್ತು ಬಾಗಿಲ ರಾಜ ಮಾಡ
ಪೂಕರೆನ ಕಂಬುಲ ಸೀಮೆ ಭೂಮಿ ಬಿಟ್ಟು ಕೊಡುವೆ
ಕಪಟ ಹೇಳಿದರೆ ನಾಲಗೆಯನ್ನು ಎಳೆದು ಕುಯ್ಯುವೆ
ಮೂಗಲ್ಲಿ ಮುಖಕ್ಕೆ ಸುಣ್ಣ ನೀರು ಬಿಡುವೆ

ಚಾವಡಿಯ ತಾಡಪತ್ರದಲ್ಲಿ ಓಲೆಯ ಓದಿನಲ್ಲಿ
ಕಂಡದ್ದು ನೋಡಿ ಇದ್ದಂಗೆ ಹೇಳಿದ ಬಲ್ಯಾಯಗೆ
ಏತ ಹಾಕಿದ ಬಾವಿ ಪೂಕರೆಯ ಕಂಬುಲ
ಏಳುಸಾವಿರ ಮೆಟ್ಟಲು ಎಪ್ಪತ್ತು ಬಾಗಿಲ ರಾಜ ಮಾಡ

ಪೂಕರೆನ ಕಂಬುಲ ಸೀಮೆ ಭೂಮಿ
ಒಂಜ ಬುಡು ಕೊರ್ತಲ್.ಯೇ ಆ... ಏ...
ಪಾಪೆಗ್ ಸರಿಯಾಯಿ ನೇಮ ಆಂಡ್ ಯೇ ....

ಸಂಧಿ ೧೬

ಓ...ಅಂಗನೊಟು ಬಲು ಮಂದೆ ನೆರೆಪುಂಡ್ ಯೇ
ಬಂಟೆರೇ ಕೊಡಿಮರಟ್ ಸತ್ಯ ದಂಡೆ ಕೇರ್‌ದ್‌ಂಡ್ ಯೇ
ಓ... ಕಾಂತಣ ಕುಮಾರ ಬೀರಾನಾಗ
ಓ... ಬಾಲೆ ಕುಮಾರ ಬೀರಾಪುಂಡು ಯೇ
ಆ...... ಓ..... ಏನ್‌ಲಾ ಕೇನಂದಿ ಕೊಂಬು ತಂಬಡಾ ....
ಇನಿದಾನಿ ಕಜ್ಜೊಡು ಕೇನೂನಾ

ಅಪ್ಪೆ ಬರಿ ರೆಂಜತ್ತಿರೆ ಮಾಡೊಡತ್ತಯೇ
ಓ... ಬಾಲೆ ಕುಮಾರ ಕಡ್ತಲೆ ದೆತ್ತ್‌ಪತ್ತ್‌ನಗಾ
ಬಾನೊಡು ಬಾಕುಡೆ ಮಿಂಚಿಲೆಕ್ಕಯೇ
ಆ .... ಕಾಂತಣ ಕುಮಾರ ಕಡ್ತಲೆ ದೆತ್ತ್‌ಪತ್ತ್‌ನಗ
ಬೇಷಡ್ ಮೆನ್ಪುರಿ ಮಿಂಚಿ ಲೆಕ್ಕ

ಓ... ಆನೆ ಕಟ್ಟಿ ನಾಯೆ ಆರ್ಯ ಮಗೇ
ಕುದುರೆ ಬುಡಿನಾಯೆ ಕುಂಞಾಳ್ವೆಯೇ ಕುಂಞಾಳ್ವೆಯೇ
ಕೋಟೆ ಕೋಡಾರೊಡು ಮೇಲೊಗು ಸರಿಯಾಯಿ
ನೇಮ ಆಪುಂಡು ಯೇ

ಃಃಃ

ಪೂಕರೆಯ ಕಂಬುಲ ಸೀಮೆ ಭೂಮಿ
ಒಂದು ಬಿಟ್ಟು ಕೊಟ್ಟಳು ಯೇ ...ಆ....ಏ...
ರೂಪಕ್ಕೆ ಸರಿಯಾದ ನೇಮ ಆಯಿತು ಯೇ*

ಸಂಧಿ ೧೬

ಓ ಅಂಗಣದಲ್ಲಿ ಬಹಳ ಮಂದೆ ನೆರೆಯುತ್ತಾರೆ ಯೇ*
ಬಂಟರ ಕೊಡಿಮರದಲ್ಲಿ ಸತ್ತಿಗೆ ದಂಡೆ ನೆಲೆಯಾಗಿದೆ
ಓ....ಕಾಂತಣ ಕುಮಾರ ಆವೇಶ ಆಗುವಾಗ
ಓ...ಬಾಲೆ ಕುಮಾರ ಆವೇಶ ಆಗುತ್ತದೆ ಯೇ*
ಆ....ಓ....ನಾನೂ ಕೇಳದ ಕೊಂಬು ನಗಾರಿ ......
ಇಂದೇನು ಕಾರ್ಯದಲ್ಲಿ ಕೇಳುವುದೂ

ಅಮ್ಮ ಬಜಿ ರೆಂಜಿತ್ತಿರೆ ಮಾಡದಲ್ಲಿ ಅಲ್ಲವೇ
ಓ..ಬಾಲ ಕುಮಾರ ಖಡ್ಗ ತೆಗೆದು ಹಿಡಿಯುವಾಗ
ಬಾನಿನಲ್ಲಿ ಬಾಕುಡ ಮಿಂಚಿದಂಗೆಯೇ
ಆ....ಕಾಂತಣ ಕುಮಾರ ಖಡ್ಗ ತೆಗೆದು ಹಿಡಿವಾಗ
ಬೇಷ ತಿಂಗಳಲ್ಲಿ ಮಿಂಚು ಹುಳ ಮಿಂಚಿದಂಗೆ ಯೇ*

ಓ ಆನೆ ಕಟ್ಟಿದವ ಆರ್ಯ ಮಗಾ
ಕುದುರೆ ಓಡಿಸುವವನು ಕುಂಞಾಳ್ವ ಯೇ* ಕುಂಞಾಳ್ವ ಯೇ*
ನಾಗ ಕ್ಷೇತ್ರದಲ್ಲಿ ಮೇಳಕ್ಕೆ ಸರಿಯಾದ
ನೇಮ ಆಗುತ್ತದೆ ಯೇ*

⌘⌘⌘

೫

ಸ್ವಾಮಿ ಕೋಲದ ಸ್ತುತಿ ಹಾಡು

ಹಾಡಿದವರು : ಶೀನ, ಜಾತಿ : ಪಾಣ, ಪ್ರಾಯ : ೫೦
೭.೫.೨೦೦೬

ಸ್ವಾಮಿ ಮನೆ ಅಂದರೆ ಹುತ್ತದ ಮನೆ. ಒಂದು ಬೃಹದಾಕಾರದ ಹುತ್ತವನ್ನು ಆಯಾ ಕುಟುಂಬದವರು ಪೂರ್ವ ಪರಂಪರೆಯಿಂದ ಉಪಾಸಿಸುತ್ತಾ ಬಂದಿರುವಂತಹುದು. ಹೆಚ್ಚಿನ ಕಡೆ ಇಂತಹ ಹುತ್ತಗಳ ಸುತ್ತ ಕಟ್ಟಡ ಕಟ್ಟಿ ಹುತ್ತ ಬೆಳೆಯಲು ಅವಕಾಶ ಕಲ್ಪಿಸಿದ್ದಾರೆ. ಕೆಲವು ಕಡೆ ತಾರಸಿ ಮುಚ್ಚಿದ್ದಾರೆ. ಅವರಿಗೆ "ತಾನಿನ್ನು ಬೆಳೆಯುವುದಿಲ್ಲ ನೀವು ಮಾಡು ರಚಿಸಬಹುದು" ಎಂದು ಸ್ವಾಮಿಯ ಅಪ್ಪಣೆಯಾಯಿತು ಎನ್ನುತ್ತಾರೆ. ಹುತ್ತದ ಮನೆಯಲ್ಲಿ ಅಣ್ಣ ತಂಗಿ ಸ್ವಾಮಿ (ತಂಗಿಯ ಹೆಸರು ನಿಂಗಮ್ಮ) ನಾಗ, ರೆಕ್ಕೆಸಿರಿ, ಚಿಕ್ಕು, ನಂದಿಗೋಣ(ಕೋಣ) ಕ್ಷೇತ್ರಪಾಲ- ಹೀಗೆ ಬಿರ್ಮೆರ ಮೂಲತಾನಗಳಲ್ಲಿ ಇರುವಂತೆ ಪರಿವಾರ ದೈವಗಳಿವೆ. ಇಂತಹ ಸ್ವಾಮಿ ಮನೆಗಳಲ್ಲಿ ವರ್ಷಕ್ಕೆ ಒಮ್ಮೆ ಅಥವಾ ಯಾ ಕುಟುಂಬಗಳ ಪದ್ಧತಿಯಂತೆ ಮೂರರಿಂದ ಐದು ದಿನಗಳ ಕಾಲ ಹಗಲು ರಾತ್ರಿ ನಿರಂತರ ಉಪಾಸನೆ ನಡೆಯುತ್ತದೆ. ಈ ಉಪಾಸನೆಯನ್ನು 'ಸ್ವಾಮಿ ಕೋಲ' ಎಂದು ಕರೆಯುತ್ತಾರೆ. ಇದು ಫಲವಂತಿಕೆಯ ಉಪಾಸನೆ.

ಉಡುಪಿ ತಾಲೂಕಿನ ಉತ್ತರ ಭಾಗದಿಂದಾಚೆ ಕನ್ನಡ ಮಾತನಾಡುವ ಭಾಗದಲ್ಲಿ ಸ್ವಾಮಿ ಕೋಲ ನಡೆಯುತ್ತದೆ. ಸ್ವಾಮಿ ಕೋಲದಲ್ಲಿ ನರ್ತನ ಸೇವೆ ನೀಡುವವರು ಪಾಣರು. ಹೀಗಾಗಿ ಈ ಸೇವೆಯನ್ನು 'ಪಾಣರಾಟ' ಎಂದು ಕರೆಯಲಾಗುತ್ತದೆ. ಡಕ್ಕೆ ಬಲಿಯನ್ನು ಇವರೇ ಮಾಡುತ್ತಾರೆ. ಪಾಣ ಡಕ್ಕೆ ಬಾರಿಸುತ್ತಾನೆ. ಸ್ವಾಮಿಯ ನಿರ್ದೇಶಿಸುವ ಕುಟುಂಬ(ಬಂಟ) ಸದಸ್ಯನ ಮುಂದೆ ಪಾಣ ಡಕ್ಕೆ ನುಡಿಸುತ್ತಾ ಸ್ತುತಿ ಹಾಡು ಹಾಡುತ್ತಾನೆ.

ಸ್ವಾಮಿಯನ್ನು ಹೊರುವವನು ಬಂಟರ ಮನೆತನದ ಕುಟುಂಬ ಸದಸ್ಯ.

ಸ್ವಾಮಿ ಕೋಲದಲ್ಲಿ ಕೊಡ್ನೀರು ತರಲು ಹೋಗುವಾಗ ಸ್ವಾಮಿಯನ್ನು ಹೊತ್ತಿರುವ ಕುಟುಂಬ ಸದಸ್ಯನೊಂದಿಗೆ ಸ್ತುತಿ ಹಾಡುತ್ತಾ ಢಕ್ಕೆಯ ನಾದ ಹೊರಡಿಸುತ್ತಾ ಪಾಣ ಹಾಗೂ ಸ್ವಾಮಿ ಕೋಲ ನಡೆಸುವ ಕುಟುಂಬದ ಸದಸ್ಯರು ಹೋಗುತ್ತಾರೆ. ಪಾಣ

ನುಡಿವ ಸ್ತುತಿಯನ್ನು ಕುಟುಂಬದ ಮಹಿಳೆಯರು ಸ್ವಾಮಿಗೆ ಆರತಿ ಎತ್ತುತ್ತಾ ಮರು ನುಡಿಯುತ್ತಾರೆ. ಸ್ವಾಮಿಯ ಮ್ಹುಂದೆ ಮಹಿಳೆಯರು ಹಿಮ್ಮುಖವಾಗಿ ನಡೆಯುತ್ತಾರೆ.

ಸ್ವಾಮಿಯನ್ನು ಪ್ರತಿನಿಧಿಸುವ ಕಲಶ : ಒಂದು ಬಿಂದಿಗೆಯ ಹಿಂದೆ ತಾಮ್ರದ ತಗಡನ್ನು ಇರಿಸಿ (ಕನ್ನಡಿ) ಅದರ ಮೇಲೆ ಸೂರ್ಯ ಚಂದ್ರರ ಚಿತ್ರಗಳನ್ನು ಬಿಡಿಸುತ್ತಾರೆ ಮತ್ತು ಪಿಂಗಾರ ಹೂವುಗಳಿಂದ ಅಲಂಕರಿಸುತ್ತಾರೆ.

ನಾಗ ಕೋಲ : ಸ್ವಾಮಿ ಕೋಲದ ಕೊನೆಯ ಹಂತದಲ್ಲಿ ನಾಗನಿಗೆ ಕೋಲ ನಡೆಯುತ್ತದೆ. ನಾಗನ ಮಾಧ್ಯಮ ಪಾಣ. ತಲೆಗೆ ಅಡಿಕೆ ಪಾಲೆಯ ಒಂದು ಹೆಡೆಯ ಮುಡಿ ಕಟ್ಟುತ್ತಾನೆ. ಹಿಂಭಾಗದಲ್ಲಿ ಒಂದು ಮುಂಭಾಗದಲ್ಲಿ ಒಂದು ಹೀಗೆ ಎರಡು ಹೆಡೆ ಇರುತ್ತದೆ. ಪಟ್ಟೆ ಸೀರೆ ಉಡುತ್ತಾನೆ. ಕೈಯಲ್ಲಿ ಪಿಂಗಾರ ಹಿಡಿಯುತ್ತಾನೆ.

ಕೇಪುಲ(ಕಿಸಗಾರ), ನಾಗ ಸಂಪಿಗೆ, ಪಿಂಗಾರ, ಬಾಲೆಯ(ದಿಂಡು)ಬಂಬೆ ಮುಖ್ಯ ಇವು ಇಲ್ಲಿ ಅರ್ಪಿಸಬೇಕಾದ ಪ್ರಮುಖ ವಸ್ತುಗಳು. ತೆಂಗಿನ ಎಳೆ ಗರಿಗಳ 'ಸಿರಿ ಒಲಿ' ಇರುತ್ತದೆ

ಕೊಡ್ನೀರು ಸ್ತುತಿಸುವ ಸ್ತುತಿ(ನೀರು ತರಲು ಹೋಗುವಾಗ ಸ್ತುತಿಸುವ ಹಾಡು):

ವಾಲ್ಮೀಕಿಯಲ್ಲಿ ದೇವ ಉದಿಯಾದ,
ಸರ್ಪ ಸೈನ್ಯವನ್ನು ತೆಗೆದುಕೊಂಡು
ಭೂಮಂಡಲಕ್ಕೆ ಸ್ವಾಮಿ ಬರುತ್ತೇನೆಂದ
ಗಂಧ ಕಸ್ತೂರಿ ಎಂಬ ವನದೊಳಗೆ
ಅಣ್ಣ ತಂಗಿ ಉದಿಯಾದರು.
ಕುವರಗಿರಿಗೆ ದೇವ ಹೋಗುತ್ತೇನೆಂದ ಕುಮಾರಸ್ವಾಮಿ ತಾನು ಎನಿಸಿಕೊಂಡ
ಕುವರಗಿರಿಗೆ ಮಾರ್ಗ ಹಿಡಿದೆಯಲ್ಲ
ಶೀರೂರಲ್ಲೇ ಬಂದು ಉದಿಯಾದವನೇ ಶೀರೂರಿಗೆ ಮಾರ್ಗ ಹಿಡಿದೆಯಲ್ಲಾ
ಆ ಸ್ಥಳವೇ ಬಿಟ್ಟು ಸ್ಥಳ ಪಡೆದೆಯಲ್ಲ
ಬಿಲ್ಲಾಡಿಯಲ್ಲೇ ಬಂದು ನಿಲುತೆಯೆಂದ
....
ಸ್ವಾಮಿ ಲಿಂಗವೆ ನೀನು ನಿಜವಂತೆ.
ವಾಲ್ಮೀಕದಲ್ಲಿ ದೇವ ಉದಿಯಾದ,
ಗಂಧ ಕಸ್ತೂರಿ ಎಂಬ ವನದೊಳಗೆ
ಸರ್ಪಸೈನ್ಯವ ನೀನು ಮಾಡಿಕೊಂಡು
ಸ್ಥಳ ಬಿಟ್ಟು ಸ್ಥಳ ಮನೆ ಪಡೆದೆಯಲ್ಲ,

ಸುಬ್ರಹ್ಮಣ್ಯಕ್ಕೆ ತಾನು ಬರುತ್ತೇನೆಂದ.
ವಾಲ್ಮೀಕದಲ್ಲಿ ತಾನು ಇರುತ್ತೇನೆಂದ
ಸಾವಿರಾರು ಗಣಗಳ ಕರೆದುಕೊಂಡು .... ಹೀಗೆ ಹಾಡುತ್ತ ಹೋಗುತ್ತಾರೆ.

ಢಕ್ಕೆಬಲಿ ಇದೆ. ಢಕ್ಕೆಯ ಮಂಡಲದ ಎದುರು ಕನ್ಯಾ ಪೂಜೆ ನಡೆಯುತ್ತದೆ. ಇದು ಫಲವಂತಿಕೆಯ ಪೂಜೆ. ನಂದಿಗೋನ ಕೋಲ, ಸ್ವಾಮಿ ಕೋಲ, ಹೆಣ್ಣು ಸ್ವಾಮಿ ನಿಂಗಮ್ಮ ಕೋಲ, ಕ್ಷೇತ್ರಪಾಲ ಕೋಲ, ಗುಳಿಗ ಕೋಲ, ಚಿಕ್ಕು –ಹೀಗೆ ಪರಿವಾರ ದೈವಗಳಿಗೆ ಕೋಲ ಇದೆ. ಕ್ಷೇತ್ರದಲ್ಲಿ ಪ್ರಾಣಿ ಬಲಿ ಇದೆ.

ಕೊನೆಯ ದಿನ , ಮುಂಜಾವ ನಾಗ ಅರ್ಧ ಗಂಟೆಯ ನಾಗ ಕೋಲ ಇದೆ. ಕುಟುಂಬದ ಹಿರಿಯರಿಗೆ ಕೊನೆಗೆ ಮಾಂಸಾಹಾರದ ಎಡೆ ಇಡುತ್ತಾರೆ.

ಎಲ್ಲಾ ಮುಗಿದ ಮೇಲೆ ಸಾಮೂಹಿಕ ಭೋಜನ ಇದೆ.

⌘⌘⌘

೬

ರೆಕ್ಕೆಸಿರಿ ಉಗಮ ಮತ್ತು ವಿಕಾಸ

ರೆಕ್ಕೆಸಿರಿಯನ್ನು ಉಗಮದ ಬಗ್ಗೆ ಭಿನ್ನ ಭಿನ್ನ ಸಂಧಿ ಪಾಡ್ದನಗಳಿದ್ದರೂ ಎಲ್ಲಾ ಪಾಡ್ದನಗಳು ರೆ/ಲೆಕ್ಕೆಸಿರಿಯು ನೀರಿನಿಂದ ಸೃಷ್ಟಿಗೊಂಡವಳು ಎನ್ನುತ್ತದೆ. ಈ ನಂಬಿಕೆ ಸೃಷ್ಟಿಯನ್ನು ಸಂಕೇತಿಸುತ್ತದೆ.

ರೆಕ್ಕೆಸಿರಿಯ ಪರಿಕಲ್ಪನ

ರೆಕ್ಕೆಸಿರಿ ಹುಟ್ಟಿದ್ದು ಕಂದೆಲ್ ನೀರಿನಲ್ಲಿ. ಕಂದೆಲ್ ಎಂಬುದು ಕೊಡದ ಆಕಾರದ ಕಾಲಿರುವ ಮಡಕೆ. ಬಾನು ಸನಬೆರ್/ಸೇನವೆರ್ ಹೆತ್ತವರು ಸತ್ತ ಸೂತಕ ಕಲೆಯಲು ಗಂಗೆನೀರು ಮೀಯಲು ಹೋಗುವುದು ಎಲ್ಲಾ ಪಾಠಗಳಲ್ಲಿ ಇರುವ ಪ್ರಮುಖ ಅಂಶ. "ಬಾನು ಸನಬೆರ್ ಗಂಗೆ ನೀರು ಮೀಯಲು ಹೋದಾಗ ನೀರಿನಲ್ಲಿ ನಿಂಬೆ ಹಣ್ಣು ತೇಲಿ ಬರುತ್ತದೆ. ಅದನ್ನು ಮನೆಗೆ ತಂದು ಮಣ್ಣಿನ ಕಡ್ಯ(ಕೊಡ)ದಲ್ಲಿ ಹಾಕುತ್ತಾರೆ. ತಂಗಿಗೆ ಆ ಕಡ್ಯವನ್ನು ಮುಟ್ಟ ಬಾರದು ಎಂದು ಆದೇಶಿಸುತ್ತಾರೆ. ಆದರೆ ಆಕೆ ಕುತೂಹಲ ತಾಳಲಾರದೆ ಕಡ್ಯ(ಕೊಡ)ದ ಮುಚ್ಚಳ ತೆಗೆಯುತ್ತಾಳೆ. ಆಗ ಏಳು ಹೆಡೆಯ ಸಂಕಮಾಲೆ ಬುಸುಗುಡುತ್ತಾ ತಲೆ ಎತ್ತುತ್ತದೆ. ಆ ಸಂಕಮಾಲೆ ರೆಕ್ಕೆಸಿರಿ. ಇದಕ್ಕೆ ಕೋಲ ಕೊಟ್ಟು ಸಂತೃಪ್ತಗೊಳಿಸುತ್ತಾರೆ(ಐತು ನಲ್ಕೆ ಕಬತಾರ್ ಮುಲ್ಕಿ, ಪ್ರಾಯ ೫೫, ೫–೮–೨೦೦೬).

ಈ ಮಾಹಿತಿಯನ್ನು ನೀಡಿದ ಐತು ನಲ್ಕೆ ಆ ಸಂದರ್ಭದಲ್ಲಿ ಇಡಿಯ ಪಾಡ್ದನ ಹೇಳಲು ಮಾನಸಿಕವಾಗಿ ಸಿದ್ಧನಿರಲಿಲ್ಲ. ರೆಕ್ಕೆಸಿರಿ ಕೋಲದಲ್ಲಿ ಹಾಡುವ ಭಿನ್ನ ಪಾಠಗಳು ಬಾನು ಸನಬೆರ್ ಗಂಗೆ ನೀರು ಮೀಯಲು ಹೋದ ಹಾಗೂ ಅವರು ರೆಕ್ಕೆಸಿರಿಗೆ ವೈಭವದ ಕೋಲ ಮಾಡಿದ ವಿವರಣೆಗಳನ್ನು ಒಳಗೊಂಡಿದೆ.

ಕವತಾರಿನ ಐತು ನಲ್ಕೆ ನಿರೂಪಿಸಿದಂತಹ 'ಕಂದೆಲ್' ಅನ್ನು ಪ್ರತಿನಿಧಿಸುವ ರೆಕ್ಕೆಸಿರಿ ನನ್ನ ಮಾಹಿತಿ ಸಂಗ್ರಹದ ಕಾಲದಲ್ಲಿ ಬಂಟ್ವಾಳ ತಾಲೂಕಿನ ಅನಂತಾಡಿ ನೇಲ್ಗೊಟ್ಟು ಮನೆಯ ಹಿಂದಿನ ಕಾಡಿನಲ್ಲಿ ಕಣ್ಣಿಗೆ ಬಿತ್ತು. ಇದೊಂದು ಹೆಂಚಿನ ಪುಟ್ಟ ರೆಕ್ಕೆಸಿರಿ ಗುಡಿ. ಅದರೊಳಗೆ ಮಣ್ಣಿನ ಕರಗಿದ ಕಂದೆಲ್‌ನ ಬಾಯಿ ಮುಚ್ಚಿತ್ತು. ಅದನ್ನು ತೋರಿಸಿ 'ಇದು ರೆಕ್ಕೆಸಿರಿ' ಎಂದು ನೇಲ್ಗೊಟ್ಟು ಮನೆಯವರು ನುಡಿದಾಗ ನನಗೆ ನಿಧಿ ಸಿಕ್ಕಷ್ಟು ಸಂತೋಷವಾಗಿತ್ತು.

ರೆ/ಲೆಕ್ಕೆಸಿರಿ ಅಂದರೆ ನೆಗೆರೆ. ನಿಗಾರ್/ನಿಗರೆ ಅಂದರೆ ನೀರಿನ ಸುಳಿ, ನೀರಿನೊಳಗಿನ ಅಗೋಚರ ಶಕ್ತಿ ಎಂಬ ವಿವರಣೆ ತುಳು ನಿಘಂಟಿನಲ್ಲಿ ಇದೆ. ರೆಕ್ಕೆಸಿರಿಯನ್ನು ಶಿಷ್ಟರೂಪದಲ್ಲಿ ರಕ್ತೇಶ್ವರಿ ಎನ್ನುತ್ತಾರೆ.

'ರೆಕ್ಕೆಸಿರಿ ನೀರ್‌ಡ್ ನೆಗೆರ್ ಆದ ಉದ್ಯಬೆಂದಿನಾಲ್'(ರೆಕ್ಕೆಸಿರಿ ನೀರಿನಲ್ಲಿ ನೆಗೆರೆ ಆಗಿ ಉದಿಸಿದವಳು) "ನಾಗ ಬನ ಇದ್ದಲ್ಲಿ ದೊಡ್ಡ ದೊಡ್ಡ ಗುಂಡಿಗಳಲ್ಲಿ ನೆಗರೆ ಇದೆ. ಅದು ಗುಂಡಿಯಂತೆ ಇದೆ. ಅದರಲ್ಲಿ ನೆಲ ಇರುವುದಿಲ್ಲ"(ಗುಂಡಿಯ ಆಳ ತಿಳಿಯದು). ನರ ಮನುಷ್ಯ ಯಾರಾದರೂ ಇಳಿದರೆ ನೆಗರೆ ಕೊಂಡು ಹೋಗುತ್ತದೆ. ನೆಗರೆ ಒಂದು ಭೂತ; ಸರ್ಪ. ಅಂದರೆ ನಾಗಕನ್ನಿಕೆ. ನಾಗ ಅಂದರೆ ಗಂಡು; ನಾಗ ಕನ್ನಿಕೆ ಹೆಣ್ಣು. ರಕ್ತೇಶ್ವರಿ ಭೂಮಿ ಉಡೆದ್(ಬಿರಿದು) ಉದಿಸಿದವಳು ಭೂಮಿ(ನೀರು) ಉಂಡಾಗುವಾಗಿ ನೀರಲ್ಲಿ ನೆ/ನಿಗರೆ ಆಗಿ ಬಂದವಳು. ಅವಳಿಗೆ(ನಾಗ) ಬಿರ್ಮೆರ್ ಆಕಾರ ಇದೆ. ಅವಳು ಮಣ್ಣಿನಲ್ಲಿ ಹುತ್ತ ಸರ್ಪ, ನೀರಿನಲ್ಲಿ ನೆಗೆರೆ ಆಗಿ ಬಂದವಳು.

"ನೆಲ ಇಲ್ಲದ ನೀರಿನ ಗುಂಡಿ ನೆಗರೆ. ಅದಕ್ಕೆ ಮಾನವ ಇಳಿದರೆ ನೆಗರೆ ಕೊಂಡು ಹೋಗುತ್ತದೆ. ಇಂತಹ ಗುಂಡಿಗಳ ಬಳಿ ನಾಗ ಬನ ಹೆಚ್ಚಾಗಿ ಇರುತ್ತದೆ. ಗುಂಡಿಯ ನೆಗರೆ ಮತ್ತೆ ರೆಕ್ಕೆಸಿರಿ ಒಂದೇ"(ಹೇಳಿದವರು ಗಂಗಾ(ಮಹಿಳೆ) ಕಲ್ಲ ಮುಂಡ್ಕೂರು ದೇಂದೊಟ್ಟು ೧೫-೩-೨೦೦೭).

"ಆಕಾಶದಲ್ಲಿ ಬರುವಾಗ ದೇವರೆಂದು' ಹೇಳಿಕೊಂಡು ಬಂದ. 'ನೀರಿನಲ್ಲಿ ಬರುವಾಗ ನಿಗಾರ್' ಎಂದು ಹೇಳಿಕೊಂಡು ಬಂದ ದೈವ ರೆಕ್ಕೆಸಿರಿ." ನಿಗಾರೆ/ನೆಗಳೆ ಎಂದರೆ ಮೊಸಳೆ ಜಾತಿಯ ಪ್ರಾಣಿ,

"ಆದಿ ಮೂಲತಾನದ ರೆಕ್ಕಿಸಿರಿ ಆದಿದೈವ ಎಂಬ ನಂಬಿಕೆ ಇದೆ. ಇದು ಹೆಣ್ಣು ದೈವ. ವಾಸ್ತವದಲ್ಲಿ 'ರೆಕ್ಕೆಸಿರಿ' ಎಂಬುದು ನಾಗಕನ್ನಿಕೆಯ ಹೆಸರು. 'ಮೂಜಿರ ಬಾಳೊಲಿ' ಉಪದೇಸಿಯಲ್ಲಿ ದೈವ ಹುಟ್ಟುವುದು. ಅಲ್ಲಿಂದ ಮತ್ತೆ ಕೆಳಗಿನ ದೇಶಕ್ಕೆ, ರಾಜ್ಯಕ್ಕೆ ಬರುವುದು. "ಭೂಮಿಗೆ ಬರುವಾಗ ಭೂಮಿ ತೂಗುವ ದೈವ'ವೆಂದು ಹೇಳಿಕೊಂಡು ಬಂದ (ಇಂದಿರಾ ಹೆಗ್ಗಡೆ, ೨೦೧೨, ಪು. ೧೫೮, ೧೫೬, ನವಕರ್ನಾಟಕ ಪ್ರಕಾಶನ).

"ಪುಲ್ಲ್‌ಡ್ ಕದಿಕೆಡ್ ಉದ್ಭವ ಬತ್ತಿನಿ ಭೂಮಿಡ್ ಪುಟ್ಟಿ ಪಕ್ಕಿ ಪಾರಣೆ, ಪುಲ್ಲ್ ಪುದೆಲ್ ಬತ್ತಿನಿ ಕ್ಷೇತ್ರಪಾಲೆ, ಒಂಜಿ ಅಂಶ ರೆಕ್ಕಿಸಿರಿ/ರಕ್ತೇಶ್ವರಿ".

(ಹುಲ್ಲಿನಲ್ಲಿ, ಕದಿಕೆಯಲ್ಲಿ ಉದಿಸಿದ, ಭೂಮಿಯಲ್ಲಿ ಹುಟ್ಟಿದ ಹಕ್ಕಿ ಪಾರಣೆ, (ಆರಣೆ/ಓತಿಕ್ಯಾತ)ಹುಲ್ಲು ಪೊದೆ ಆಗಿ ಬಂದ(ಗರಿಕೆ ಹುಲ್ಲು) ಕ್ಷೇತ್ರಪಾಲನ ಒಂದು ಅಂಶ ರೆಕ್ಕೆಸಿರಿ – ಹೇಳಿದವರು ಬರೆ ಬೈಲು ಬಾಬು)

ಕ್ಷೇತ್ರಪಾಲ ಎಂದರೆ ನಾಗ, ರೆಕ್ಕೆಸಿರಿ ಎಂದರೂ ನಾಗ ಎನ್ನುತ್ತವೆ ಪಾಡ್ದನಗಳು.

ಜನಪದ ಧರ್ಮದಿಂದ ವೈದಿಕ ಧರ್ಮಕ್ಕೆ ರೆಕ್ಕೆಸಿರಿಯ ಮತಾಂತರ : ರೆ/ಲೆಕ್ಕೆಸಿರಿಯನ್ನು ವೈದಿಕ ಕಲ್ಪನೆಯೊಳಗೆ ತಂದು ಚಂಡಿಯನ್ನಾಗಿಸಿದ್ದು ಜನಪದ ಉಪಾಸನೆಯಲ್ಲಿ

ಪೌರೋಹಿತ್ಯ ವಹಿಸಲು ಬಂದ ಮಾಧ್ವ ವೈಷ್ಣವರು. ಬೆರ್ಮೆರ ಆಲಡೆ, ಬ್ರಹ್ಮಸ್ಥಾನ ಆಗಿ ಪರಿವರ್ತನೆ ಆದ ಮೇಲೆ ಈ ನಂಬಿಕೆ ಇನ್ನಷ್ಟು ಬಿಗಿಯಾಗುತ್ತಿದೆ. ಮಂಗಳೂರು ತಾಲೂಕಿನ ಸಸಿಹಿತ್ಲು ಭಂಡಾರ ಮನೆಯಲ್ಲಿ(೨೩-೪-೨೦೦೬).

ನಾನು ಕಂಡ ರೆಕ್ಕೆಸಿರಿ ದೈವದ ಕೋಲದಲ್ಲಿ ಮಾಧ್ಯಮ ಹೀಗೆ ನುಡಿದ "ರಕ್ತ ಬೀಜಾಸುರರನ್ನು ಕೊಂದು ರಕ್ತೇಶ್ವರಿ ಆದೆ;ದೂಮ್ರ ರಾಕ್ಷಸನನ್ನು ಕೊಂದು ಧೂಮಾವತಿ ಆದೆ" ಎಂದು. ಬಿಡುವಿನ ವೇಳೆಯಲ್ಲಿ ಅವನನ್ನು (ಹೆಸರು ಕುಮಾರ. ಜಾತಿ ಪಂಬದ) ಮಾತನಾಡಿಸಿದೆ. ಆತ ರೆಕ್ಕೆಸಿರಿಯ ಬಗ್ಗೆ ಮಾತನಾಡಲು ಹಿಂಜರಿದ. ಅಲ್ಲೇ ಸಮೀಪದ ಹಳೆಯಂಗಡಿಯಲ್ಲಿ ಪೈ ಎಂಬವರೊಬ್ಬರು ರಕ್ತೇಶ್ವರಿಯ ಮಾಧ್ಯಮನು ಮೇಲಿನಂತೆ ನುಡಿಕೊಟ್ಟಾಗ ಆವೇಶದ ಸಂದರ್ಭದಲ್ಲಿಯೇ ತಡೆದು, 'ರಕ್ತಬೀಜಾಸುರನನ್ನು ಕೊಂದವಳು ನೀನಲ್ಲ ಸುಮ್ ಸುಮ್ಮನೆ ಹೇಳ ಬೇಡ' ಅಂದರಂತೆ. ಇದೊಂದು ಅಭಾಸಕಾರಿ ಪ್ರಸಂಗ. ದೈವ ಮಾಧ್ಯಮನಿಗೆ ಮುಜುಗರ ಉಂಟುಮಾಡುವಂತಹುದು. (ರಕ್ತಬೀಜಾಸುರನನ್ನು ಹೊಡೆದು ಕೊಂದವಳು ಅಂಬಿಕಾ ದೇವಿ ಆತನ ರಕ್ತ ನೆಲಕ್ಕೆ ಬೀಳದಂತೆ ಪಾನ ಮಾಡಿದವಳು 'ಚಾಮುಂಡಾ' ದೇವಿ. ಆ ಸಂದರ್ಭದಲ್ಲಿ ರೆಕ್ಕೆಸಿರಿ ಮಾಧ್ಯಮ, "ನೀನು ಅಲ್ಲ ಎಂದು ಹೇಗೆ ಹೇಳುವೆ" ಎಂದು ಪೈಯವರನ್ನು ಪ್ರಶ್ನಿಸುತ್ತಾನೆ. ಅವರು ದೇವಿ ಭಾಗವತದಲ್ಲಿ ಓದಿರುವ ಬಗ್ಗೆ ಹೇಳಿದ್ದಾರೆ(ದೇವಿ ಭಾಗವತ ಪುರಾಣ, ಅನುವಾದ ಎಡತೊರೆ ಚಂದ್ರಶೇಖರ ಶಾಸ್ತ್ರಿ, ಪು. ೪೩೬-೪೩೮, ೧೯೪೩). ಆಗ ರೆಕ್ಕೆಸಿರಿ ಮಾಧ್ಯಮ "ಬೂಕಲ್ಲಿ ಓದಿ ನನ್ನ ಬಳಿ ವಾದಿಸಬೇಡಿ" ಎಂದು ವಾದಕ್ಕೆ ತೆರೆ ಎಳೆದನಂತೆ.

ತುಳುನಾಡಿನಲ್ಲಿ ದೈವದ ಮಧು ಹೇಳಲು ಬ್ರಾಹ್ಮಣರ ಪ್ರವೇಶ ಆದ ಮೇಲೆ ತುಳುವರ ರೆಕ್ಕೆಸಿರಿ ರಕ್ತೇಶ್ವರಿ ಆಗದ್ದಾಳೆ. ವಾಸ್ತವವಾಗಿ ಯಾವುದೇ ದೈವದ ಮಧುವನ್ನು ಆಯಾ ವಂಶದ ಯಜಮಾನನೇ ಹೇಳುವುದು ತುಳುನಾಡಿನ ಕಟ್ಟುಕಟ್ಟಳೆ. ಆದರೆ ವ್ಯಾಪಾರೀಕರಣದ ಯುಗ ಇದು. ಆದುದರಿಂದ ಮಧು ಹೇಳುವುದೂ ವ್ಯಾಪಾರೀಕರಣ ವಾಗಿದೆ. ನಾನು ಕಡಂದಲೆ ಪರಾಡಿಯಲ್ಲಿ (೮/೨/೦೭) ನೋಡಿದ ರಕ್ತೇಶ್ವರಿ ಕೋಲದಲ್ಲಿ 'ಮದು' ಹೇಳಲು ಕುಳಿತ ಬ್ರಾಹ್ಮಣನೊಬ್ಬ "ರಕ್ತ ಬೀಜಾಸುರರನ್ನು ಕೊಂದು ರಕ್ತೇಶ್ವರಿ ಆದೆ ದೂಮ್ರ ರಾಕ್ಷಸನನ್ನು ಕೊಂದು ಧೂಮಾವತಿ ಆದೆ" ಎಂದು ನುಡಿದಿದ್ದ. ಹೀಗೆ ಬ್ರಾಹ್ಮಣರ ಪ್ರಭಾವ ನಿರಕ್ಷಕುಕ್ಷಿ ದಲಿತ ಕಲಾವಿದರ ಮೇಲಾಗುವುದು ಸಹಜ. ಇದರಿಂದಾಗಿ ಗೊಂದಲಗೊಳಗಾಗುವುದು ದೈವಮಾಧ್ಯಮರು. ಕೊನೆಗೂ ಇಲ್ಲಿ ಬ್ರಾಹ್ಮಣ ಪುರೋಹಿತರ ಮಾತಿಗೆ ಗೌರವ ನೀಡುತ್ತಾರೆ. ಬ್ರಾಹ್ಮಣರಿಗೆ ಇಲ್ಲಿಯ ಜನಪದ ದೈವಗಳನ್ನು ವೈದಿಕ ದೇವರ ಸಾಲಿಗೆ ಸೇರಿಸುವ ಆತುರ. ಹೀಗಾಗಿ ಮತ್ತೆ ಮತ್ತೆ ಹೇಳುವ ಸುಳ್ಳೇ ಸತ್ಯ ಆಗುವಂತೆ ತುಳುನಾಡಿನಲ್ಲಿ ರೆಕ್ಕೆಸಿರಿ ರಕ್ತಬೀಜಾಸುರನನ್ನು ಕೊಂದ ರಕ್ತೇಶ್ವರಿಯಾಗುತ್ತಿದ್ದಾಳೆ.

ತುಳುನಾಡಿನ ತುಳುಜನರ ಸಂಸ್ಕೃತಿ ಸಂಪ್ರದಾಯಗಳ ಜೊತೆ ಬೆರೆತವರು ಸ್ಥಳೀಯ ವೈಷ್ಣವ ಬ್ರಾಹ್ಮಣರು. ಆದರೆ ತುಳುನಾಡು ಶಕ್ತ್ಯಾರಾಧನೆಯ ನೆಲ. ಜೊತೆಗೆ ಪೂರ್ವ ಪರಂಪರೆಯ ದೇವಸ್ಥಾನಗಳು ಶಿವನದ್ದು ಅಥವಾ ಉಲ್ಲಾಲ್ತಿಯದ್ದು ಆಗಿರುತ್ತದೆ. ಉಡುಪಿ ಮಠದ ಪ್ರಭಾವ ಇದ್ದರೂ ವೈಷ್ಣವ ಪ್ರಭಾವದಿಂದಾಗಿಯೂ ವಿಷ್ಣು ದೇವಸ್ಥಾನಗಳು ಹೆಚ್ಚಾಗಿ ತುಳು ಜನರನ್ನು ಆಕರ್ಷಿಸಲಿಲ್ಲ. ಹೀಗಾಗಿ ವೈಷ್ಣವ ಸಂಪ್ರದಾಯದ ಬ್ರಾಹ್ಮಣ ಪುರೋಹಿತರು ಪರಂಪರೆಯನ್ನು ಹೆಚ್ಚಾಗಿ ಪೋಷಿಸುವ ತುಳುವರ ನಾಡಿ ಮಿಡಿತಕ್ಕೆ ತಕ್ಕಂತೆ ಸ್ಪಂದಿಸುವುದು ಅವರ ಅನಿವಾರ್ಯತೆ. ಆದ್ದರಿಂದ ತುಳುಜನರ ಶಕ್ತಿಯ ಆರಾಧನೆಯನ್ನು ವೈದಿಕದ ತೆಕ್ಕೆಗೆ ತರುವಲ್ಲಿ ಸ್ವಲ್ಪ ಮಟ್ಟಿಗೆ ಅವರು ಜಯಶೀಲರಾದರು ಕೂಡ ಇದರಿಂದಾಗಿ ಗೋಜಲುಗಳು ಹೆಚ್ಚಾದುವು. ಭೂತಾರಾಧನೆಯ ಉಪಾಸನೆಯ ಬಗ್ಗೆ ಬ್ರಾಹ್ಮಣರಿಗಿಂತ ಸ್ಥಳೀಯ ಮೂಲನಿವಾಸಿಗಳೇ ಹೆಚ್ಚು ತಿಳಿದವರು ಎಂದು ಗೊತ್ತಿದ್ದರೂ ಜ್ಯೋತಿಷಕ್ಕೆ ಹಾಗೂ ಮತ್ತಿತರ ಕಾರ್ಯಕ್ಕೆ ಬ್ರಾಹ್ಮಣ ಪುರೋಹಿತರನ್ನು ಅವಲಂಬಿಸುವ ಸಂದಿಗ್ಧತೆ ತುಳುವರದ್ದು.

ಬೆಳ್ತಂಗಡಿಯ ನಿವಾಸಿ ಕೋಲ ಕಟ್ಟುವ ಜಯರಾಮನಲ್ಲಿ(ದಿನಾಂಕ ೧೨/೩/೨೦೦೫) ರೆಕ್ಕೆಸಿರಿ/ರಕ್ತೇಶ್ವರಿಯ ಬಗ್ಗೆ ನಡೆದ ಸಂಭಾಷಣೆ ಹೀಗಿದೆ:

ಪ್ರ : ರಕ್ತೇಶ್ವರಿ ಯಾವ ದೈವ?

ಉ : ದೇವಿ.

ಪ್ರ : ಮತ್ತೆ ರೆಕ್ಕೆಸಿರಿ

ಉ : ಅದು ತುಳುಭಾಷೆಯಲ್ಲಿ.

ಪ್ರ : ಈಗ ನೀನು ರಕ್ತೇಶ್ವರಿ ಹೇಳಿದೆ?

ಉ : ಅದು ಭಟ್ರು (ಬ್ರಾಹ್ಮಣರು) ಹೇಳುವುದು.

ಪ್ರ : ನೀವು ಏನಂತ ಹೇಳುತ್ತೀರಿ?

ಉ : ನಾವು ರೆ/ಲೆಕ್ಕೆಸಿರಿ ಎಂದೇ ಹೇಳುವುದು(ಅಲ್ಲಿ ನೆರೆದವರು ಅವನನ್ನು ಸಮರ್ಥಿಸಿದರು).

ಪ್ರ : ರೆಕ್ಕೆಸಿರಿಯ ಆಯುಧ ಯಾವುದು?

ಉ : ಕಡ್ತಲೆ ಮಣಿ. ರೆಕ್ಕೆಸಿರಿಗೆ ಹದಿನಾರು 'ಪರಪು'(ಹೆಸರು) ಇದೆ.

ಪ್ರ : ರೆಕ್ಕೆಸಿರಿಯ(೧೬) ಹದಿನಾರು ಪರಪು ಹೇಳು.

೧ ಪಂಚಜುಮಾದಿ, ೨ ರಕ್ತೇಶ್ವರಿ, ೩ ರೆಕ್ಕೆಸಿರಿ(ಈಕೆ ಮನೆಯ(ಅಂಗಳದಲ್ಲಿ) ದೈವವಾದಾಗ ರೆಕ್ಕೆಸಿರಿ), ೪ ಮುಡಿಪುರಾಯ, ೫ ಪೊಸಲ್ಲದಾರ್, ೬ ಭೂಮಿಡ್ ಭೂಮಿ ತೂಕಂದ್ ದೈವ ೭ ಕನ್ಯಾವು ರಕ್ತೇಶ್ವರಿ, ೮ ಕಾಳರಾಹು, ೯ ಕನ್ಯಾ ಕುಮಾರಿ, ೧೦ ಧರ್ಮ ಅರಸು ಉಲ್ಲಾಕುಲು, ೧೧ ಕುಮಾರ ಸ್ವಾಮಿ, ೧೨ ಪೊಸ ಭೂತ, ೧೩ ಸತ್ಯ ದೈವ, ೧೪ ಪಡಿಕ್ಕಿಲ್‌ತ್ತಾಲ್, ೧೫ ಒರ್ಬಲ್ಲತ್ತಾಲ್(ಒರ್ಮಲದಾಯಿ) ೧೬ ಕಾಳ

ರಾತ್ರಿ – ಇವೆಲ್ಲ ಸ್ತ್ರೀರೂಪ. ಪ್ರತಿ ಆವೇಶದಲ್ಲಿ(ವಸಯ) ರೆಕ್ಕೆಸಿರಿ ಮಾಧ್ಯಮ ವಿಶ್ರಾಂತಿಯ ಪಡೆಯುತ್ತಾನೆ.

ರೆಕ್ಕೆಸಿರಿಯ ೧೬ ಆವೇಶದಲ್ಲಿ ಕಾಳಾರಾತ್ರಿ ಒಂದು. ದೇವೀ ಭಾಗವತದ ಪ್ರಕಾರ ಪಾಪನಾಶಕರವಾದ ೩೨ ಶಕ್ತಿ ದೇವತೆಗಳಲ್ಲಿ ಕಾಳರಾತ್ರಿ ೪ನೆಯದು. ಇವರು ಭಯಂಕರ ಮುಖವುಳ್ಳವರು. ತೋಳಲ್ಲಿ ಚಕ್ರಾಯುಧ ಧರಿಸಿದವರು"(ಇಂದಿರಾ ಹೆಗ್ಗಡೆ, ೨೦೧೨, ನವಕರ್ನಾಟಕ ಪ್ರಕಾಶನ, ಪು. ೧೫೯).

ರೆಕ್ಕೆಸಿರಿ ಕೋಲದಲ್ಲಿ ೭ ೧/೨ ಕೋಲು ಎತ್ತರದ ಅಣಿ ಇರುವುದು ಪರಂಪರೆಯ ಪದ್ಧತಿ. ಅದರ ತುದಿಯಲ್ಲಿ ಬಿಳಿಯ ಶಾಸ್ತ್ರದ ಹುಂಜ ಇರಬೇಕು. ಅದು ಮುಂಜಾವದಲ್ಲಿ ಅಲ್ಲಿಂದ ಕ್ಕೋ ಕ್ಕೋ ಎನ್ನುತ್ತದೆ. ನಾಗ ಬಿರ್ಮೆ ಉಲ್ಲಾಯ, ನಾಲ್ಕಾಯಿ ತಾಯಿ, ಅರಸು ದೈವ ಮಾಂಕಾಲ್ದಿ (=ಮಹಾ ಕಾಳಿ) – ಮುಂತಾದ ಭೂತ/ದೈವಗಳಿಗೂ ೭ ೧/೨ ಕೋಲು ಉದ್ದ ಅಣಿ ಬೇಕು. ಅದರಲ್ಲಿ ೧೦೦೧ ಹೆಡೆಯ ಚಿತ್ರ ಇರಬೇಕು.

ಮಂಗಳೂರು ತಾಲೂಕಿನ ಸಸಿಹಿತ್ಲು ಭಂಡಾರ ಮನೆಯಲ್ಲಿ (೨೩–೪–೨೦೦೬) ನಾಗ ಬೆರ್ಮೆರ ಪರಿವಾರ ಕೋಲದಲ್ಲಿ, ಮೂರು ರೂಪದ ರೆಕ್ಕೆಸಿರಿ ಇತ್ತು. ಒಂದು ಸೌಮ್ಯ, ಮಾಮೂಲಿ ಕೋಲದಂತೆ. ಈ ರೆಕ್ಕೆಸಿರಿಗೆ ೭.೫ ಕೋಲು ಉದ್ದದ ಅಣಿ ಇತ್ತು ಆದರೆ ತುದಿಯಲ್ಲಿ ಬಿಳಿಯ ಶಾಸ್ತ್ರದ ಹುಂಜ ಇರಲಿಲ್ಲ. ಇನ್ನೊಂದು ಬಣ್ಣಗಾರಿಕೆ ಇಲ್ಲದೆ ಕತ್ತಿನಿಂದ ನೀಟಾಗಿ ಕಾಳಿನವರೆಗೆ ಇಳಿಬಿಟ್ಟ ಸಿರಿ ಒಲಿಯನ್ನು ಹಾರಿಸಿ ಕುಣಿಯುವ ರೆಕ್ಕೆಸಿರಿ ಮುಖಕ್ಕೂ ಸಿರಿ ಒಲಿ ಹಾರಿಸಿ ಅಮೋಘ ನರ್ತನ ಮಾಡುತ್ತದೆ. ಈಕೆ ಕ್ಷೇತ್ರದ(ಬ್ರಾಹ್ಮಣ) ಯಜಮಾನನ್ನು ನೆಟ್ಟ ನೋಟದಿಂದ ನೋಡುವಾಗ ಯಜಮಾನ ಆವೇಶಕ್ಕೆ ಒಳಗಾಗುತ್ತಾನೆ. ಆಗ ಅವರ ಮೇಲೆ ರೆಕ್ಕೆಸಿರಿಯು ತನ್ನ ಪವಿತ್ರ 'ಕೂಚಿ'ಯ ನೀರನ್ನು ಪ್ರೋಕ್ಷಿಸುತ್ತಾಳೆ. ಆವೇಶಗೊಂಡಿದ್ದ ಯಜಮಾನ ಯಥಾ ಸ್ಥಿತಿಗೆ ಮರಳುತ್ತಾನೆ. ಆ ಮೇಲೆ ಉಳಿದ ಇಬ್ಬರು ಬ್ರಾಹ್ಮಣರನ್ನು ದಿಟ್ಟಿಸಿ ಆವೇಶ ಬರಿಸುತ್ತದೆ ರೆಕ್ಕೆಸಿರಿ. ಆದರೆ ಪರಸ್ಪರ ಮಾತು ಕತೆ ಇಲ್ಲ.

ಮೂರನೆಯ ರೆಕ್ಕೆಸಿರಿ ಅದೇ ವೇಷದಲ್ಲಿ ಮುಖಕ್ಕೆ ಮಸಿ ಹಚ್ಚಿ ಬರುತ್ತದೆ. ಮನರಂಜನೆಯೇ ಇಲ್ಲಿ ಮುಖ್ಯ. ದಶದಿಕ್ಕುಗಳಿಗೂ ಓಡುತ್ತದೆ. ಅದನ್ನು ಹಿಡಿಯಲು ಜನ ಓಡುತ್ತಾರೆ. ಇದನ್ನು ಹುಚ್ಚು ರೆಕ್ಕೆಸಿರಿ ಎನ್ನುತ್ತಾರೆ.

ಕಡಂದಲೆ ಪರಾಡಿಯಲ್ಲಿ ರೆಕ್ಕೆಸಿರಿ ಕ್ಷೇತ್ರ ಪರಾಡಿಯ ಚಾವಡಿಯ ಬಲದ ದಿಕ್ಕಿನಲ್ಲಿ ಇದೆ. ಈ ಗುಡಿಯ ಮುಂದೆ ಕೋಲದ ನರ್ತನ ನಡೆಯುತ್ತದೆ. ಕೋಲ ನಡೆಯುವ ಮೊದಲು ನೆಲದ ಮೇಲೆ ನಾಗನ ಹೆಡೆಯ ಮಂಡಲ ಬಿಡಿಸುತ್ತಾರೆ. ಅರಶಿನ ಪುಡಿಯಲ್ಲಿ ಹಾವಿನ ಚಿತ್ರ ಬಿಡಿಸಿ ಕೆಂಪು ಚುಕ್ಕೆಯಿಡುತ್ತಾರೆ. ಹೆಡೆಯ ಸುತ್ತ ಶೇಡಿ ಪುಡಿ ಉದುರಿಸುತ್ತಾರೆ. ಮಂಡಲದ ಮಧ್ಯೆ ಸುತ್ತೆ ಇಡುತ್ತಾರೆ. ನಾಗ ಮುಡಿ ಹೊತ್ತ ರೆಕ್ಕೆಸಿರಿ ಅಮೋಘ ನೃತ್ಯ ಮಾಡುತ್ತದೆ. ಅದರ ಜೊತೆ ಮರ್ಲ್ ಭೂತ ಇದೆ.

ಬಾಲಕನೋರ್ವ ಕೋಡಂಗಿ ವೇಷದ ಬಣ್ಣ ಬಳಿದು ತನ್ನ ಚೇಷ್ಟೆಗಳಿಂದ ರೆಕ್ಕೆಸಿರಿ ದೈವದ ಜೊತೆ ಓಡಾಡಿ ನೃತ್ಯ ಮಾಡುತ್ತಾ ಜನರನ್ನು ರಂಜಿಸುತ್ತಾನೆ. ಈ ನರ್ತನ ಅಥವಾ ನಟನೆ ರೆಕ್ಕೆಸಿರಿಯ ಕಡೆಯಿಂದ ಜನರ ಗಮನವನ್ನು ಸೆಳೆಯುವ ತಂತ್ರ ಮಾತ್ರ ಎಂದ ರೆಕ್ಕೆಸಿರಿ ದೈವ ಮಾಧ್ಯಮ. ಹುಡುಗನ ನಟನೆ ಬಾಕುಡರ ನಾಗ ಬಿರ್ಮೆರ ಕೋಲದ ಕುಡಂಗೆರ್ ದೈವದ ಪಾತ್ರವನ್ನು ಹೋಲುತ್ತದೆ.

ಕಾರ್ಕಳ ತಾಲೂಕಿನ ಬೋಲ ಸೋಮನಾಥ ದೇವಸ್ಥಾನ ಸೋಮನಾಥನು ಜಾತ್ರೆಯ ನಾಲ್ಕನೆಯ ದಿನ ಜಳಕಕ್ಕೆ ಹೋದವನಿಗೆ ಮರಳಿ ದೇವಸ್ಥಾನ ಒಳಗೆ ಬರಲು 'ಗಂಡ ಗಣಗಳು' ಬಿಡುವುದಿಲ್ಲ ಗಂಡ ಗಣಗಳನ್ನು ರೆಕ್ಕೆಸಿರಿ ಓಡಿಸಿ ಸೋಮನಾಥನನ್ನು ಸೆರೆಯಿಂದ ಬಿಡಿಸುತ್ತಾಳೆ. ಆಮೇಲೆ ಸೋಮನಾಥ ರೆಕ್ಕೆಸಿರಿಗೆ ತಪ್ಪು ಕಾಣಿಕೆ ಇಟ್ಟು ದೇವಸ್ಥಾನದ ಒಳಗೆ ಹೋಗುತ್ತಾರೆ. ಇದು ಜನಪದ ಕ್ಷೇತ್ರವನ್ನು ವೈದಿಕ ದೇವರು ಆಕ್ರಮಿಸಿದುದರ ಸಾಂಕೇತಿಕ ಆಚರಣೆ. ನನ್ನ ಈ ಕ್ಷೇತ್ರಕಾರ್ಯಕ್ಕೆ ಸಹಕಾರ ನೀಡಿ ಮಾಹಿತಿ ನೀಡಿದ ಬಾಬು ನಲ್ಕೆ ರೆಕ್ಕೆಸಿರಿ ಮಾಧ್ಯಮನಾಗಿ ಬಹಳ ಪ್ರಸಿದ್ಧಿ ಹೊಂದಿದ್ದಾನೆ.

ಬೈಲಂಗಡಿಯ ಓಣಿಯಾಯಿ ಗುತ್ತಿನ ನಾಗಬೆರ್ಮೆರ ಕೋಲದಲ್ಲಿ ರೆಕ್ಕೆಸಿರಿಯ ಜೊತೆ ಬಾವನಾ ಎಂಬ ಹೆಸರಿನ ದೈವ ಇದೆ. ಬಾವನಾ ಸೂರೆ ಮಾಡಲು ಹೋಗಿ ಸೂರೆ ತರುವ ಆಚರಣೆ ಇದೆ.

***

ರೆಕ್ಕೆಸಿರಿ ನಾಲ್ಕು ಪಾಡ್ದನಗಳು ಇಲ್ಲಿವೆ. ಅವುಗಳಲ್ಲಿ ಕಮಲ ಹೇಳಿದ ಲೆಕ್ಕಿಸಿರಿ ಪಾಡ್ದನ ಪುಟ್ಟದಾಗಿದೆ. ತುಳುನಾಡಿನಲ್ಲಿ ಗಿಡಮರಗಳ, ಕಾಯಿ ಯಾರೂ ಕುಯ್ಯಬಾರದೆಂದು ಬಟ್ಟೆಯ ಚೂರನ್ನು ಅಥವಾ ಏನಾದರೂ ವಸ್ತುವನ್ನು ಸಂಬಂಧಿಸಿದ ಫಲ ಬಿಡುವ ವೃಕ್ಷಕ್ಕೆ ಅಥವಾ ತರಕಾರಿಗಳಿಗೆ ಕಟ್ಟುತ್ತಾರೆ. ಇದನ್ನು "ಕೊಡಿ ಕಟ್ಟುವುದು" ಎನ್ನುತ್ತಾರೆ. ಅಂದರೆ ದೈವದ ಹೆಸರಲ್ಲಿ ನಿಷೇಧಿಸುವುದು. ಯಾವ ದೈಯವನ್ನು ನಂಬಿ ಕೊಡಿ ಕಟ್ಟುತ್ತಾರೆಯೋ ಆ ದೈವ ಅಲ್ಲಿ ಕಾವಲಿದ್ದು ಕದ್ದವರಿಗೆ ಶಿಕ್ಷೆ ನೀಡುತ್ತದೆ ಎನ್ನುವ ನಂಬಿಕೆ ಇದೆ. ತುಳುನಾಡಿನ ಜನತೆಗೆ ಇದರ ಪರಿಚಯ ಇದೆ. ಹೀಗಾಗಿ ಯಾರೂ ಕದ್ದು ತಿನ್ನಲು ಧೈರ್ಯ ಮಾಡುವುದಿಲ್ಲ. ಅಂತಹ ಕಥೆಯನ್ನು ಒಳಗೊಂಡ ಪಾಡ್ದನವನ್ನು ಕಮಲ ಹಾಡಿದ್ದಾಳೆ.

ಸೇಸು ಬೀರ ರೆಕ್ಕೆಸಿರಿಯ ಪ್ರತಾಪವನ್ನು ನಿರೂಪಿಸುತ್ತದೆ. ಅವಳು ಉದ್ದೇಶ ಪೂರ್ವಕವಾಗಿ ರೆಕ್ಕೆಸಿರಿಯ ಉಗಮದ ಭಾಗವನ್ನು ಬಿಟ್ಟು ಹಾಡಿದ್ದಾಳೆ ಎನ್ನುವುದು ನನ್ನ ಭಾವನೆ. ಆಕೆ ದೈವದ ಆವೇಶಕ್ಕೆ ಹಿನ್ನೆಲೆಯಿಂದ ಪಾಡ್ದನ ಹಾಡಿ ದೈವದ ಪರಕಾಯ ಪ್ರವೇಶಕ್ಕೆ ನಾಂದಿ ಹಾಡುವವಳಾದುದರಿಂದ ಅವಳ ಆತಂಕ ಸಾಧುವಾದುದು.

ಆಕೆಯ ಮಗ ಜಿನ್ನಪ್ಪ ಒತ್ತಾಯಿಸಿದರೂ ಆಕೆ ಹೇಳಲಿಲ್ಲ. ಅಷ್ಟೇ ಇರುವುದು ಎಂದಳು.

ಬರೆ ಬೈಲು ಬಾಬು ಹಾಡಿದ ಪಾಡ್ದನದ ಆರಂಭದಲ್ಲಿ ಒಕ್ಕೆತೆರಿ(ಬಂಟ)ಜಾತಿ ಎನ್ನಲಾಗಿದೆ. ಗಂಗೆಗೆ ಹೋಗುವ ಬಾನು ಸೇನವರು ಒಕ್ಕೆತ್ತಿರಿ ಆಗಿರಬಹುದು. ಆದರೆ ಸತ್ತವರ ಎಲುಬು ಬೂದಿಯನ್ನು ಗಂಗೆ(ನೀರಿಗೆ) ಹಾಕುವ ಪದ್ಧತಿ ಬಂಟರಲ್ಲೂ ಇರಲಿಲ್ಲ.

ಎಂಕಮಳು ಹಾಡಿದ ಪಾಡ್ದನದಲ್ಲಿ ಬಾನು ಸನಬರು ನೂಲು ಹಾಕಿದವ ಎಂಬ ನಿರೂಪಣೆ ಇದೆ.

ಕವತ್ತಾರಿನ ವೇದ ಹಾಡಿದ ಪಾಡ್ದನದಲ್ಲಿ ಗಂಗೆ ಮೀಯಲು ಹೋಗುವವರು ಸಾಯನ ಬೈದರು. ಇವರು ಬೈದ್ಯ/ಬಿಲ್ಲವರು.

⌘⌘⌘



ಕೋಲದಲ್ಲಿ ರೆಕ್ಕೆಸಿರಿ, ಶಶಿಹಿತ್ಲು

೭

ರೆ/ಲೆಕ್ಕೆಸಿರಿ ಪಾಡ್ದನ ೧

ಹಾಡಿದವರು : ಎಂಕಮ (ಮಹಿಳೆ) ಪ್ರಾಯ : ೬೦
ಜಾತಿ : ನಲ್ಕೆ, ಕೊಲ್ಲೂರು ಮುಲ್ಕಿ.

ಎಂಕಮಳ ಪಾಡ್ದನದ ಪ್ರಕಾರ ಮನೆಯ ಒಳಗಿನ ಕಲೆಂಬಿಯಲ್ಲಿ ಹುತ್ತ ಕಟ್ಟಿ ಹುತ್ತದಿಂದ 'ಸಂಕಮಾಲೆ ಸರ್ಪ' ರೂಪದಲ್ಲಿ ರೆಕ್ಕೆಸಿರಿ ಹೆಡೆಯೆತ್ತಿ ಬುಸುಗುಡುತ್ತಾಳೆ. "ರೆಕ್ಕೆಸಿರಿ ಏಲ್ ಜಿಡೆದ ಸಂಕಮಾಲೆ ಆದ ಪುಂಚೊಡು ಮೂಡುವೇ....."(ರೆಕ್ಕೆಸಿರಿ ಏಳು ಹೆಡೆಯ ಸಂಕಮಾಲೆ ಆಗಿ ಹುತ್ತದಲ್ಲಿ ಮೂಡುತ್ತಾನೆ).

ಈ ಪಾಡ್ದನದಲ್ಲಿ ಬಾನು ಸನಬೆರ್ ನೂಲು ಹಾಕುವ ಬ್ರಾಹ್ಮಣ ಎಂದು ಹೇಳಿದೆ. ಗೋಕರ್ಣಕ್ಕೆ ಪಿಂಡ ಹಾಕಲು ಹೋಗುವವವರು ಶೈವ/ಸ್ಥಾನಿಕ ಬ್ರಾಹ್ಮಣರು. ಸ್ಥಳೀಯ ಸಂಸ್ಕೃತಿಯ ಭೂತಾರಾಧನೆಯನ್ನು ಬ್ರಾಹ್ಮಣರು ಒಪ್ಪುವುದು ಅನಿವಾರ್ಯ ಸಂದರ್ಭಗಳಲ್ಲಿ. ಆದರೂ ದೈವಗಳನ್ನು ಬ್ರಾಹ್ಮಣರು ನಂಬಿ ಮನೆಗೆ ತರುವ ಅನೇಕ ಪಾಡ್ದನಗಳು ತುಳುನಾಡಿನಲ್ಲಿ ಇವೆ. ಹೀಗಾಗಿ ರೆಕ್ಕೆಸಿರಿ ದೈವವೂ ಬ್ರಾಹ್ಮಣರಿಗೆ ಒಲಿದು ರಕ್ತೇಶ್ವರಿ ಆಗಿರುವ ಸಾಧ್ಯತೆ ಇದೆ.

*****

ವಿ.ಸೂ : ಆರಂಭದ ಪಾಡ್ದನದಲ್ಲಿ ಹೇಳಿದಂತೆ ಮೂಲ ಪಾಠದ ಭಾವ, ಧ್ವನಿ, ಲಯವನ್ನು ಉಳಿಸಲು, ದೀರ್ಘ ಸ್ವರ ತರಲು * ಸೂಚಿಯನ್ನು ನೀಡಲಾಗಿದೆ

ತುಳು ಮೂಲ

೧

ಅಪ್ಪೆಂದ್ ಪನ್ನಗ ಉಲ್ಲೆರ್‌ಗೆನ ನನ
ಅಪ್ಪೆ ದೂ... ಉಲ್ಲೆರ್‌ಗೇ ಮದ್ಮಲ್ ಯೇ..
ಅಮ್ಮೇರ್ ಏರಂದ್ ಪನ್ನಗ ಉಲ್ಲೆರೆ
ಅಮ್ಮೆರ್ ನೂಲು ಪಾಡು ಬಾನು ಸನಬೆರ್ ಯೇ
ಅಕಲೆಗ್ ಇರ್ವೆರಿಯೇ ಬಾಲೆಲು ಪುಟ್ಟುವೆರ್
ಇರ್ವೆರ್ ನೂಲನಂದ ಮಾನಿಲು ಯೇ
ಅಕಲೆಗ್ ಪುಟ್ಟಿನವು ಗಳಿಗೇ ರಾಶಿಡ್
ಅಪ್ಪೆರೆ ಅಮ್ಮೆರೆ ಅಲಿವುರ ಅಂತರ ಬತ್ತಂಡ್ ಯೇ.
ಅಪ್ಪೆರೆ ಅಮ್ಮೆರ ಅಲಿವುರ ಅಂತರ ಬತ್ತಂಡೇ
ಅಕಲೆಗ್ ಒಂಜಾ ಸಾವು ಮಲ್ಪುವೆರ್‌ಯೇ...
ಏ....ಏ....ಏ...

೨

ಆಯೆರೆಡೆ ಕುಕ್ಕಿಮರ ಈಯೆರೆಡೆ
ಪೆಜ ಮೆರ ಕಡ್ಪಾದೆರ್ ಯೇ......
ಪೇರ್ ಪರ್ಪುನ ಕಾಲೊಡು ಅಪ್ಪೆರೆ
ಅಲಿ ಅಂತರ ಬತ್ತಂಡ್ ಯೇ...
ನುಪ್ಪು ಉನ್ಪುನ ಕಾಲೊಡು ಅಮ್ಮೆರೆಗೇ
ಅಲಿ ಅಂತರ ಬತ್ತಂಡ್ ಯೇ

೩

ವಾ....ಬಾಲೆಲು ಪನ್ಪೆರ್‌ಗೇ...ನನ
ಎಂಕುಲು ಎಂಚ ಇಪ್ಪುನುಗೇ ಯೇ
ಆಟಿಯಾ ಗುತ್ತುಡು ಒಕ್ಕೆಲ್ ಸಕ್ಕೆಲ್
ಲೆಪ್ಪದೀಯರವು ಬಾಲೆಲು ಯೇ
ಆಯೆರೆಡೆ ಕುಕ್ಕಿ ಮರ ಈಯೆರೆಡೆ
ಪೆಜಮರ ಕಡ್ಪಾದೆರ್ಯೇ
ಆಯೆರೆಡೆ ಕುಕ್ಕಿ ಮರ ಈಯೆರೆಡೆ

ಕನ್ನದ ಅನುವಾದ

೧

ಅಬ್ಬೆ ಎಂದಾಗ ಇದ್ದಾರಂತೆ ಇನ್ನು
ಅಬ್ಬೆ ದೂ....ಇದ್ದಾರಂತೆ ಮದುಮಗಳು ಯೇ*
ಅಪ್ಪಾವ್ರು ಯಾರೆಂದು ಹೇಳುವಾಗ ಇದ್ದಾರೆ
ನೂಲು ಹಾಕುವ ಬಾನು ಸನಬರು ಯೇ*
ಅವರಿಗೆ ಇಬ್ಬರು ಯೇ* ಮಕ್ಕಳು ಹುಟ್ಟುವರು
ಈರ್ವರು ನೂಲನಂದ ಗಂಡುಮಕ್ಕಳು ಯೇ*
ಅವರಿಗೆ ಹುಟ್ಟಿದ ಘಳಿಗೆ ರಾಶಿಯಲ್ಲಿ
ಅಬ್ಬೆಯವರು ಅಪ್ಪಾವ್ರು ನಾಶ ಆದರು
ಅಬ್ಬೆಯವರು ಅಪ್ಪಾವ್ರು ನಾಶ ಆದರು
ಅವರಿಗೆ ಒಂದು ಸಾವು ಮಾಡುತ್ತಾರೆ ಯೇ*
ಏ....ಏ....ಏ...

೨

ಆ ದಡದಲ್ಲಿ ಮಾವು ಮರ ಈ ದಡದಲಿ
ಹೆಬ್ಬಲಸು ಮರ ಕಡಿಸಿದರು ಯೇ*
ಹಾಲು ಕುಡಿಯುವ ಕಾಲಕ್ಕೆ ಅಬ್ಬೆಯವರು
ನಾಶ ಆದರು ಯೇ
ಅನ್ನ ಉಣ್ಣುವ ಕಾಲಕ್ಕೆ ಅಪ್ಪಾವ್ರು
ನಾಶ ಆದರು ಯೇ

೩

ವಾ...ಮಕ್ಕಳು ಹೇಳುತ್ತಾರೆ ಯೇ*
ನಾವಿನ್ನು ಹೇಗೆ ಇರುವುದೂ
ಆಟಿಯಾ ಗುತ್ತುನಲ್ಲಿ ಒಕ್ಕಲು ಸಕ್ಕಲು
ಕರೆಸಿದರವು ಮಕ್ಕಳು ಯೇ
ಆ ದಡದಲ್ಲಿ ಮಾವು ಮರ ಈ ದಡದಲಿ
ಹೆಬ್ಬಲಸು ಮರ ಕಡಿಸಿದರು ಯೇ*
ಆ ದಡದಲ್ಲಿ ಮಾವು ಮರ ಈ ದಡದಲಿ

ಪೆಜಮರ ಕಡ್ಪಾದೆರ್ಯೇ
ಜೋಡು ಬಾಕ್ಯಾರ್ಡ್ ಕಾಟ್ಟ ದಿಪಾದೆರ್ಯೇ
ಜೋಡು ಪುನೊನು ಕೊಂಡು ದೀಪಾದೆರ್ಯೇ
ಅವು ಬಾಲೆಲು ಪನ್ಪೆರ್ ಯೇ
ಜೋಡು ಕಾಟ ಗೂರುದೆರ್‌ಗೇ ನನ
ಜೋಡು ಪುನೊನು ಕೊಂದು ದೀಪೆರ್ ಯೇ

೩

ಆವಾ ಬಾಲೆಲು ಪತ್ತ್ ಪದಿನಾಜಿ ದಿನತಾನಿ ಪನ್ಪೆರ್ ಯೇ
ಅಮ್ಮೆರೆ ಪಿಲವು ಅಪ್ಪೆರೆ ಪಿಲೆ
ಆನಿಗೇ ಒಂಜಾವು ಮಲ್ತೆರ್ ಯೇ
ಪಿಲೆನೇ ಒಂಜಾವು ಕಡದ್‌ಂಡೇ ನನ ಗೋಕರ್ಣೋರ್
ಪೋಪಿನಿಗೆನಾ

ಆತನ ಪೊರ್ತುಡು ರೆಂಜಿರೆಗೇನಾ
ಗೋಕರ್ಣೋರ್ ಒಂಜಾ ಎಂಕುಲೆ ಪೋವೊಡುಗೇ
ಅಮ್ಮೆರೆ ಅಂಗೊನು ಪೆಜ್ಜಿದೆರ್ ಬಾಲೆಲು
ಅಪ್ಪೆರೆ ಅಂಗನೊ ಪೆಜ್ಜಿದೆರ್ ಯೇ
ಅಮ್ಮೆರೆ ಅಂಗನೋ ಪೆಜ್ಜಿದೆರೆ ಬಾಲೆಲು
ಪೊಸ ಕರಟೇ ಪಾಡಿದೆರ್ ಯೇ
ಪೊಸ ಕರಟ್ ಪಾಡಿದೆರ್ ಬಾಲೆಲು
ಗೆಂದ ತಾರೆ ಪದ್ಮ ಕಟ್ಟಿಡ್ ದಿತೆರ್ ಯೇ
ಅಪ್ಪೆರೆ ಅಂಗನು ಪೆಜ್ಜಿದೆರ್‌ಗೆ ಬಾಲೆಲು
ಆನಿಗೆ ಪೇರ್ ಬರ್ಕೆ ಮರಟ್ ದೀತೆರ್ ಯೇ
ಅವ್ವಾ ಅಂಗನು ಪತೊಂದು ಪೋಪೆರೇ
ಗೋಕರ್ಣದವುಲು ಪತೊಂದು ಪೋನಗ ಯೇ

ಹೆಬ್ಬಲಸು ಮರ ಕಡಿಸಿದರು ಯೇ*
ಬಾಕಿಮಾರಿನಲ್ಲಿ ಜೋಡು ಚಿತೆ ಇಡಿಸಿದರು
ಜೋಡು ಶವವನ್ನು ಕೊಂಡು ಇಡಿಸಿದರೂ
ಅವು ಮಕ್ಕಳು ಹೇಳುತ್ತಾರೆ ಯೇ*
ಜೋಡು ಚಿತೆ ಕಟ್ಟಿಸಿದರಂತೇ ಇನ್ನು
ಜೋಡು ಶವವನ್ನು ಕೊಂಡು ಇಟ್ಟರು ಯೇ*

೩

ಅವು ಮಕ್ಕಳು ಹತ್ತು ಹದಿನಾರು ದಿನದಂದು ಹೇಳುತ್ತಾರೆ ಯೇ*
ಅಪ್ಪಾವ್ರ ಬೂದಿ ಅಬ್ಬೆಯ ಬೂದಿ
ಅಂದೇ ಒಟ್ಟಾಗಿ ಮಾಡಿದರು ಯೇ*
ಬೂದಿಯನ್ನು ಒಂದಾಗಿಸಿ ಇನ್ನು ಗೋಕರ್ಣಕ್ಕೆ
ಹೋಗುವುದಂತೆ ಯೇ*

ಅಷ್ಟು ಹೊತ್ತಲ್ಲಿ ರೆಂಜಿರೆಯಂತೆ ಯೇ*
ಗೋಕರ್ಣಕ್ಕೆ ಒಂದೋ ನಾವು ಹೋಗಬೇಕು ಯೇ*
ಅಪ್ಪವ್ರು ಎಲುಬನ್ನು ಹೆಕ್ಕಿದರು ಮಕ್ಕಳು
ಅಬ್ಬೆಯವರ ಎಲುಬನ್ನು ಹೆಕ್ಕಿದರು ಯೇ*
ಅಬ್ಬೆಯೆ ಎಲುಬನ್ನು ಹೆಕ್ಕಿದರು ಮಕ್ಕಳು
ಹೊಸ ಮಡಿಕೆಯಲ್ಲಿ ಹಾಕಿದರು ಯೇ*
ಹೊಸ ಮಡಿಕೆಯಲ್ಲಿ ಹಾಕಿದರು ಮಕ್ಕಳು
ಗೆಂದಾಳೆ ತಾಳೆಯ ಪದ್ಮ ಕಟ್ಟೆಯಲ್ಲಿ ಇಟ್ಟರು ಯೇ*
ಅಪ್ಪಾವ್ರು ಎಲುಬನ್ನು ಹೆಕ್ಕಿದರು ಮಕ್ಕಳು
ಅಂದಿಗೆ ಹಾಲು ಬರ್ಕೆ ಮರದಲ್ಲಿ ಇಟ್ಟರು ಯೇ *
ಆ ಎಲುಬನ್ನು ಹಿಡಿದುಕೊಂಡು ಹೋಗುತ್ತಾರೆ*
ಗೋಕರ್ಣದಲ್ಲಿ ಹಿಡಿದು ಹೋಗುವಾಗ ಯೇ*

೪

ಅಮ್ಮೆರೆ ಅಂಗೊನೇ ಪತೊಂದು ಪೋಪೆರ್
ಬಾಲೆಲು ನಡುದಳದಿಲಾನಗ ಯೇ
ನಡುದಳದಿಡ್ ಕಂತಿಯೆರ್
ಬಾಲೆಲು ತರೆ ಒಂಜವು ಮುರ್ಕುದೆರ್ ಯೇ
ಅಪ್ಪೆರೆ ಅಂಗೊನು ಪತೊಂದು ಪೋತೆರ್
ಸೊಂಟದಾ ಒಂಜಾ ಮುರ್ಕುದೆರ್ ಯೇ
ಮುರ್ಕುದು ಮಿತ್ತ್ ತೂನಗ ತೋಜುಂಡೆ
ಬರ್ಪುಂಡು ದಳದಿಡ್ ಲಿಂಬೆದ ಪುಳಿಗೆ ಯೇ
ಅವ್ವೆನ್ ಲಿಂಬೆದ ಪುಲಿಯೇ ಪನ್ಪೆರ್
ನಲಿತೊಂದು ನಲಿತೊಂದು
ಬಾಲೆಲ ಕಯಿತಲ್ ಬನ್ನಗ ಯೇ
ಅವ್ವೆನ್ ಬಾಲೆಲು ಪೆಜ್ಜಿದ್
ನನ ಪತೊಂದು ಮಿತ್ತೆ ಬರುವೆರ್ ಯೇ
ಬಾಲೆಲು ಮಿತ್ತ್ ಒಂಜಾ ಬತ್ತ್ ಬರುವೆರ್
ಲಿಂಬೆದ ಪುಲಿನ್ ಚಾವಡಿಗ್ ಒಯ್ತಿ ದಕ್ಕಿಯೆರ್ ಯೇ
ಅವುಲು ದಡ್ಡಪ್ಪ ಬೂರುದನ ಬಾಲೆಲು
ಎಂಕಲೆಗ್ ನನ ಗತಿ ಇಜ್ಜಿ ದೇವೆರೆ ಇಂದ್ ಪನ್ಪೆರ್ ಯೇ

೫

ಅಂದೆಯೇ ಇಂದ್ ದಿಡ್ಕಪ್ಪ ಲಕ್ಕಿಯೆರ್
ಲಿಂಬೆದ ಪುಲಿನ್ ಕಲೆಂಬಿದ ಉಲಯೇ
ಒಂಜಾ ಪಾಡಿಯೆರ್ ಯೇ
ಕಲ್ಲ ಕಲೆಂಬಿದವು ಉಲಯಿ ಪಾಡಿಯೆರೆ
ಲಿಂಬೆದ ಪುಲಿಯೆ ಮುದಿರಿ ಲೆಕ್ಕ ಯೇ
ದಿನೊಡುದು ದಿನ ಮನೊಡುದು ಮನ
ಬಾಲೆಲು ಎಡ್ಯ ಆವೊಂದು ಬನ್ನಗ ಯೇ

೪

ಅಪ್ಪಾವ್ರು ಎಲುಬನ್ನು ಹಿಡಿದು ಹೋಗುತ್ತಾರೆ
ಮಕ್ಕಳು ನಡು ಜಲಧಿಯಲಿ ಆಗುವಾಗ ಯೇ*
ನಡು ಜಳಧಿಯಲ್ಲಿ ಮುಳುಗಿದರು ಯೇ*
ಮಕ್ಕಳು ತಲೆ ಒಮ್ಮೆ ಮುಳುಗಿದರು
ಅಪ್ಪಾವ್ರ ಎಲುಬನ್ನು ಹಿಡಿದು ಹೋದರು
ಸೊಂಟದ ನೀರಲ್ಲಿ ಒಮ್ಮೆ ಮುಳುಗಿದರು ಯೇ*
ಮುಳುಗಿ ಮೇಲೆ ನೋಡುವಾಗ ಕಾಣಿಸುತ್ತದೆ
ಬರುತ್ತದೆ ಜಲಧಿಯಲ್ಲಿ ನಿಂಬೆಯ ಹುಳಿ ಯೇ*
ಅದನ್ನು ನಿಂಬೆಯ ಹುಳಿಯೆಂದು ಹೇಳುತ್ತಾರೆ
ನಲಿಯುತ್ತಾ ನಲಿಯುತ್ತಾ
ಮಕ್ಕಳ ಹತ್ತಿರ ಬರುವಾಗ ಯೇ*
ಅದನ್ನು ಮಕ್ಕಳು ಹೆಕ್ಕಿ
ಹಿಡಿದು ಮೇಲೆ ಬರುವರು ಯೇ*
ಮಕ್ಕಳು ಮೇಲೆ ಬಂದು ಒಂದೂ ಬಂದು ಬರುವರು
ನಿಂಬೆಯ ಹುಳಿಯನ್ನು ಚಾವಡಿಗೆ ಎತ್ತಿ ಎಸೆದರು ಯೇ*
ಅಲ್ಲಿ ದಡ್ಡಂತ ಬಿದ್ದರಾ ಮಕ್ಕಳು
ನಮಗಿನ್ನು ಗತಿ ಇಲ್ಲ ದೇವರೇ ಎನ್ನುತ್ತಾರೆ ಯೇ*

೫

ಹೌದೆಯೇ ಎಂದು ದಿಗ್ಗನೆ ಎದ್ದರು
ಲಿಂಬೆಯ ಹಣ್ಣನ್ನು ಕಲೆಂಬಿಯ ಒಳಗೆ ಯೇ*
ಒಂದೂ ಹಾಕಿದರು ಯೇ
ಕಲ್ಲಿನ ಕಲೆಂಬಿಯ ಒಳಗೆ ಹಾಕಿದರು
ಲಿಂಬೆಯ ಹಣ್ಣು ಕುಗ್ಗಿದಂತೆ
ದಿನದಿಂದ ದಿನ ಮನದಿಂದ ಮನ
ಮಕ್ಕಳು ಸಮೃದ್ಧಿ ಆಗುತ್ತಾ ಬರುವಾಗ ಯೇ*

ಅತನಾ ಪೊರ್ತುಡು ಕಲ್ಲ ಕಲೆಂಬಿದಾ
ಒಂಜನಾ ಒಂಜಿ ದಿನೊಟ್ಟು ಯೇ
ಬಾಕಿಲ್ ದೆತ್ತ್ ತೂನಗ ಅವು
'ಏಲ್ ಜಿಡೆತ ಸಂಕಮಾಲೆ ಯೇ'
ಲಾವುನುದ ದನಿಯೇ ಬರ್ಪುಂಡು ನನ ಅವು
ಪುಂಚ ಕುರುಂಟು ಉಂಡು ಯೇ

ಆತನ ಪೊರ್ತುಡು ಪನ್ಪೆರ್ ಯೇ
ನಮ ಜೋಕುಲು ಎಡ್ಯೆ ಆವೊಂದು
ಬರ್ಪೆರ್‌ಯೇ ಏ...ಏ.... ಏ ....

ಲಿಂಬೆದ ಪುಲಿಟೇ ಲೆಕ್ಕೆಸಿರಿ ಉದಿಯ
ಉದಿಪನೆ ಆನಗಕ್ಕೆ ಯೇ..........

⌘⌘⌘

ಆಷ್ಟು ಹೊತ್ತಿಗೆ ಕಲ್ಲಿನ ಪತ್ತಾಸ್‌ನಲ್ಲಿ
ಒಂದಾನೊಂದು ದಿನದಲ್ಲಿ ಯೇ*
ಬಾಗಿಲು ತೆರೆದು ನೋಡುವಾಗ
'ಏಳು ಹೆಡೆಯ ಸಂಕಮಾಲೆ ಯೇ*
ಸುಯ್ಲಿನ ಧ್ವನಿ ಬರುತ್ತಿದೆ ಇನ್ನು ಅವು
ಹುತ್ತ ಪಿಂಡಿ ಇದೆ ಯೇ*

ಅಷ್ಟು ಹೊತ್ತಿಗೆ ಹೇಳುತ್ತಾರೆ ಯೇ*
ನಮ್ಮ ಮಕ್ಕಳು ಸಮೃದ್ಧಿ ಆಗುತ್ತಾ
ಬರುತ್ತಾರೆಯೇ ಏ...ಏ.... ಏ ....

ಲಿಂಬೆಯ ಹಣ್ಣಿನಲ್ಲಿ ರೆಕ್ಕೆಕ್ಕಿಸಿರಿ ಉದಯ
ಉದಿಪನೆ ಆಗುವಾಗ ಯೇ..........*

⌘⌘⌘



ರೆಕ್ಕೆಸಿರಿ/ದೆಯ್ಯೊಲೆ ನಲ್ಕೆ
ಕಲಾವಿದ : ಬರೆಬೈಲು ಬಾಬು

೮

ರೆ/ಲೆಕ್ಕೆಸಿರಿ ಪಾಡ್ದನ ೨

ಹಾಡಿದವರು : ಬರೆಬೈಲು ಬಾಬು ಪ್ರಾಯ : ೭೫
ಜಾತಿ : ನಲ್ಕೆ

ಈ ಪಾಡ್ದನದ ಆರಂಭದಲ್ಲಿ ಒಕ್ಕೆತೆರಿ(ಬಂಟ)ಜಾತಿಯನ್ನು ಪ್ರಸ್ತಾಪಿಸುತ್ತದೆ. ಗಂಗೆಗೆ ಹೋಗುವ ಬಾನು ಸೇನವರು ಒಕ್ಕೆತ್ತಿರಿ ಆಗಿರಬಹುದು. ಆದರೆ ಸತ್ತವರ ಎಲುಬು ಬೂದಿಯನ್ನು ಗಂಗೆ(ನೀರಿಗೆ) ಹಾಕುವ ಪದ್ಧತಿ ಬಂಟರಲ್ಲೂ ಇತ್ತೀಚಿನವರೆಗೂ ಇರಲಿಲ್ಲ.

ಬಾಬು ನಲ್ಕೆಯ ಬೀರ ಕೂಡ ರೆಕ್ಕೆಸಿರಿಯ ಹುಟ್ಟು ನೀರಿನಲ್ಲಿ ಎನ್ನುವುದನ್ನು ಹೇಳುತ್ತದೆ. ದೇರು ನಾಗೆರ್ ಅಂದರೆ ದೇವರು ನಾಗ ಮೊದಲಿನ ಆಕಾರ ಕೋಟೆ ಅಂದರೆ ಬನ. ರೆಕ್ಕೆಸಿರಿ ಮತ್ತೆ ನಾಗ ಎಂದರೆ ಒಂದೆ ಎನ್ನುತ್ತಾನೆ ಬಾಬು. ಮೂಲತಾನ ದೈವಗಳಲ್ಲಿ ಕ್ಷೇತ್ರಪಾಲವೂ ಸೇರಿದೆ. ಕ್ಷೇತ್ರಪಾಲನ ಹುಟ್ಟು ನಾಗ ಬ್ರಹ್ಮಸ್ಥಾನದಲ್ಲಿ. ಗರಿಕೆ ಹುಲ್ಲಿನಲ್ಲಿ ಉದಿಸಿ ಬಂದ ದೈವ ಕ್ಷೇತ್ರಪಾಲ ಭೂಮಿಯಲ್ಲಿ ಹುಟ್ಟುವ ಪಕ್ಕಿಪಾರಣೆ ಹುಲ್ಲು ಪೊದೆಯಲ್ಲಿ ಬಂದ ಕ್ಷೇತ್ರಪಾಲನ ಒಂದು ಅಂಶ ರೆಕ್ಕೆಸಿರಿ.

ಈ ಪಾಡ್ದನದಲ್ಲಿ ಮಕ್ಕಳು 'ವೇದಶಾಸ್ತ್ರ ಕಲಿತರು' ಎಂದು ನಿರೂಪಿಸಲಾಗಿದೆ. ಪಾಡ್ದನ ಕಟ್ಟುವವರ ಮೇಲೆ ಬ್ರಾಹ್ಮಣರು ಬೀರಿರುವ ಪ್ರಭಾವವನ್ನು ಇಲ್ಲಿ ಕಾಣಬಹುದು.

ಈ ಪಾಡ್ದನವನ್ನು ನಾನು ೧೯೯೮ರ ಸುಮಾರಿನಲ್ಲಿ ಸಂಗ್ರಹಿಸಿದ್ದೆ.

ತುಳು ಮೂಲ

ಅಪ್ಪೆ ಪನ್ನಗ ಒಕ್ಕೆತ್ತಿ ಮದಿಮಾಲ್
ಅಮ್ಮೆರ್ ಪನ್ನಗ ಮಲೆಯಾಲ
ಬಾನು ಸೇನವೆರ್ ಪಂದ್
ಅಕಲೆಗ್ ಐನ್ ಬಾಲೆಲು ಪುಟ್ಟಿಯೆರ್
ಪುಟ್ಟಿನ ಬಾಲೆಲೆಗ್ ಮೂಜೆಡ್ ಮುಚ್ಚಿಲಮೆ
ಐನಡೆ ಐನನಮೆ ಕರಿತೆರ್
ಏಲೆಡೆ ಏಲನಮೆ ಪತ್ತ್ ಪದಿನಾಜಿ
ಅಮೆ ಕರಿತೆರ್‌ಗೆ
ಐನ ಜನೊಕು ಪುದರ್ ದೀಯೆರ್
ಎಲ್ಲಿ ಪೋಯೆರ್ ಮಲ್ಲೆ ಆಯೆರ್
ಏಲ್ ಏಲರೆ ಪ್ರಾಯ ಆನಗ
ವಿದ್ಯ ಬುದ್ದಿ ವೇದ ಶಾಸ್ತ್ರ ಕಲ್ಪಾಯೆರ್

ಪೇರ್ ಪರ್ಪಿ ಪೊರ್ತುಡು
ಕಬೆತ್ತಿ ಪೆತ್ತ ತಯಿತ್‌ಂಡ್‌ಗೇ
ಬೊಂಡ ಪರ್ಪಿ ಪೊರ್ತುಗು ಗೆಂದ ತಾರೆ
ಪದ್ಮ ಕಟ್ಟೆಗ್ ಅಂತರ ಬತ್ತಂಡ್ ಗೇ..
ಅಪ್ಪೆರೆ ಮಿರೆ ಪೇರ್ ತಿನ್ಪಿ ಪೊರ್ತುಡು ಅಪ್ಯ ತೀಂರ್ಡ್
ಅಮ್ಮೆರೆ ಪುಂಡಿ ನುಪ್ಪು ತಿನ್ಪಿ
ಪೊರ್ತುಗು ಅಮ್ಮೆರ್ ತೀರಿಯೆರ್‌ಗೆ.

ಆಯೆರೆ ಕುಕ್ಕಿ ಮರ ಈಯೆರೆಡ್ ಪೆಲ ಮರ
ಕಡ್ಪಾದ್ ಅಸಣಂದ ಕೋಡಿಡ್ ಮಸಣಂದ
ಕಾಟ ಗೂರಿಯೆರ್
ಪುನ ಸಿಂಗಾರ ಮಲ್ಪಾಯೆರ್ ಪುನ ಸಿಂಗಾರ ದೀದ್
ಒಂಜಿ ಕಾಟೊಡು ಜೋಡು ಪುನ ದೀಪಾಯೆರ್

ಕನ್ನಡ ಅನುವಾದ

ಅಬ್ಬೆ ಎಂದಾಗ ಒಕ್ಕೆತ್ತಿ ಮದಿಮಾಲ್
ಅಪ್ಪಾವ್ರ ಎಂದಾಗ ಮಲೆಯಾಲ
ಬಾನು ಸೇನವರು ಎಂದು
ಅವರಿಗೆ ಐದು ಮಕ್ಕಳು ಜನಿಸಿದರು
ಜನಸಿದ ಮಕ್ಕಳಿಗೆ ಮೂನೇ ದಿನ ಮುಚ್ಚಿಲಮೆ
ಐದರಲ್ಲಿ ಐದರಮೆ ಕಳೆದರು
ಏಳರಲ್ಲಿ ಏಳರಮೆ ಹತ್ತು ಹದಿನಾರು
ಅಮೆ ಕಳೆದರು
ಐದು ಜನಕ್ಕೂ ಹೆಸರಿತ್ತರು
ಎಳೆತನ ಹೋಗಿ ಬೆಳೆದರು
ಏಳು ಏಳುವರೆ ಪ್ರಾಯ ಆದಾಗ ವಿದ್ಯೆ
ಬುದ್ಧಿ ವೇದ ಶಾಸ್ತ್ರ ಕಲಿಸಿದರು

ಹಾಲು ಕುಡಿಯ ಹೊತ್ತಲ್ಲಿ
ಕಪಿಲೆ ಹಸು ಸತ್ತಿತಂತೆ
ಬೊಂಡ ಕುಡಿವ ಹೊತ್ತಲ್ಲಿ ಗೆಂದಳಿಗೆ ತೆಂಗಿನ
ಪದ್ಮ ಕಟ್ಟೆಗೆ ನಾಶ ಬಂತಂತೆ ಯೇ ...
ಅಬ್ಬೆಯ ಎದೆ ಹಾಲು ಕುಡಿವ ಹೊತ್ತಲ್ಲಿ ಅಬ್ಬೆ ತೀರಿದರು
ಅಪ್ಪಾವ್ರ ಮುಷ್ಟಿ ಅನ್ನ ಉಣ್ಣುವ ಹೊತ್ತಲ್ಲಿ
ಅಪ್ರಾವ್ರು ತೀರಿದರಂತೆ....

ಆ ದಡದಲ್ಲಿ ಮಾವು ಮರ ಈ ದಡದಲ್ಲಿ ಹಲಸು ಮರ
ಕಡಿಸಿ ಅಸಣದ ಮೂಲೆಯಲ್ಲಿ ಮಸಣದ
ಚಿತೆ ಇಡಿಸಿದರು
ಹೆಣ ಸಿಂಗಾರ ಮಾಡಿಸಿದರು ಹೆಣ ಸಿಂಗಾರ ಮಾಡಿ
ಒಂದು ಚಿತೆಯಲ್ಲಿ ಜೋಡು ಹೆಣ ಇಡಿಸಿದರು

ತರೆ ಮಿತ್ತ್ ಕಾರ ತಿರ್ತ್ ತೂ ಕೊರಿಯೆರ್
ನಡು ಕರಿನ ಪೊರ್ತುಡು ಡಬ್ಬಿಲ್ಲ ನೆಯ್
ಬಾಡದೆಣ್ಣೆ ಪಾಡಾಯೆರ್
ಕೆರ್ಚಿಲ್ಲ ತಾರಾಯಿ ಗಂಧದ
ಕನಕ್ ಪಾಡಿಯೆರ್

ಮೂಜೆಡ್ ಕೊಲ್ಲಿ ನೂಕಾಯೆರ್
ಐನೆಡ್ ದೂಲೊಪ್ಪ ಮಲ್ತೆರ್

ಪೊನ್ನ ಬಯಿಕನದ ಮಣ್ಣ್‌ದ ಅರಮನೆಗೆ ಕಡಪುಡಿಯೆರ್
ಮಣ್ಣ್ ಕಲಶ ಕನಪಾಯೆರ್
ಚೆಂಬುತ್ತಿ ರಾಜ್ಯೊಗು ಕಡಪುಡಿಯೆರ್
ಚೊಂಬುದ ಕೊಡಪನ ಕನಪಾಯೆರ್

ಅಪ್ಪೆರೆ ಅಂಗ ಜಿಕೆ ಮಣ್ಣ್‌ದ
ಕಲಸೊಡು ಪಾಡಿಯೆರ್
ಅಮ್ಮೆರೆ ಅಂಗಸಂಗ ಪೆಜ್ಜಿದ್
ಚೆಂಬುದು ಕೊಡಪನೊಡು ಪಾಡಿಯೆರ್
ಅಪ್ಪೆರೆ ಕಲಸೊನು ಬೊಲ್ಯ
ಅಶ್ವತ್ಥ ಮರಟ್ ದೀಯೆರ್
ಅಮ್ಮೆರೆ ಕಲಸೊನು ಗೆಂದ ತಾರೆದ
ಕುಬೆಟ್ ದೀಯೆರ್

ಪಾಪ ಕರ್ತ್ ಪುಣ್ಯ ಕೈಕೊನರೆ ಬೋಡಾದ್
ಗಂಗೆ ತೀರ್ತ ಮೀಯೆರೆ ಪೋಯೆರ್
ಪೋಪುನ ಪೊರ್ತುಡು ತಂಗಡಿ
ಕುಂಜು ಮದಿಮಾಲ್ ಉಲ್ಲೆರ್‌ಗೆ
ಇನಿ ಪೋಯಿನಾರ್ ಯೇಪ

ತಲೆಯ ಮೇಲ್ಗಡೆ ಕಾಲ ಕೆಳಗಡೆ ಬೆಂಕಿ ಇಟ್ಟರು
ನಡು ಕಳೆವ ಹೊತ್ತಿಗೆ ಡಬ್ಬಿ ತುಪ್ಪ
ಬಾಡ(ಗಾಣ?)ದೆಣ್ಣೆ ಹಾಕಿಸಿದರು
ಜೋಡಿಸಿ ಕಟ್ಟಿದ ತೆಂಗಿನ ಕಾಯಿ
ಶ್ರೀಗಂಧದ ಕಟ್ಟಿಗೆ ಹಾಕಿದರು

ಮೂರರಲ್ಲಿ ಕೊಳ್ಳಿ ತಳ್ಳಿಸಿದರು
ಐದರಂದು ಬೂದಿ ಒಪ್ಪ ಮಾಡಿಸಿದರು

ಹೆಣ್ಣ ಬಯಕೆಯ ಮಣ್ಣಿನ ಅರಮನೆಗೆ ಕಳಿಸಿದರು
ಮಣ್ಣಿನ ಕಲಶ ತರಿಸಿದರು
ತಾಮ್ರ ಇದ್ದ ರಾಜ್ಯಕ್ಕೆ ಕಳಿಸಿದರು
ತಾಮ್ರದ ಕೊಡಪಾನ ತರಿಸಿದರು

ಅಬ್ಬೆಯ ಅಂಗದ ಎಲುಬು
ಮಣ್ಣಿನ ಕಲಶದಲ್ಲಿ ಹಾಕಿದರು
ಅಪ್ಪಾವ್ರ ಅಂಗ ಸಂಗ ಆಯ್ದು
ತಾಮ್ರದ ಕೊಡದಲ್ಲಿ ಹಾಕಿದರು
ಅಬ್ಬೆಯ ಕಲಶವನ್ನು ಬಿಳಿಯ
ಅರಳಿ ಮರದಡಿ ಇಟ್ಟರು
ಅಪ್ಪಾವ್ರ ಕಲಶವನ್ನು ಗೆಂದಾಳೆ ತೆಂಗಿನ
ಮರದ ತುದಿಯಲ್ಲಿ ಇಟ್ಟರು

ಪಾಪ ಕಳೆದು ಪುಣ್ಯ ಪಡೆಯಲಿಕ್ಕಾಗಿ
ಗಂಗೆ ತೀರ್ಥ ಮೀಯಲು ಹೋದರು
ಹೋಗುವ ಹೊತ್ತಲ್ಲಿ ತಂಗಿ
ಕುಂಜು ಮದುಮಗಳು ಇದ್ದಾರಂತೆ
ಇಂದು ಹೋದವರು ಯಾವಾಗ

ಬರುವರ್ ಕೇನುವಲ್

ಆಲುದ್ದ ಕರ್ಬದ ದಂಟೆ ಗೇನುದ್ದ
ಆಪುನ ಪೊರ್ತುಡು ಬರ್ಪ ಎಂಕ್ಲು.

ಪೋನಗ ಒಂಜಿ ಊರುಂಡು
ಮನಿಪರಾಂದಿ ರಾಜ್ಯ
ಕುದ್ಂಬುಲು ಕೂರನ ರಾಜ್ಯ
ಕುದ್ದುಡು ಪೋಪಿ ರಾಜ್ಯ
ಉಂತುದು ಪೋಪಿ ರಾಜ್ಯ.
ಬಲಿಪ ಬಾಯಿಗ್ ಪೆತ್ತದ ಕಂಜಿ ಕೊರ್ಪಿ ರಾಜ್ಯ,
ಗೆಂಡದ ತುದೆಕ್ ಮಯನದ ಓಡ
ಕಲುವೆರೆ ಕಾನ, ಕುಡುವೆರೆ ಗುಡ್ಡೆ
ನೀರ್ ಗಂಗೆ ನೆತ್ತರ್ ಗಂಗೆ, ಪೇರ್ ಗಂಗೆ
ಮಾವೊರಿ ಗಂಗೆ ಬರಿ ಪೋಪೆರ್
ಮರಪ್ಪುದ ನೀರ್‌ಗ್ ಜತ್ತೆರ್
ಅಸಿಗೆಡ್ ಪರಿಹಾರ ಮಲ್ತೆರ್
ಕೆಕ್ಕಿಲ್ದ ನೀರ್‌ಗ್ ಜತ್ತೆರ್
ಅಪ್ಪೆ ಅಮ್ಮೆನ ಪಾಪೊನು ಪರಿಹಾರ ಮಲ್ತೆರ್
ಮುಕ್ಕೊಲು ಮುರ್ಕುದು ಮುಕ್ಕೊಲು
ನೆಗೆಪುನ ಪೊರ್ತುಡು

ನೀರ್‌ದ ಮೇಲ್‌ಡ್ ತೆಲಿತೊಂದು
ನಲಿತೊಂದು ಬಂಗಾರ್ದ
ನೀರ ನಾರಂಗದೆ ಪುಲಿಯಾದ್ ಬರ್ಪುಂಡುಂಗೆ.
ತನ್ನ ಪಚ್ಚಡೆದ ಸೆರಂಗ್ ಒಡ್ಡಿಯೆರ್
ಎಂಕಲ್ನ ಮಟೊಟು ಮಾನ್ಯಗೊಬ್ಬರೆ
ಆವುಂದು ಎಲ್ ಗಂಗೆ ಕಡತೆರ್

ಬರುವಿರಿ ಕೇಳುವಳು

ಆಳು ಉದ್ದ ಬಡಿಗೆ ಗೇಣು
ಉದ್ದ ಆಗುವ ಹೊತ್ತಿಗೆ ಬರ್ತೇವೆ ನಾವು

ಹೋಗುವಾಗ ಒಂದು ಊರಿದೆ
ಮಾತನಾಡಬಾರದ ರಾಜ್ಯ
ಕುದ್ಂಬುಲು ತೂಕಡಿಸುವ ರಾಜ್ಯ
ಕುಳಿತು ಹೋಗುವ ರಾಜ್ಯ
ನಿಂತು ಹೋಗುವ ರಾಜ್ಯ
ಹೆಬ್ಬುಲಿ ಬಾಯಿಗೆ ಹಸುವಿನ ಕರುವನ್ನು ಕೊಡುವ ರಾಜ್ಯ
ಕೆಂಡದ ನದಿಗೆ ಮಯನದ(ಮಯನ ನೀರಿನಲ್ಲಿ ಕರಗುತ್ತದೆ) ದೋಣಿ
ಕಳ್ಳರ ಕಾಡು ರೈತರ ಗುಡ್ಡೆ
ನೀರು ಗಂಗೆ, ನೆತ್ತರು ಗಂಗೆ, ಹಾಲು ಗಂಗೆ,
ಮಾವೊರಿ ಗಂಗೆ ಬಳಿ ಹೋಗುತ್ತಾರೆ
ಮೊಣಕಾಲುದ್ದ ನೀರಿಗೆ ಇಳಿದರು
ಅಸಿಗೆಯಲ್ಲಿ ಪರಿಹಾರ ಮಾಡಿದರು
ಕತ್ತಿನ ನೀರಿಗೆ ಇಳಿದರು ಅಪ್ಪ ಅಬ್ಬೆಯ
ಪಾಪವನ್ನು ಪರಿಹಾರ ಮಾಡಿದರು
ಮೂರು ಬಾರಿ ಮುಳುಗಿ ಮೂರು ಬಾರಿ
ನೆಗೆದು ಬರುವ ಹೊತ್ತಲ್ಲಿ

ನೀರಿನ ಮೇಲ್ಗಡೆ ನಲಿಯುತ್ತಾ ನಗುತ್ತಾ
ಬಂಗಾರದ ನೀರ ನಾರಂಗದ
ಹುಳಿಯಾಗಿ ಬರುತ್ತದೆಯಂತೆ
ತನ್ನ ಪಚ್ಚಡೆಯ ಸೆರಗು ಒಡ್ಡಿದರು
ನಮ್ಮ ಮಠದಲ್ಲಿ ಮಾನ್ಯ ಆಡಲು
ಆಗಬಹುದೆಂದು ಏಳು ಗಂಗೆ ದಾಟಿದರು

ಕಡಪುನಗ ಪುಗ್ಗೆಲ್ಡ್ ದೀಯೆರ್
ಪುಗ್ಗೆಲ್ ಒಡ್ಡಿದ್ ಬರ್ಪುಣ್ಣುಂಡು.
ತರೆಟ್ ದೀವೊಂದು ಬರ್ಪೆರ್ ತರೆ
ಒಡ್ಡಿದ್ ಬರ್ಪುಂಡು ಪಚ್ಚಡೆ ಪರಿದ್
ಭೂಮಿಗ್ ಬೂರುಂಡು
ಆಕಾಶ ಬೂಮಿಗ್ ಎರಗ್‌ದ್ ಉಂತುಂಡು

ಯೇರ್ ಈ ಯೆಂಕ್ ದಾನೆ
ಸಾಯ ಕೊರುವ ಕೇನುವೆರ್
ಇರೆನ ಎಡತ ಕಯಿತ ಓಲೆಗ್‌ಲಾ
ಬಲತ ಕಯಿತ ಕಂಟೊಗ್‌ಲಾ
ಬುಡ್ಪಾಯಿ ಪಂಚಾಂಗೊಗುಲಾ,
ಪಾಡಿ ರಾಶಿಗ್‌ಲಾ
ಯಾನ್ ಸಾಯ ಕೊರುವೆ.
ಕೋಟೆದುಲಾಯಿ ಕೊರ್ನಗ ದೇರು ನಾಗೆರ್ ದೈವ
ಕೋಟೆದ ಪಿದಯಿ ಕೊರ್ನಗ ಸಂಪು ನಾಗೆರ್ ಆಪೆ.

ಅಂಚ ಬತ್ತಿ ರೆಕ್ಕೆಸಿರಿ. ದೇರು ನಾಗೆರ್ ದುಂಬುದ ಆಕಾರ
ಕೋಟೆ ಇನ್ನಗ ಬನ.
ರೆಕ್ಕೆಸಿರಿ ಬೊಕ್ಕ ನಾಗೆ ಪಂಡ ಒಂಜೆ.

⌘⌘⌘

ದಾಟುವಾಗ ಹೆಗಲಲ್ಲಿ ಇಟ್ಟರು
ಹೆಗಲು ಬಗ್ಗುತ್ತದೆ
ತಲೆಯ ಮೇಲೆ ಇಟ್ಟು ಬರ್ತಾರೆ
ತಲೆ ಬಗ್ಗುತ್ತದೆ ಪಚ್ಚಡೆ ಹರಿದು
ಭೂಮಿಗೆ ಬೀಳುತ್ತದೆ
ಆಕಾಶ ಭೂಮಿಗೆ ಎರಗಿ ನಿಲ್ಲುತ್ತದೆ

ಯಾರು ನೀನು ನನಗೇನು
ಸಹಾಯ ನೀಡಬಲ್ಲೆ ಕೇಳುತ್ತಾರೆ
ನಿಮ್ಮ ಎಡದ ಕೈಯ ಓಲೆಗೆ
ಬಲದ ಕೈ ಲೇಖನಿಗೂ
ಬಿಡಿಸಿದ ಪಂಚಾಂಗಕ್ಕೂ
ಹಾಕಿದ ರಾಶಿಗೂ
ನಾನು ಸಹಾಯ ಕೊಡುತ್ತೇನೆ
ಬನದ ಒಳಗೆ(ಕೋಲ) ಕೊಡುವಾಗ ದೇವರು ನಾಗ ದೈವ
ಬನದ ಹೊರಗೆ ಕೊಡುವಾಗ 'ಸಂಪು ನಾಗೆರ್' ಅಗುವೆ

ಹಾಗೆ ಬಂದ ರೆಕ್ಕೆಸಿರಿ ದೇವರು ನಾಗೆರ್ ಎನ್ನುವುದು ರೆಕ್ಕೆಸಿರಿಯ ಮೊದಲಿನ ಆಕಾರ.
ಕೋಟೆ ಅಂದರೆ ಬನ.
ರೆಕ್ಕೆಸಿರಿ ಮತ್ತೆ ನಾಗ ಎಂದರೆ ಒಂದೆ.

⌘⌘⌘



ರೆಕ್ಕೆಸಿರಿ - ಚಿತ್ರಬೈಲು, ಉಡುಪಿ

೯

ರೆ/ಲೆಕ್ಕೆಸಿರಿ ಪಾಡ್ದನ ೩

ಹಾಡಿದವರು : ವೇದ ಕಬತಾರ್ ಪ್ರಾಯ : ೪೩
ಜಾತಿ : ನಲ್ಕೆ ೮.೭.೨೦೦೭

ವೇದಳ ಪಾಡ್ದನದ ಪ್ರಕಾರ ಸಾಯನ ಬೈದ ಗಂಗೆ ಮೀಯಲು ಹೆತ್ತವರ ಎಲುಬು (ಅಸ್ಥಿ)ಕೊಂಡು ಹೋಗುತ್ತಾರೆ. ಅಲ್ಲಿ ಗಂಗೆಯಲ್ಲಿ ಅವರಿಗೆ ನಿಂಬೆ ಹುಳಿ ಸಿಗುತ್ತದೆ. ಆ ಹುಳಿ ಕನ್ನೆಯಾಗಿ ಪ್ರಕಟಗೊಳ್ಳುತ್ತದೆ.

ಇಲ್ಲಿ ಗಂಗೆ ನೀರು ಮೀಯಲು ಹೋಗುವವರು ಸಾಯನ ಬೈದ(ಬಿಲ್ಲವ ಜಾತಿ).

ತುಳು ಮೂಲ

ತಮ್ಮಲೆ ಪನ್ನಗ ಉಲ್ಲೆರ್ ತೆಮ್ಮಲೆ
ಸಾಯನ ಬೈದೆಲು
ಅರ್ವದೆ ಪನ್ನಗ ಉಲ್ಲೆರ್ ಅರ್ವದೆ ನೆಲಬಾರಿ ನೆಕ್ಕರೆ.
ತಂಗಡಿಂದ್ ಪನ್ನಗ ಪದ್ಮಜೆ ಉಲ್ಲೆರ್
ತಂಗಡಿ ಪದ್ಮಜೆ ಲಾನಿಗುಲ್ಲೆರ್
ಆ.......ಆ.......ಏ..........

ಏನಿಗ್ ಪೋಯಿ ತಮ್ಮಲೆ ಈರ್
ಏನಿ ಕಾಲೊಡು ಬರುವರ್
ಏನಿ ಪೋಯಿ ತಮ್ಮಲೆ ಈರ್
ಯೇನಿ ಕಾಲೊಡು ಬರುವರ್ ಪನಿಯೆರ್
ತಂಗಡಿ ಪದ್ಮಜೆ ಅರ್ವದೆ ಪೆರ್ನಜೆ ಪಲಾನಿ ಆ........ಆ.........ಏ.......

ಏನಿ ಕಾಲೊಡು ಬರುವರ್
ಏನಿಗ್ ಪೋಯಿ ತಮ್ಮಲೆ ಈರ್
ಏನಿ ಕಾಲೊಡು ಬರುವರ್
ಏನಿಗ್ ಪೋಯಿ ತಮ್ಮಲೆ ಏನಿ
ಕಾಲೊಡು ಬರುವರ್ ತಮ್ಮಲೆ ಕೇನ್ನಗ

ಏನಿ ಕಾಲೊಡು ತಾರೆಗ್ ಒಂಜಿ ಪಾಲೆನೆ
ಒರಿವುನ ಏನಿ ಕಾಲೊಡು ನನ ಬರುವೆಂದ್ ಪನ್ಪೆರ್
ಏನಿ ಪಾಲೆಗ್ ತಾರೆಡ್ ಒಂಜಿ ಪಾಲೆನೆ
ತರೆವುನ ತಾರೆಡೊ ಬರ್ಪಂದ್ ನನ ಪನುವೆರ್

ಓ ಇನಿಗ್ ಪೋಯಿನ ತಮ್ಮಲೆ ಈರ್
ಏನಿ ಕಾಲೊಡು ಬರುವರ್ ತಮ್ಮಲೆಂದ್

ಕನ್ನಡ ಅನುವಾದ

ಮಾವ ಎಂದರೆ ಇದ್ದಾರೆ
ಸಾಯನ ಬೈದರು
ಅಳಿಯ ಎಂದರೆ ಇದ್ದಾರೆ ನೆಲಬಾರಿ ನೆಕ್ಕರೆ.*
ತಂಗಿ ಎಂದರೆ ಪದ್ಮಜೆ ಇದ್ದಾರೆ
ತಂಗಿ ಪದ್ಮಜೆ (ಯೂ ಇದ್ದಾರೆ
ಆ.......ಆ.......ಏ..........

ಯಾವಾಗ ಹೋದಿರಿ ಮಾವ ನೀವು
ಯಾವ ಕಾಲದಲ್ಲಿ ಬರುವಿರಿ
ಯಾವಾಗ ಹೋಗುವ ಮಾವ ನೀವು
ಯಾವ ಕಾಲದಲ್ಲಿ ಬರುವಿರಿ ಹೇಳಿದರು
ತಂಗಿ ಪದ್ಮಜೆ ಅಳಿಯ ಪೆರ್ನಜೆ ಪಲಾನಿ ಆ........ಆ.........ಏ.......

ಯಾವ ಕಾಲದಲ್ಲಿ ಬರುವಿರಿ
ಯಾವಾಗ ಹೋದ ಮಾವ ನೀವು
ಯಾವ ಕಾಲದಲ್ಲಿ ಬರುವಿರಿ
ಯಾವಾಗ ಹೋದ ಮಾವ ಯಾವ
ಕಾಲದಲ್ಲಿ ಬರುವಿರಿ ಕೇಳುವಾಗ

ಯಾವ ಕಾಲದಲ್ಲಿ ತೆಂಗಿನ ಮರಕ್ಕೆ ಒಂದು ಹಾಲೆಯೆ
ಉಳಿಯುತ್ತದೆಯೋ ಆ ಕಾಲದಲ್ಲಿ ಇನ್ನು ಬರುವೆ ಎಂದು ಹೇಳುತ್ತಾರೆ
ಯಾವ ಕಾಲದಲ್ಲಿ ತೆಂಗಿನ ಮರಕ್ಕೆ ಒಂದು ಹಾಲೆಯೆ
ಸವೆಯುವ ತೆಂಗಿನ ಮರದಲ್ಲಿ ಬರುವೆ ಎಂದು ಇನ್ನು ಹೇಳುವರು

ಓ ಇಂದು ಹೋಗುವ ಮಾವ ನೀವು
ಯಾವ ಕಾಲದಲ್ಲಿ ಬರುವಿರಿ ಮಾವ ಎಂದು

ನನ ಅರ್ವದೆ ಕೇನ್ನಗ

ಓ.....ಆಲುದ್ದ ಇತ್ತಿನ ದಂಟೆಂಡು
ಪುಂಡಿದಾಲವನ ಕಾಲೊಡು
ಯಾನ್‌ಲಾ ನನ ಬರ್ಕೆನಾ ಅರ್ವದಡನೇ ಪನುವೆರ್
ತಮ್ಮಲೆ ನನ ಸಾಯನ ಬೈದೆ ಪನುವೆರ್
ಆ...ಏ......

ಓ ಇಂಚಾನೆ ಪೋದು ಇಂಚ ಬರುವೆರ್
ತಮ್ಮಲೆ ಇಂದ್‌ದೇ ಪನುವೆರ್
ಅರ್ವದೆ ನೆಲಬಾರಿ ನೆಕ್ಕರೆ ಕೇನ್ನಗ
ಆ....ಇಂಚನೇ ಪೋಯಿ ಇಂಚನೇ ಬರುವೆ.
ಯಾನ್ ನನ ನಂಬುದಿನೊಂಜಿ
ದೈವೆನೆ ದೇವೆರೆ ಬರುವೆಂದ ಪಂಡೆರ್

ಓ ಕುದುದು ಪೋಪಿ ರಾಜ್ಯಂಡು ಅನ್ನೆರೆ
ಕುದ್ದುದು ನನ ಪೋಲೆ
ತಂಗಡಿ ಕರುಣಜೆ ಪನ್ನಗ ನನ
ಉಂತುದಿ ಪೋಪಿ ರಾಜ್ಯಂಡು
ಉಂತುದು ನನ ಪೋಲೆ
ಮಾನ್ಯ ಮನಿಪಂದಿ ರಾಜೊಡು ಪೋನಗ
ಮಾನ್ಯ ಮನಿಪಂದೆ ಪೋಲೆಯೆ.
ಎಂಚನೆ ಪೋದು ಎಂಚನೇ
ನನ ಬರುವರನ್ನರೆಯೇ ಆ.....ಆ....ಏ......ಏ....

ಪೋತಿ ಪೋತಿ ತಮ್ಮಲೆ ಸಾಯನ ಬೈದೆ
ಮಾನ್ಯ ಮನಿಪಂದಿ ರಾಜ್ಯೊಡು ಪೋನಗ
ಮಾನ್ಯ ಮನಿಪಂದು ರಾಜ್ಯೊಡು ಪೋವೆರ್

ಇನ್ನು ಅಳಿಯ ಕೇಳುವಾಗ

ಓ ಆಳಿನಷ್ಟು ಉದ್ದ ಬಡಿಗೆ ಇದೆ
ಮುಷ್ಟಿಯ ಒಳಗೆ ಹೋಗುವ ಕಾಲಕ್ಕೆ
ನಾನಿನ್ನು ಬರುವೆ ಅಳಿಯನಲ್ಲಿ ಹೇಳುವರು
ಮಾವ ಇನ್ನು ಸಾಯನ ಬೈದ ಹೇಳುವರು
ಆ...ಏ......

ಓ ಹೀಗೆಯೇ ಹೋಗಿ ಹೀಗೆಯೇ ಬರುವರು
ಮಾವ ಎಂದೇ ಹೇಳುವರು
ಅಳಿಯ ನೆಲಬಾರಿ ನೆಕ್ಕರೆ ಕೇಳುವಾಗ
ಆ ..ಹೀಗೆಯೇ ಹೋಗಿ ಹೀಗೆಯೇ ಬರುವೆ
ನಾನು ಇನ್ನು ನಂಬಿರುವ ಒಂದು
ದೈವವೇ ದೇವರೇ ಬರುವೆ ಎಂದು ಹೇಳಿದರು

ಓ ಕುಳಿತು ಹೋಗುವ ರಾಜ್ಯ ಇದೆ ಅಣ್ಣಾವರೇ
ಕುಳಿತು ಇನ್ನು ಹೋಗಿ
ತಂಗಿ ಕರುಣಜೆ ಹೇಳುವಾಗ ಇನ್ನು
ನಿಂತು ಹೋಗುವ ರಾಜ್ಯ ಇದೆ
ನಿಂತು ಇನ್ನು ಹೋಗಿ
ಮಾನ್ಯ ಮಾತಾಡದ ರಾಜ್ಯದಲ್ಲಿ ಹೋಗುವಾಗ
ಮಾನ್ಯ ಮೌನಿಯಾಗಿ ಹೋಗಿಯೇ
ಹೇಗೆಯೇ ಹೋಗಿ ಇನ್ನು ಹೇಗೆಯೇ
ಬರುವಿರಾ ಅಣ್ಣಾವರೇ ಆ.....ಆ....ಏ......ಏ....

ಹೋದ..ಹೋದ...ಮಾವ ಸಾಯನ ಬೈದ
ಮಾನ್ಯ ಮಾತಾಡದ ರಾಜ್ಯಕ್ಕೆ ಹೋಗುವಾಗ
ಮಾನ್ಯ ಮಾತಾಡದ ರಾಜ್ಯಕ್ಕೆ ಹೋಗುವರು

ಉಂತುದು ಪೋಪಿ ರಾಜ್ಯೊಡು
ಪೋನಗ ಉಂತುದು ನಣ ಪೋವೆರ್
ಕುಲ್ಲುದು ಪೋಪಿ ರಾಜೊಡು ಪೋನಗ
ಕುಲ್ಲುದು ನನ ಪೋವೆರ್
ಯೇರ್‍ಯ ನನ ತಮ್ಮಲೆಲಾವಂಡ ಪೋಯೆರ್
ಓ ಲವನಾ ನನ ಪೋವೆರ್

ಕುಪುಲು ಕೂಟನ ಜಾಗೊಡೆ ಪೋವೆರ್.
ಸರ್ಪ ಕೂಟನ ರಾಜೊಡೆ ಪೋವೆರ್.
ಓ ಸರ್ಪ ಕೂಟನ ರಾಜೊಡೆ ಪೋನಗ
ಕೋರಿದ ತೆತ್ತಿ ಪಾಡಿಯೆರ್
ಬಲಿಪೆ ಕೂಟನ ರಾಜೊಡೆ ಪೋನಗ
ಎರ್ಮೆದ ಕಂಜಿ ಪಾಡಿಯೆರ್

ಓ ಇಂಚಂಡ್ ಕುಂಜನ ಮಲೆಟ್
ಪೋನಗ ನನ ಪಿಲಿಕೂಟಾನ ವನ
ಪಿಲಿ ಕೂಟಾನಿ ರಾಜೊಡು ಪೋನಾಗ
ಪೆತ್ತಾದ ಕಂಜಿನ್ ಬುಡಿಯೆರ್ ಆ...ಏ.....

ಓ ಪೋದು ಪೋದು ಪೋವೆರ್
ತಮ್ಮಲೆ ಏನಿ ಕಾಲೊಡು ಬರುವೆರ್
ಅರ್ವದೆಲಾನಗ ನನ ಬನ್ನಗ ಓ ಲಾನಗ
ತಮ್ಮಲೆ ಪೋವೆರ್

ಓ ಸೆಟ್ಟಿ ಸೆಟ್ಟಿಕಾನ ರಾಜೊಡು ಪೋನಗ
ಬಾರಿ ಬಡಕಾನ ರಾಜೊಡು
ಲಾನಿಗ್ ನನ ಪೋವೆರ್ ಲವಾಂಡ

ನಿಂತು ಹೋಗುವ ರಾಜ್ಯದಲ್ಲಿ
ಹೋಗುವಾಗ ನಿಂತು ಇನ್ನು ಹೋಗುವರು
ಕುಳಿತು ಹೋಗುವ ರಾಜ್ಯದಲ್ಲಿ ಹೋಗುವಾಗ
ಕುಳಿತು ಇನ್ನು ಹೋಗುವರು
ಯಾರುಯೇ ಇನ್ನು ಮಾವನೂ ಹೋದರು
ಓ ಅವರೂ ಇನ್ನು ಹೋಗುವರು

ಕುಮಲು ಸೇರುವ ಜಾಗದಲ್ಲಿ ಹೋಗುವರು
ಸರ್ಪ ಕೂಟದ ರಾಜ್ಯದಲ್ಲಿ ಹೋಗುವರು
ಓ ಸರ್ಪ ಕೂಟದ ರಾಜ್ಯದಲ್ಲಿ ಹೋಗುವಾಗ
ಕೋಳಿಯ ಮೊಟ್ಟೆ ಹಾಕಿದರು
ಹೆಬ್ಬುಲಿ ಕೂಟದ ರಾಜ್ಯದಲ್ಲಿ ಹೋಗುವಾಗ
ಎಮ್ಮೆಯ ಕರು ಹಾಕಿದರು

ಓ ಹೀಗಾದರೆ ಕುಂಜಮಲೆಯಲ್ಲಿ
ಹೋಗುವಾಗ ಹುಲಿ ಕೂಟದ ವನ
ಹುಲಿ ಕೂಟದ ರಾಜ್ಯದಲ್ಲಿ ಹೋಗುವಾಗ
ಹಸುವಿನ ಕರುವನ್ನು ಬಿಟ್ಟರು ಆ...ಏ.....

ಓ ಹೋಗಿ ಹೋಗಿ ಹೋಗುವರು
ಮಾವ ಯಾವ ಕಾಲದಲ್ಲಿ ಬರುವರು
ಅಳಿಯ ಆವಾಗ ಇನ್ನು ಬರುವಾಗ
ಮಾವ ಹೋಗುವರು

ಓ ಸೆಟ್ಟಿ ಸೆಟ್ಟಿಕಾನ ರಾಜ್ಯದಲ್ಲಿ ಹೋಗುವಾಗ
ದೊಡ್ಡ ಬಡಗು ರಾಜ್ಯದಲ್ಲಿ
ಅಂದಿಗೆ ಇನ್ನು ಹೋಗುವರು

ನನ ದೇವೆರೆ ನಿಲೆಕ್ ಪೋವೆರ್
ಓ ಲವಾಂಡ ನನ ಗುಂಡಿಲ್ಲಾ ನನ ಜಪ್ಪೊಡು
ಪೋವೊಂದು ನನ ಪೋನಗ
ಸುದೆಟ್ ನನ ಜಯಿದೆರ್
ನನ ದೇವೆರೆ ನೆನೆತೊಂದು ಪೋವೆರ್
ಪಾದವುಲ್ಲನ ನೀರಿತ್ತಿನವುಲು ಕೆಕ್ಕಿಲ್
ಉದ್ದನ ನೀರ್ ಉಡೆವೊಂದು ನನ ಬನ್ನಗ
ಉಂದಾದ ನನ ಕಾಲನೆ ಉಂದೊಂಜಿ
ಮಾಯಾ ದಾದಂದ್ ಪಂಡೆರ್

ನೀರ್‌ದ ಮೇಲ್ಡ್ ನೀಂದೊಂದು
ನೀಂದೊಂದು ಎಂಚಿನ ಅವು ಬರ್ಪುಂಡು
ಲಿಂಬೆ ಪುಲಿ ಬರ್ಪುಂಡೆಂದ್ ಪಂಡೆರ್
ಪತ್ತರೆ ಪೋನಗ ಮುಲಕಂಟೆ
ನೀರ್‌ಡ್ ಪೋಪುಂಡು
ಮುಟ್ಟರೆ ಪೋನಗ ನಲಿತೊಂದು
ಎದುರು ಬರ್ಪುಂಡು ತಮ್ಮಲೆ ಸಾಂತಿಯ(ಸಾಯನ)
ಬಾಲೆಲು ಪನ್ನಗ ಅವ್ವಂಡ ನನ ಲಿಂಬೆ ಪುಲಿ
ಬೋಡುಂದು ಎಂಕ್ಲೆ ಪಂಡೆರ್
ಮುಟ್ಟರೆ ತೂಯೆರೆ ಪೋನಗ ಕೆಕ್ಕಿಲ್ಡ್
ಉದ್ದ ನೀರ್‌ಗ್ ಬಲಿಪುಂಡು
ಲಿಂಬೆ ಪುಲಿನ್ ಪತ್ಯೆರೆ ನೀರ್‌ಗ್
ನೀಂದೊಂದು ಜಯಿದೆರ್
ಓ ನೀರ್‌ಡ್ ನೀಂದೊಂದು ಬರುವೆರ್
ಪಿರ ಬತ್ತಾನಗ ಲಿಂಬೆದ ಪುಲಿನ್
ಪತೊಂದು ಬರುವೆರ್

ಇನ್ನು ದೇವರ ನೆಲೆಗೆ ಹೋಗುವರು
ಓ ಆವಾಗ ಇನ್ನು ಗುಂಡಿಗೆ ಇಳಿಯಬೇಕು
ಹೋಗುತ್ತಾ ಹೋಗುತ್ತಾ ಇನ್ನು
ನದಿಗೆ ಇನ್ನು ಇಳಿದರು
ಇನ್ನು ದೇವರ ನೆನೆದು ಹೋಗುವರು
ಪಾದದವರೆಗೆ ನೀರು ಇದ್ದಲ್ಲಿ ಕತ್ತು
ಉದ್ದ ನೀರು ಒಡೆದು ಇನ್ನು ಬರುವಾಗ
ಇದೇನು ಕಾಲವೇ ಇದೊಂದು
ಮಾಯೆ ಏನೆಂದು ಹೇಳಿದರು

ನೀರಿನ ಮೇಲೆ ಈಜುತ್ತಾ
ಈಜುತ್ತಾ ಏನದು ಬರುವುದು
ನಿಂಬೆ ಹುಳಿ ಬರುವುದೆಂದು ಹೇಳಿದರು
ಹಿಡಿಯಲು ಹೋಗುವಾಗ ಮುಳುಗುವ
ನೀರಿಗೆ ಹೋಗುತ್ತದೆ
ಮುಟ್ಟಲು ಹೋದರೆ ನಲಿಯುತ್ತಾ
ಎದುರು ಬರುತ್ತದೆ ಮಾವ ಸಾಂತಿಯ
ಮಕ್ಕಳು ಹೇಳುವಾಗ ಅದಾದರೆ ಇನ್ನು ಲಿಂಬೆ ಹುಳಿ
ತಮಗೆ ಬೇಕೆಂದು ಹೇಳಿದರು
ಮುಟ್ಟಲು ನೋಡಲು ಹೋಗಲು
ಉದ್ದ ನೀರಿಗೆ ಓಡುತ್ತದೆ
ಲಿಂಬೆ ಹಣ್ಣನ್ನು ಹಿಡಿಯಲು ನೀರಿಗೆ
ಈಜುತ್ತಾ ಇಳಿದರು
ಓ ನೀರಲ್ಲಿ ಈಜಿ ಬರುವರು
ಮರಳಿ ಬಂದಾಗ ಲಿಂಬೆಯ ಹುಳಿಯನ್ನು
ಹಿಡಿದು ಬರುವರು

ಓ ಲಿಂಬೆ ಪುಲಿನ್ ಕೊಂಡುದು
ಬನ್ನಗ ನೀರ್‌ಡ್ ದುನ್ನಭರ್ಪುಂಡು.
ನನ ದುನ್ನ ಏರೊಂದು ಬರ್ಪುಂಡೆ
ಉಂದೊಂಜಿ ದಾದಾ ಮಾಯಂದ್ ಪಂಡೆರ್
ಓ ತನ್ನೊಂಜಿ ಅರಮನೆಗ್
ಪತೊಂದು ಬರುವೆರ್ ಲಿಂಬೆ ಪುಲಿನ್

ಲಿಂಬೆ ಪುಲಿ ಉಡೆದ್ ಪದ್ರಾಡ್ ವರ್ಷದ ಮಗಲ್
ನನ ಉದಿಪನೆಲಾತ್‌ಂಡ್
ಓ ಯಾನ್ ನಿಜವಾಯಿ ಪೊನ್ನುಂದು
ಎನ್ನನ ಸಾಯನ ಬೈದ
ಮಾಯದ ಪೊನ್ನುಂದು ಎನ್ನಾನ.
ಓ ಲವ್ವಲಾ ನನ ಪುದರ್ ಎಂಕ್ ದೀವಡ
ದೇವೆರ್‌ಂದ ಎನ್ನ್‌ಲಾ ದೇವಿಂದೇ ಸುಗಿಪುಲಾ
ಓ ಎನ್ನ ಭಾಷೆನೆ ಮದಿಪುಲಾ ಏ..........

⌘⌘⌘

ಓ ಲಿಂಬೆಯ ಹುಳಿಯನ್ನು ತೆಗೆದುಕೊಂಡು
ಬರುವಾಗ ನೀರಲ್ಲಿ ಭಾರ ಆಗುತ್ತದೆ
ಇನ್ನು ಭಾರ ಏರುತ್ತಾ ಹೋಗುತ್ತದೆ
ಇದೊಂದು ಏನು ಮಾಯ ಎಂದು ಹೇಳಿದರು
ಓ ತನ್ನ ಒಂದು ಅರಮನೆಗೆ ಹಿಡಿದು
ತರುವರು ಲಿಂಬೆಯ ಹಣ್ಣನ್ನು

ಲಿಂಬೆಯ ಹುಳಿ ಒಡೆದು ಹನ್ನೆರಡರ ಮಗಳು
ಇನ್ನು ಉದಿಸಿದ್ದಾಳೆ
ಓ ನಾನು ನಿಜವಾದ ಹೆಣ್ಣು ಎಂದು
ಕೊಂಡೆಯಾ ಸಾಯನ ಬೈದ
ಮಾಯೆಯ ಹೆಣ್ಣೆಂದು ಎಂದು ಕೊಂಡೆಯಾ
ಓ ಈಗಲೂ ಇನ್ನು ಹೆಸರು ಎನಗೆ ಇಡಬೇಡ
ದೇವರೆಂದು ಭಾವಿಸು ದೇವಿ ಎಂದು ಸ್ತುತಿಸು
ಓ ನನ್ನ ಭಾಷೆಯನ್ನೇ ವಿವರಿಸು ಏ...

ﷺﷺﷺ



ಸೇಸು ಕಕ್ಕುಂಜೆ, ಬಿದ್ರೆ ಗ್ರಾಮ
ಉಜಿರೆ ಬೆಳ್ತಂಗಡಿ

೧೦

ರೆ/ಲೆಕ್ಕೆಸಿರಿ ಪಾಡ್ದನ ೪

ಹಾಡಿದವರು : ಸೇಸು ಜಾತಿ : ಪರವ
ಕಕ್ಕುಂಜೆ, ಬಿದ್ರೆ ಗ್ರಾಮ, ಉಜಿರೆ
ಬೆಳ್ತಂಗಡಿ ತಾಲೂಕು, ೨೦.೪.೨೦೦೬

ಇದು ಬೀರ ಪ್ರತಾಪ. ಇಲ್ಲಿ ಸಂಗ್ರಹವಾದ ರೆಕ್ಕೆಸಿರಿಯ ಎಲ್ಲಾ ಪಾಡ್ದನಗಳಲ್ಲಿ ನೀರಿನಿಂದ ಉದಿಪನೆ ಆಗುತ್ತಾಳೆ ರೆಕ್ಕೆಸಿರಿ.. ಹಾಗೂ ಎಲ್ಲಾ ಪಾಡ್ದನಗಳು ಬಾನು ಸನಬರ್ ಗಂಗೆ ಮೀಯಲು ಹೋದಾಗ ರೆಕ್ಕೆಸಿರಿ ನೀರಿನಿಂದ ಉದಿಸಿ ಬರುವ ನಿರೂಪಣೆ ನೀಡುತ್ತವೆ. ಆದರೆ ಸನಬರ್ ಜಾತಿಯನ್ನು ಬೇರೆ ಬೇರೆ ಪಾಡ್ದನಗಳು ಬೇರೆ ಬೇರೆಯಾಗಿ ನಿರೂಪಿಸುತ್ತವೆ. 'ಅಪ್ಪಮ್ಮ ಮಾಡಿದ್ದು ದಾನ ಮಾಡಿ ಜನ್ಮ ಕಳೆಯಬೇಕು' ಎನ್ನುವ ನಿರೂಪಣೆ ಗಮನಿಸಬೇಕಾದ ಅಂಶ. ಉಡುಪಿಯ ಉತ್ತರದ ಕಡೆ ಉತ್ತರಕ್ರಿಯೆಯ ದಿನ ಬ್ರಾಹ್ಮಣರಿಗೆ(ತುಳುವರು ದಾನ ಸ್ವೀಕರಿಸುವುದಿಲ್ಲ) ಭೂಮಿಯನ್ನೂ ಸೇರಿ ದಾನ ನೀಡುವ ಪದ್ಧತಿ ಇದೆ.

ಈ ಪಾಡ್ದನದಲ್ಲಿ ಇತಿಹಾಸದಲ್ಲಿ ದಾಖಲಾಗಿರುವ ವೇಣೂರು ಮತ್ತು ನಂದರ(ಪಾಳೆಯಗಾರರ) ಪ್ರಸ್ತಾಪ ಇದೆ.

೧

ಡೇ.... ಡೇ.... ಡೆನ್ನಾ.... ಡೆನ್ನಾ....ಡೇ.... ಡೇ.... ಡೇ.... ಡೇ.... ಡೆನ್ನಾ.... ಡೆನ್ನಾ....
ಡೇ.... ಡೇ.... ಡೆನ್ನಾ.... ಡೆನ್ನಾ....
ಡೆನನಾ. ಡೆನ್ನಾ ..... ಡೆನನಾ.... ಡೆನ್ನಾ....

ಅಮ್ಮೆಂದ್ ಪನ್ನಗ ಉಲ್ಲಾಯೆ
ಸಂಕರ ಸೆನಬೆರ್ ಉಲ್ಲೆರ್ ....
ಅಪ್ಪೆಂದ್ ಪನ್ನಗಾ ಉಲ್ಲೇರ್ ಯೆನಾ
ಓ ... ಪತಿ ಮದಿಮಾಲ್ ....
ಅಕಲೆಗ್ ಪುಟ್ಟಿ ಬಲಪಾಯಿನ ಬಾಲೆಲು
ನಲ್ವೆರ್ ಬಾಲೆಲಕುಲು
ಆ ... ಆ ..... ಏ ....
ನಲ್ವೆರ್ ಬಾಲೆಲ್‌ಗ್ ನಾಲೊಂಜಿ ಪುದರ್ ಲೆಪ್ಪೊಡು
ಲೆಪ್ಪೊಡುಂದು ಪಂಡೇರ್
ನಲ್ವೆರ್ ನಾಲೊಂಜಿ ಪುದರ್ ಲೆಪ್ಪೊಡು
ಪುರಪ್ಪು ಪನೊಡೆಂಕ್ಲೆಗ್
ಓ ... ಏ ...
ಗಂಗೆ ಮದಿಮಾಲ್ ಗೌರಿ ಮದಿಮಾಲ್
ಓ ಪತಿ ಮದಿಮಾಲ್‌ಂದ್ ಪುದರ್ ದಾನೆ ಲೆತ್ತೇರೆ ....
ನಾಲ್ವೆರೆಗ್ ನಾಲೊಂಜಿ ಪುದರ್ ಲೆತ್ತೆರ್‌ಯೇ
ದೇಗಂಚ ಲೆತ್ತೆರ್ ಯೇ
ಅಕಲೆ ಒಡ್ಕದ ಮಗೇ ಉಲ್ಲೆಯೇ ಬಾನ ಸನಬೇ
ಬಾನ ಸನಬೇ ಬಾಲೆ ಮದಿಮಾಲ್
ಪುಟ್ಟಿಂಚಿ ಎಲ್ಯೋ ಎಡ್ಡೆಯೇ . .

ಕನ್ನಡ ಅನುವಾದ

೧

ಡೇ.... ಡೇ.... ಡೆನ್ನಾ.... ಡೆನ್ನಾ....ಡೇ.... ಡೇ....ಡೇ.... ಡೇ.... ಡೆನ್ನಾ.... ಡೆನ್ನಾ....
ಡೇ.... ಡೇ.... ಡೆನ್ನಾ.... ಡೆನ್ನಾ....
ಡೆನನಾ. ಡೆನ್ನಾ ..... ಡೆನನಾ.... ಡೆನ್ನಾ....

ಅಪ್ಪ ಎಂದು ಹೇಳುವಾಗ ಒಡೆಯ
ಸಂಕರ ಸೆನಬೆರೆ/ಸೇನವರು ಇದ್ದಾರೆ
ಅಬ್ಬೆ ಎಂದರೆ ಇದ್ದಾರಂತೇ
ಓ..ಪತಿ ಮದಿಮಾಲ್ ..
ಅವರಿಗೆ ಹುಟ್ಟಿ ಬೆಳೆಸಿದ ಮಕ್ಕಳು
ನಾಲ್ವರು ಮಕ್ಕಳವರು
ಆ....ಆ......ಏ......
ನಾಲ್ವರು ಮಕ್ಕಳಿಗೆ ನಾಲ್ಕೊಂದು ಹೆಸರು ಕರೆಯಬೇಕು
ಕರೆಯಬೇಕು ಎಂದರು
ನಾಲ್ವರು ನಾಲ್ಕೊಂದು ಹೆಸರು ಕರೆದರು
ಹೆಸರು ಕರೆಯಬೇಕೆಮಗೆ
ಓ...ಏ....
ಗಂಗೆ ಮದುಮಗಳು ಗೌರಿ ಮದುಮಗಳು
ಓ ಪತಿ ಮದಿಮಾಲ್ ಎಂದು ಹೆಸರೇನು ಕರೆದರೇ*
ನಾಲ್ವರಿಗೆ ನಾಲ್ಕೊಂದು ಹೆಸರು ಕರೆದರು ಯೇ*
ಯಾಕ್ಹಾಗೆ ಕರೆದರು ಯೇ
ಅವರಿಗೆ ಅಖೇರಿಯ ಮಗ ಇದ್ದಾನೆ ಯೇ*
ಬಾನ ಸನಬೇ ಬಾಲ ಮದುಮಗಳು
ಹುಟ್ಟಿದ ವೇಳೆ ಒಳ್ಳೆಯದು ಯೇ*

೨

ಅಮ್ಮೆ ಸಯಿತ್ಂಡ್ ಅಪ್ಪೆಲಾ ಸಯಿತ್ಂಡ್
ದಿಕ್ಕಂಚ ಮುತ್ತುಂಡಡೆಗ್ .... ಆ ...... ಏ ......
ದಿಕ್ಕ್ಲಾ ಮುತ್ತುಂಡು ಎಡ್ಯ ಗಳಿಗೇ
ಗಳಿಗೇ ಎಡ್ಯಂದ್ ಪಂಡೇರೇ
ಅಪ್ಪೆಮ್ಮ ಸಾವು ಕೊಂದು ಪೋವೊಡೇ ಎಂಕ್
ಕಸ್ತ್ರಾನ ಮಿಸ್ತ್ರಾನೊಗೊ ಸಾಮಿ ಸಾರೊನುಗು
ಎಂಕ್ಲಾ ಪೋವುಡಾಂಡ್
ಗಟ್ಟದ ಮೇಲುಲ್ಲ ರಾಜ್ಯಗೊ ಕನದೇರೆ
ಸೆಂದಕ್ಕಿ ಮನಿ ಮಗನ್* ತರ್ಪದೆರ್
ಸಾರ ಬೂತೊ ಕಂಚಿಂಡು ಸಾರ ಬೂತ ಚೆಂಬುಡೂ ..
ಕಂಚಿದಾ ಕಂರಂಡ್ಯದಾ ಸೆಂಬು ಕಲೆಂಬಿದಾ
ಬೇಲೆಂದ್ ಬೆನ್ಪಾದೆರ್
ಅಮ್ಮೆರೇ ಸೂಕೆನ್ ಕಂಚಿ ಕರನೆಡ್
ಅಪ್ಪೆರೆ ಅಂಗೊನು ಸೆಂಬು ಕಲೆಂಬಿಡ್ ದಿಂಜಾದೆರ್
ಪಜಿತ್ತ ಪರಕೆಡ್ ಬಯಿತ್ತ ಕೋಲು
ಬಾಯಿಂದ್ ಕಟ್ಟಾದೆರ್ ಯೇ
ಆ........ ಓ........ ತುಂಬಾವೊಂದು
ಅಯ್ಯೆರ್ವುಲು ಪೋಪೆರ್
ಬಾನ ಸೆನಬೆರ್ ಗಾನೇ ಪೋಪೆರ್

೩

ಕಸ್ತ್ರಾನ ನಿಸ್ತ್ರಾನೊ ಸಾಮಿ ಸಾರೊನೊಗು
ನಂದ ಗೋಕುಲನ ಆನಿನೇ ಪಿದಾಡೇರ್
ಆ.................. ಏ................
ಉ(ತು)ಂಬೊಂದು ಏರೊಂದು ಪೋಪೆರ್
ಬಾನು ಸನಬೆರ್ ದಾನೆ ತೂನಗ

೨

ಅಪ್ಪ ಸತ್ತಿತು ಅಬ್ಬೆಯೂ ಸತ್ತಿತು,
ದಿಕ್ಹಾಗೆ ನಾಶವಾಯಿತಂತೆ .... ಆ ...... ಏ ......
ದಿಕ್ಕು ಕೂಡ ಮುತ್ತಿತು ಒಳ್ಳೆಯ ಗಳಿಗೇ
ಗಳಿಗೇ ಒಳ್ಳೆಯದೆಂದು ಹೇಳಿದರೇ....
ಅಬ್ಬೆ ಅಪ್ಪನ ಸಾವು ಕೊಂಡು ಹೋಗಬೇಕು ನನಗೆ
ಕಸ್ರಾನ ಮಿಸಾನಕ್ಕೆ ಸ್ವಾಮಿ ಸಾರನಕ್ಕೆ
ನನಗೂ ಹೋಗಬೇಕಾಯಿತು
ಗಟ್ಟದಾ ಮೇಲಿರುವ ರಾಜ್ಯಕ್ಕೆ ತಂದಿದ್ದಾರೆ
ಸೆಂದಕ್ಕಿ ಮಣಿ ಮಗನನು ತರಿಸಿಕೊಂಡರು
ಸಾವಿರ ಭೂತ ಕಂಚಿನಲ್ಲಿ ಸಾವಿರ ಭೂತ ತಾಮ್ರದಲ್ಲಿ
ಕಂಚಿನಾ ಕರಡಿಗೆಯ ತಾಮ್ರದ ಕಲೆಂಬಿಯಾ
ಕೆಲಸ ಮಾಡಿಸಿದರು
ಅಪ್ಪನ ಭಸ್ಮವನ್ನು ಕಂಚಿ ಕರಡಿಗೆಯಲ್ಲಿ
ಅಬ್ಬೆಯ ಎಲುಬನ್ನು ತಾಮ್ರದ ಕಲೆಂಬಿಯಲ್ಲಿ ತುಂಬಿಸಿದರು
ಹಸಿಯ ಹರಕೆಯಲಿ ಬೈಯ ಬಡಿಗೆ
ಮುಚ್ಚಳ ಎಂದು ಕಟ್ಟಿಸಿದರು ಯೇ*
ಆ........ ಓ........ ಹೊರಿಸಿಕೊಂಡು
ಅಯ್ಯರಲ್ಲಿಗೆ ಹೋಗುತ್ತಾರೆ
ಬಾನ ಸನಬರು ಕೂಡಲೇ ಹೋಗುತ್ತಾರೆ

೩

ಕಸ್ರಾನ ನಿಸ್ರಾನ ಸ್ವಾಮಿ ನೋಡಲು ಸಾರನಕ್ಕೆ
ನಂದ ಗೋಕುಲಕ್ಕೆ ಆಂದೇ ಹೊರಟರು
ಆ.................... ಏ.................
ಹೊತ್ತುಕೊಂಡು ಏರಿಸಿ ಹೋಗುತ್ತಾರೆ
ಬಾನು ಸನಬರು ಏನೆಂದು ನೋಡುವಾಗ

ಸಾಮಿಲ ಸಾರೊನು ಏರೇ ರ್ ಪೋತೆಗೇ
ಏರೇ ಇಂದೆ ಕೇನ್ನಗ
ನೇಲಲ್ಲ ಸಾರೊಗು ಉಲ್ಲೇನಾ ಮಗೆ
ನೆಲ್ಸರೆ ನೆಕ್ಕರೆ ಆಯೇ ಪೋತೆಂದೇ ಪಂಡೆರ್ ....

ಏರ್ ಲಾ ಪೋಪರ್ಡ್ ಬಾನ ಸನಬೆರ್
ಗೆಂಡದಾ ಸುದೆ ಉಂಡು ಮಾನಂದ ಓಡ ಉಂಡು
ಕಡಪಿಂಚಿ ಕರಿಯಾ ಉಂಡು ಪನ್ಪೆರ್ ಸನಬೆರ್
ಅವುಲೆಂಚ ಪೋವರ್ ಅವುಲೆಂಚ ಬರುವೆರ್
ಬಾನ ಸನಬೆರ್ ಆ........... ಏ...........

ಉಪ್ಪಂದೆ ಪೋವೆನಡೆ ಯಾನ್
ಸಂಚಲ ನೆಡೆ ಯಾನೆ ಪಿರಪ್ಪ ಬರುವೇ
ಉಪಾಯೊಂದು ಪೋವೆನಾ
ಸಂಚಲ ನೆಡೆ ಯೇನೆ ಪಿರಪ್ಪ ಬರುವೇ
ಆ...... ಆ....... ಏ....... ಏ......
ಉಂಬೊಂದು ಏರೊಂದು ಪೊಪೇರ್ ....
ಬಾನು ಸನಬೆರ್ ಆದನಡೇ ಪೋಪೆರ್

ಕೆಕ್ಕಿಲ್ದ ನೀರ್‌ಗ್ ಪೋಯೆರ್ ಸನಬೆರ್
ಅಮ್ಮೆರೆ ಸೂಕೆನ್ ಪಾರಾಯೆರ್
ಸೊಂಟಯಪ್ಪ ನೀರ್‌ಗ್ ಪೋಯೆರ್ ಬಾನ ಸನಬೆರ್
ಅಪ್ಪೆರೇ ಅಂಗೋನು ಪಾರಾದೆರ್
ಅಮ್ಮೆರೆ ಸೂಕೆನ್ ಅಪ್ಪೆರೇ ಲಂಗೋನು
ಪಾರಾದೆರ್ ಸನಬೆರ್
ಗಂಗೆಗ್ ಪೋಡಿಂದ್ ಗಂಗೆ ನೀರ್ ಮೀಯೊಡಿಂದ್
ಕೆದುತಡೆ ಪೋವುಡು ಕೆದುತ

ಸ್ವಾಮಿಯಾ ನೋಡಲು ಯಾವ್ಯಾವನೋ ಹೋಗಿದ್ದನಂತೆ
ಯಾರೆಂದು ಕೇಳುವಾಗ
ದೊಡ್ಡ ಮನೆ ನೋಡುವವ ಇದ್ದಾನೆ ಮಗ
ನೆಲ್ಸರೆ ನೆಕ್ಕರೆ ಆತ ಹೋಗಿದ್ದಾನೆ ಎಂದು ಹೇಳಿದರೂ

ಯಾರಾದರೂ ಹೋಗುವಿರಾದರೆ ಬಾನ ಸನಬೆರ್
ಕೆಂಡದಾ ನದಿ ಇದೆ ಮಾನದ ದೋಣಿ ಇದೆ
ದಾಟುವ ಕರಿಯ ಇದೆ ಹೇಳುವರು ಸನಬರು
ಅಲ್ಲಿ ಹೇಗೆ ಹೋಗುವರು ಅಲ್ಲಿ ಹೇಗೆ ಬರುವರು
ಬಾನ ಸನಬರು.......ಆ.........ಏ....

ಇರದೆ ಹೋಗುವೆನಲ್ಲಿಗೆ ನಾನು
ಸಂದೇಹದಲ್ಲಿ ನಾನು ಮತ್ತೆ ಬರುವೆ
ಉಪಾಯದಲ್ಲಿ ಹೋಗುವೆನಾ
ಸಂದೇಹದಲ್ಲಿ ನಾನು ಮತ್ತೆ ಬರುವೆ
ಆ...... ಆ....... ಏ....... ಏ......
ಹೊರುತ್ತಾ ಏರುತ್ತಾ ಹೋಗುವರು
ಬಾನು ಸನಬರು ಅಲ್ಲಿಗೇ ಹೋಗುತ್ತಾರೆ

ಕತ್ತಿನ ನೀರಿಗೆ ಹೋದರು ಸನಬರು
ಅಪ್ಪನ ಭಸ್ಮವನು ಹಾರಿಸಿದರು
ಸೊಂಟದಷ್ಟು ನೀರಿಗೆ ಹೋದರು ಬಾನ ಸನಬೆರ್
ಅಬ್ಬೆಯ ಎಲುಬನ್ನು ಹಾರಿಸಿದರು
ಅಪ್ಪನ ಭಸ್ಮವನ್ನು ಅಬ್ಬೆಯ ಎಲುಬನ್ನು
ಹಾರಿಸಿದರು ಬಾನು ಸನಬರು
ಗಂಗೆಗೆ ಹೋಗಬೇಕೆಂದು ಗಂಗೆ ನೀರು ಮೀಯಬೇಕೆಂದು
ಕೆರೆ ಬಳಿ ಹೋಗಿ ಕೆರೆಯ

ನೀರ್ ಮೀಯೊಡು ಪಂಡೇರ್
ಸುದ್ದೊಗು ಕಲಸ ... ಉಂಡೂ ಪಂಡೇರ್
ಬಾನು ಸನಬೆರ್ ಯೇ...

೪

ಅಪ್ಪೆಮ್ಮ ಮಲ್ತಿನ ದಾನ ಮಲ್ಪೊಡು
ಜನ್ಮ ಕಲೆವುಡುಂದು ಪಂಡೆರ್ ಯೇ
ತರೆಲಾ ತೂಯಿನಾಯಗ ಎನ್ನೆದಾನ ಮಲ್ತೆರ್
ಒಕ್ಕಲ ತೂಯಿನಾಯಗ ನೂಲರುವೆ ಮಲ್ತೆರ್
ಅಂಗೈ ಒಡ್ಡಿನಾಯಗ ಪನವು ದಾನ ಮಲ್ತೆರ್
ದಾನ ಮೆಲ್ತೆರ್ ಜನ್ಮ ಪಡೆಯೆರ್ .

೫

(ಈ ಭಾಗವನ್ನು ನಿಧಾನ ಸೌಮ್ಯವಾಗಿ ಹಾಡಿದರು)
ಮರಿಯಾಲು ಮಾಲಂಜಿ ಗೋರಿನವುಲು
ಓ ನಿಲೆ ಅಡಿ ಪೋಯಿ ರಾಜಾಂಗಣ ಕೆತ್ತಾದೆರ್
ಓ ನಿಲೆ ಪೋಯಿ ರಾಜಾಂಗಣ ಕೆತ್ತಾದೆರ್
ಓ ..... ಓಣಿಲ ಪೋಯಿ ರಾಜಾಂಗಣೊ ಕೆತ್ತಾದೆರ್
ಓ ..... ಮೇಲ್ ಪೋಯಿ ದೊಂಪೊ ಬಾನ್ಸಬೆ ಪಾಡಾಯೆರ್
ಓ ..... ಒಂಜಿ ದೊಂಪೊಗು ನಾಲ್ ಬಾಕಿಲ್ ದೀಪಾಯೆರ್
ಓ ..... ಮೇಲ್ಮುಗುಳಿ ದೊಂಪ ಬಾನ ಸನಬೆರ್ ಏರ್ಪಾದೆರ್
ಓ ..... ದೊಂಪೊಗು ನಾಲ್ ಬಾಕಿಲ್ ಏರ್ಪಾದೆರ್
ಓ .ದೊಂಪೊಗು ನಾಲ್ ಬಾಕಿಲ್ ಏರ್ಪಾದೆರ್ ಏ..ಏ...

೬

ಓ ..... ಎಣ್ಣೆನ್ ತಲಟು ಲಪ್ಪಾದೆರ್
ಓ ..... ಎಣ್ಣೆನ್ ತಲಟೇ ಲಪ್ಪಾದೆರ್
ಓ ..... ಬೆಲ್ಲಂದ ದಿಕ್ಕೆಲ್ ಗೂರಾದೆರ್

ನೀರು ಮೀಯಬೇಕೆಂದು ಹೇಳಿದರು
ಶುದ್ಧಕ್ಕೆ ಕಲಶ.... ಇದೆಯೆಂಡ್ಲು ಹೇಳಿದರು
ಬಾನು ಸನಬರು ಯೇ.....

೪

ಅಪ್ಪಮ್ಮ ಮಾಡಿದ್ದು ದಾನ ಮಾಡಬೇಕು
ಜನ್ಮ ಕಳೆಯಬೇಕೆಂದು ಹೇಳಿದರು ಯೇ
ತಲೆ ಕಂಡವನಿಗೆ ಎಣ್ಣೆ ದಾನ ಮಾಡಿದರು
ಸೊಂಟ ಕಂಡವಗೆ ಬಟ್ಟೆ ದಾನ ಮಾಡಿದರು
ಅಂಗೈ ನೀಡಿದವಗೆ ಪಣವು ದಾನ ಮಾಡಿದರು
ದಾನ ಮಾಡಿದರು ಜನ್ಮ ಪಡೆದರು

೫

(ಈ ಭಾಗವನ್ನು ನಿಧಾನ ಸೌಮ್ಯವಾಗಿ ಹಾಡಿದರು)
ಮರಿಯಾಲು ಮಾಲಂಜಿ ಗೋರಿ ಇದ್ದಲ್ಲಿ
ಓ ನೆಲೆ ಅಡಿ ಹೋದ ರಾಜಾಂಗಣ ಕೆತ್ತಿಸಿದರು
ಓ ನೆಲೆ ಹೋದ ರಾಜಾಂಗಣ ಕೆತ್ತಿಸಿದರು
ಓ ..... ಓಣಿ ಇದ್ದ ರಾಜಾಂಗಣ ಕೆತ್ತಿಸಿದರು
ಓ ..... ಮೇಲೆ ಹೋದ ಚಪ್ಪರ ಬಾನ್ಸಬ ಹಾಕಿಸಿದರು
ಓ ....ಒಂದು ಚಪ್ಪರಕ್ಕೆ ನಾಲ್ಕು ಬಾಗಿಲು ಇಡಿಸಿದರು
ಓ ..... ಮೇಲೆ ಮುಗುಳಿಯ ಚಪ್ಪರ ಬಾನ ಸನಬೆರ್ ಏರಿಸಿದರು
ಓ..... ಚಪ್ಪರಕ್ಕೆ ನಾಲ್ಕು ಬಾಗಿಲು ಏರಿಸಿದರು
ಓ ...ಚಪ್ಪರಕ್ಕೆ ನಾಲ್ಕು ಬಾಗಿಲು ಏರಿಸಿದರು ಏ...ಏ....

೬

ಓ ..... ಎಣ್ಣೆಯನ್ನು ಕ್ಷೇತ್ರದಲಿ ಅಳತೆ ಮಾಡಿಸಿದರು
ಓ .....ಎಣ್ಣೆಯನ್ನು ಕ್ಷೇತ್ರದಲ್ಲಿಯೇ ಅಳತೆ ಮಾಡಿಸಿದರು
ಓ ..... ಬೆಲ್ಲದ ಒಲೆ ಹೂಡಿಸಿದರು

ಓ ..... ಬೆಲ್ಲಂದ ದಿಕ್ಕೆಲ್ ಗೂರಾದೆರ್
ಓ ..... ವೇಣೂರ್ದು ಎಲ್ಕ್ಯೈ ಕೊಪ್ಪರಿಗೆ ತರ್ಪಾದೆರ್
ಓ ..... ಎಣ್ಣೆ ಕಡ್ಯೊಗು ಕೊಪ್ಪರಿಗೆ ತರ್ಪಾದೆರ್
ಓ ..... ನಂದರ ಬಾವನೊಗು ತರ್ಪಾದೆರ್
ಓ ..... ಕಾರ್ವೋಲು ಮುಕ್ಕಳಿಗೆ ತರ್ಪಾದೆರ್

೭

ಓ ..... ಒಂಜಿಲಾ ಬಾಕಿಲ್‌ದವುಲು ಸನಬೇರ್
ಓ ..... ಪಿಂಗಾರೊಡು ಕೊಲ್ತಿರಿ ಕುತ್ತಾದೆರ್
ಓ ..... ಚಾವಲಂಡ್ ಸಿಂಗಾರವೇ ಮನ್ಪಾದೆರ್
ಓ ..... ಕಂರ್ಬುಡು ಕೊಂಬಾಲೆ ಗೂರಾದೆರ್
ಓ ..... ಸುಣ್ಣೊಡು ಸೂ ತೂರಂದ್ ಬರಪಾದೆರ್
ಓ ..... ವೇಣೂರುಡ್ದು ರೆಂಜಿ ಕಂಡೆ ತರ್ಪಾದೆರ್
ಓ ..... ಎಣ್ಮ ಕೈತ ಕೊಪ್ಪರಿಗೆ ತರ್ಪಾದೆರ್
ಓ ..... ದಿಕ್ಕೆಲ್‌ಗ್ ಕೊಪ್ಪರ್ಗೆ ದೀಪಾದೆರ್
ಓ ..... ದಿಕ್ಕೆಲ್‌ಗ್ ಕೊಪ್ಪರ್ಗೆ ದೀಪಾದೆರ್
ಓ ..... ಕೊಪ್ಪರೆಗೆಗ್ ನೀರ್ ಕೂಟಾದೆರ್
ಓ ..... ಸರ್ವೊಗು ಏತ್‌ರಿಂದ್ ಕೇನರೆಯೇ
ಡನ್ನ ಡನ್ನನೋ ಡನ್ನನೋ ಡನ್ನ ..ಡನ್ನಯೇ
ಬಡಕಾಯಿ ಆದಿ ಕೊಂಡೆಲೆದ
ಕೊಡಂಗೆ ಬನ್ನಾರೆ ಕುರುಡುಮಲೆಟಾ
ಪುಲ್ಯನಾ ಕಾಂಡೆ ಲಕ್ಕಿಯೆರ್ ಕೊಡಂಗೆ ಬನ್ನಾರ್
ಸಾರ ಮುಡಿ ಕಂಡದ ಕರುನೀರ್ ಕಟ್ಟಿಯೆರೆ ಪಿದಡಿಯೆರ್

ಎರ್ಕಿನ ನೀರ್ ಸಿರ್ಕಾಯೆರ್
ಸಿರ್ಕಿನ ನೀರ್ ಎರ್ಕಾಯೆರ್ ಪೋನಗ
ಅರೆನ ಒಕ್ಕೆಲ ಸಕ್ಕೆಲ್ದ ಪಕ್ಕಿ ಕಿಲೆಂಜೆರ್ ಕಿಲೆವೊಂದು
ಬಡಕಾಯಿಡ್ಡ್ ಡರ್ಪ್ದ ನಸ್ರನ್ನ ನರ್ಪಡ
ಸಿಗ್‌ರ್‌ಂಡ್ ಸಿರಿ ಮಿರೆ
ತಯ್ತ್ ಮುತ್ತುಂದು ಒರಿಯಲಪ್ಪೆ ಒಂಜಿ ಮಗಲ್

ಪಕ್ಕಿ ಕಿಲೆಕ್ ಕೀಲ್ನ ಎಂಚಿನ ತೂನಗ
ತಯ್ತ ಪುನತ ಮಿತ್ತ್ ಬಾಲೆ ಬೂರ್ದು
ಮಿರೆ ತಿನೊಂದು ಉಂಡು.

ಪಾರೊನು ಬೂರೊನು ಬರುವೆರ್
ಕೊಡಂಗ ಬನ್ನಾರೆ ನೆಲಕ್ಕೇ
'ಯೇರ್‌ಯಾ ಸಿರಿಕೊಂಡೆ ಯೇರ್‌ಯಾ ಸಿರಿಕೊಂಡೆ
ನಮ್ಮ ಒಕ್ಕೆಲ್ದ್ ಸಕ್ಕೆಲ್ದ್ ತಯ್ತಿ ಪುನತ ಮಿತ್ತ್
ಬಾಲೆ ಮಿರೆ ತಿನೊಂದು ಉಂಡುಗೇ
ಈಲ ಪೋದು ತೂದು ಬಲ' ಪನ್ನಗ
ಸಿರಿಕೊಂಡಪ್ಪೆರ್ ಪೋದು ಬಾಲೆನ
ಪತೊಂದು ಬರುವೆರ್‌ಗೆನಾ

ತಿಪ್ಪಿಡ್ ಗಂಜಿ ಕಜಕ್ಕ್‌ಡ್ ಪೇರ್
ಕೊರ್ದು ಮಗಲೆನ್ ಅಂದ ಬಲ್ಮೆನ ಮಲ್ತೆರ್
ಕಚ್ಚಿರ ಮಾಲ್ದಿ ಇಂದ್ ಪುದರ್ ದೀಯೆರ್
ಎಲ್ಯಾಲಾ ಪೋಯಲ್ ಮಲ್ಲಾಲ್ ಆಯಲೇ
ಅವ್ವಾ ಸಮಯೊಡು ಪನ್ಪಲಾ

ಕನ್ನಡ ಮೂಲ

ಡನ್ನ ಡನ್ನನೋ ಡನ್ನನೋ ಡನ್ನ ..ಡನ್ನಯೇ
ಬಡಗು ಆದಿ ಕೊಂಡೆಲಿನ
ಕೊಡಂಗೆ ಬನ್ನಾರ ಕುರುಡು ಮಲೆಯಲ್ಲಿ
ನಸುಕಿನಲ್ಲಿ ಎದ್ದರು ಕೊಡಂಗೆ ಬನ್ನಾರು
ಸಾವಿರ ಮುಡಿ ಗದ್ದೆಯ ಕರುನೀರು ಕಟ್ಟಲು ಹೊರಟರು

ತುಂಬಿದ ನೀರು ಇಳಿಸಿದರು
ಕಮ್ಮಿ ಆದ ನೀರು ಏರಿಸಿದರು
ಅವರ ಒಕ್ಕಲ ಸಕ್ಕಲ ಹಕ್ಕಿ ನೊಣಗಳು ಚೀರುವಾಗ
ಬಡಗು ದರ್ಪದ ನಸ್ರನ್ನ ನರ್ಪಡ
ಚಿಗುರಿತು ಸಿರಿ ಮೊಲೆ
ಸತ್ತು ನಾಶವಾದ ಒಬ್ಬ ತಾಯಿಯ ಒಬ್ಬಳೇ ಮಗಳು

ಪಕ್ಷಿ ಚೀರುವುದು ಏನೆಂದು ನೋಡುವಾಗ
ಸತ್ತ ಹೆಣದ ಮೇಲೆ ಮಗು ಬಿದ್ದು
ಮೊಲೆ ಕುಡಿಯುತ್ತಿತ್ತು

ಓಡುತ್ತಾ ಬೀಳುತ್ತಾ ಬರುವರು
ಕೊಡಂಗ ಬನ್ನಾರರ ನೆಲೆಗೇ
'ಯಾರದು ಸಿರಿ ಕೊಂಡೆ ಯಾರದು ಸಿರಿ ಕೊಂಡ
ನಮ್ಮ ಒಕ್ಕಲು ಸಕ್ಕಲಲ್ಲಿ ಸತ್ತ ಹೆಣದ ಮೇಲೆ
ಮಗು ಮೊಲೆ ಕುಡಿಯುತ್ತಿದೆಯಂತೆ
ನೀನು ಹೋಗಿ ಮಗುವನ್ನು ನೋಡಿ ಬಾ '
ಸಿರಿ ಕೊಂಡಬ್ಬೆಯವರು ಹೋಗಿ ಮಗುವನ್ನು
ಹಿಡಿದು ಬರುತ್ತಾರಂತೆ

ಚಿಪ್ಪಲ್ಲಿ ಗಂಜಿ, ಕಜಕ್(ಕಪ್ಪೆ ಚಿಪ್ಪು)ನಲ್ಲಿ ಹಾಲು
ಕೊಟ್ಟು ಮಗಳನ್ನು ಪಾಲಿಸಿದರು
ಕಚ್ಚಿರದ ಮಾಲ್ದಿ ಎಂದು ಹೆಸರಿಟ್ಟರು
ಬಾಲ್ಯ ಹೋಯಿತು ಹರೆಯದವಳಾದಳು
ಆ ಸಮಯದಲ್ಲಿ ಹೇಳುತ್ತಾಳೆ

ಯೇರ್ಯೇ ಅಪ್ಪೇರೆ ಕುಲುದು ತಿಂದ್‌ಂಡ
ಕುಂಜ ಮುತ್ತುಂಡುಗೇ
ಸನ್ನ ಕತ್ತಿ ಕಿನ್ಯ ಬಟ್ಟಿ ಕೊರ್ಲೆ

ಸನ್ನ ಕತ್ತಿ ಕಿನ್ಯ ಬಟ್ಟಿ ಪತ್ತಿಯಾಲ್
ನಾಗ ಬಿರ್ಮೆರೆ 'ಪಜೆನ' ಎದುರು
ಬಟ್ಟಿ ಪಾಡ್ದ್ ಕುಲುದು ಪಜಿರ್ ಪಿರೆನಗಾ
ಪೊನ್ನು ಪೋಯೊಲು ಪೊಂಜೋವು ಆಯೊಲೇ
ಪಿರಪಲಾ ಪಿಜಿರೊಂದು ಬರುವಲ್
ಕಿದೆ ಬಯಿಪನೆ ಪೊಗ್ಗಿ ಮಗಲ್ ತೋಜ್ಜಲ್
ತರೆ ಕಂತ ಪಾಡ್ದ್ ಉಗುರು ತುಚ್ಚೊಂದು ಉಲ್ಲಾಲ್
ಮಗಲ್ ಒಡೆಗ್ ಪೋಯಲ್ ಪಂಡ್‌ದ್ ಸಿರಿಕೊಂಡೆಪೆರ್
ಅಂಡೆನಾ ಗಿಂಡೆನಾ ಪತೊಂದು ಬನ್ನಗ
ತರೆ ಕಂತ ಪಾಡ್ದ್ ಉಗುರು ತುಚ್ಚೊಂದು ಉಲ್ಲಲೇ

'ಯೇರ್ಯಾ ದಾಯೆ ಬುಲಿಪುವಾ
ನಿಕಲೆ ಕಟ್ಟಡ್ ದಾನೆ ಆವೊಡುಂದು' ಪನ್ಪೇರ್ ಅಪ್ಪೆರ್
'ಯಂಕ್ಲೆ ಕಟ್ಟಡ್ ಯೇಲ್ ಇಲ್ಲಡೆ ಪನೊಡು
ಯೇಲಪ್ಪೆ ಬಾಲೆಲು ಬರೊಡು
ಯೇಲ್ ಕಲಸ ಕಟ್ಟೊಡು
ಮದಿಮಲಾಯಿ ಮದಿಮೆ ದೆಪ್ಪೊಡೂ
ಮದಿಲಾಯಿ ಮದಿಮೆ ದೆಪ್ಪೊಡು ಅಪ್ಪೇರೆ' ಪನ್ಪಲಾ

ಏಲ್ ಇಲ್ಲಡೇ ಪನ್ಪಾಯೆರ್
ಅಲೆನ ಮಾಮಗ ಮಾಮಿಗ್ ಪಂಡೇರ್
ಪಕಿರನ್ನ ಕೊಪ್ಪದ ಉಪ್ರ ಮಾಯಿಲೆಲಾ
ಬೊಲ್ಯ ಕೊರತಿಲಾ ಬರುವೆರ್
ಏಲ್ ಇಲ್ಲಡ್ ಪಂಡ್ ಏಲಪ್ಪೆ ಬಾಲೆಲು ಬತ್ತೇರ್
ಏಲ್ ಕಲಸಲಾ ದೀತ್‌ಂಡೇ
ಮದಿಮಲಾಯಿ ಮದಿಮೆಲಾ ಕರಿತೆರ್
ಯೇರ್ ಉಲ್ಲಾಲ್ದಿಯೇ ಇನಿಮುಟ್ಟ ಈರ್
ಅಂದ್ ಬಲಿಮಾನ ಮಲ್ತರ್
ಎಂಕ್ಲೆ ಲೆತೊಂದು ಪೋಪನೇ

ಯಾರದು ಅಬ್ಬೆಯವರೇ ಕುಳಿತು ತಿಂದರೆ
ಬೆಟ್ಟವೂ ಕರಗುತ್ತದೆಯಂತೆ.
ಚಿಕ್ಕ ಕತ್ತಿ ಸಣ್ಣ ಬುಟ್ಟಿ ಕೊಡಿ

ಚಿಕ್ಕ ಕತ್ತಿ ಸಣ್ಣ ಬುಟ್ಟಿ ಹಿಡಿದಳು
ನಾಗ ಬೆರ್ಮೆರ ಹುತ್ತದ ಎದುರು
ಭಟ್ಟಿ ಇಟ್ಟು ಕೂತು ಹುಲ್ಲು ಕೆರೆಯುವಾಗ
ಹೆಣ್ಣು ಹೋಗಿ ಹೆಂಗುಸಾದಳು
ಮರಳಿ ತಿರುಗಿ ಬರುವಳು
ಹಟ್ಟಿಯ ಬಯಿಪನೆ ಹೋದ ಮಗಳು ಕಾಣಳೂ
ತಲೆ ತಗ್ಗಿಸಿ ಉಗುರು ಕಡಿಯುತ್ತಾ ಇದ್ದಾಳೆ
ಮಗಳ್ ಎಲ್ಲಿ ಹೋದಳೆಂದು ಸಿರಿಕೊಂಡೆಯವರು
ಅಂಡೆಯಾ ಗಿಂಡೆಯಾ ಹಿಡಿದು ಬರುವಾಗ
ತಲೆ ತಗ್ಗಿಸಿ ಉಗುರು ಕಚ್ಚುತ್ತಾ ಇದ್ದಾಳೆ

'ಯಾರದು ಯಾಕೆ ಅಳ್ತಿಯೇ
ನಿಮ್ಮ ಪದ್ಧತಿಯಲ್ಲಿ ಏನಾಗಬೇಕು?' ಎನ್ನುತ್ತಾರೆ ಅಬ್ಬೆಯವರು.
'ನಮ್ಮ ಪದ್ಧತಿಯಲ್ಲಿ ಏಳು ಮನೆಗೆ ಹೇಳಬೇಕು.
ಏಳು ಅಬ್ಬೆಯ ಮಕ್ಕಳು ಬರಬೇಕು
ಏಳು ಕಲಶ ಕಟ್ಟಬೇಕು
ಒಸಗೆ ಆಗಬೇಕು
ಒಸಗೆ ಆಗಬೇಕು ಅಬ್ಬೆಯವರೇ' ಹೇಳುತ್ತಾಳೆ

ಏಳು ಮನೆಯಲ್ಲಿ ಹೇಳಿಕೆ ನೀಡಿಸಿದರು
ಅವಳ ಮಾವ(ಸೋದರ)ಮಾಮಿಗೆ ಹೇಳಿಸಿದರು
ಪಕಿರನ ಕೊಪ್ಪದ ಉಪ್ರ ಮಾಯಿಲೆಯೂ
ಬಿಳಿಯ ಕೊರತಿಯೂ ಬರುವರು
ಏಳು ಮನೆಗೆ ಹೇಳಿ ಏಳು ತಾಯಿಯ ಮಕ್ಕಳು ಬಂದರು
ಏಳು ಕಲಶಲಾ ಇಟ್ಟಿದೆ
ಮದಿಮಲಾದ ಮದುವೆ ಮುಗಿಸಿದರು
"ಯಾರು ಉಲ್ಲಾಲ್ತಿಯೇ ಇಂದಿನವರೆಗೆ ನೀವು
ಪಾಲಿಸಿ ಬೆಳೆಸಿದಿರ
ನಾವು ಕರೆದೊಯ್ಯುತ್ತೇವೆ

....

ಪಕಿರನ್ನ ಕೊಪ್ಪೊಗು ಲೆತೊಂಡ್ಧು ಬರ್ಪೆರ್
ಯೇರ್ ಮಗಲೇ ಯೆಂಕುಲು
ಉಲ್ಲಾಯ ಜಾಲ್‌ಗ್ ಬೇಲೆಗ್ ಪೋಪನೇ
ಯೆಂಕ್ಲೇ ಬಾಲೆನ್ ತೂವೊಂದು ಉಪ್ಪುಲಾ

ಅಕುಲು ಪೋಪಿನಾ ತೂಯಲ್
ಬಾಲೆದ ಮಡೆಕುಂಟು ಅರ್ದ್ದರಾ ಪೋಯಲ್ ಮಗಲ್
ಕಂಡದ ಕಡಿಕ್ ಸೂಡದುಲಿಕ್ ಪೋನಗ
ಆಕಾಸೊಡು ಬರ್ಪೆ ಗೆಂದೆ ತವಲೇ
ಆಯೆನ ಕಾರ್‌ಡ್ ಉಂಡು ಕೋರಿದ ಕಿನ್ನಿ
ಕಲ್ಲ್‌ಡ್ ದಕ್ಕಿಯಲ್ ಕಿನ್ನಿ ಬೂರ್ಜಿ
ಬಾಲೆದ ಕುಂಟುನು ಬೀಜಿನಗಾ ಕಿನ್ನಿಲಾ ಬೂರುಂಡು.

ಕಿನ್ನಿ ಕೊಂಡ ಬರುವಲ್ ಕಜ್ಜಿರದ ಮಾಲ್ದಿ
ಗಿಡಿ ಮುಟ್ಟಿ ದೋಸೊಗು ಉಪ್ಪ ಕರಿಯ ದೀಯಲ್
ಎಲ್ಯ ಪೋತುಂಡು ಕಿನ್ನಿ ಮಲ್ಲನೇ ಆತ್‌ಂಡ್
ಎಲ್ಯಲ ಪೋವು ಮಲ್ಲೆ ನಿರೆತ್‌ಂಡ್
ಪೂಂಜೆರ್ಲೆ ಬೆರಿಯ ಪೋಯರೇ ನಿರೆಂಡೇ

ತೆತ್ತಿಗ್ ನರಕುಂಡು ಸುರುದೀನಿ ತೆತ್ತಿಗ್
ಸುರುದೀನಿ ತೆತ್ತಿಗ್ ತಾರೆದ ಒಟ್ಟು ಪಾಡಿಯಲ್
ಅಪಗಾ ಪನ್ಪಾಲ್ ವರ್ತೆದ ಕೊಡಿ ತೂದು
ಕಾವು ಕಟ್ಟ್‌ದ್ ಕೊರ್ಪಲ್

ನೂಲ ಪೊರ್ಲುಗು ತೆತ್ತಿ ಉಡೆತ್‌ಂಡ್
ಎನ್ನ ಉಲ್ಲಾಯಗ್ ಸಾನೊಗು ತಾರಾಯಿ
ಮೂಲೊಗು ಕೋರಿ ಬುಡುವೆ ಪನ್ಪಲ್

ಅವ್ವ ಪೊರ್ಲು ಕಿನ್ನಿಲಾ ಉಡೆದ್‌ಂಡ್
ಅವ್ವಲಾ ಏರ್ ಮಾಮ ಮಾಮಿಯೇ
ಆನಿ ಪಂಡಿ ಪಾತೆರೊಗು ಇನಿ ಪಂಡಿ ಕೇಲ್ತೆಗ್
ನಂಕ್ ಉಲ್ಲಾಯಗ್ ಮೂಲೊಗು ಕೋರಿ ಬುಡಿಯೆರೆ ಪೋವೊಡು

....
ಪಕಿರನ ಕೊಪ್ಪಗೆ ಕರೆ ತರುತ್ತಾರೆ
ಯಾರು ಮಗಳೇ ನಾವು
ಒಡೆಯರ ಅಂಗಳಕ್ಕೆ ಕೆಲಸಕ್ಕೆ ಹೋಗುತ್ತೇವೆ
ನಮ್ಮ ಮಗುವನ್ನು ನೋಡುತ್ತಿರು

ಅವರು ಹೋಗುವುದು ನೋಡಿದಳು
ಮಗುವಿನ ಮೈಲಿಗೆ ಬಟ್ಟೆ ಒಗೆಯಲು ಹೋದಳು ಮಗಳು
ಗದ್ದೆಯ ಬಾಗಿಲಿಗೆ ಸೂಡದುಲಿಗೆ ಹೋಗುವಾಗ
ಆಕಾಶದಲ್ಲಿ ಬರುತ್ತಾನೆ ಕೆಂಪು ತೆವಲಾ
ಅವನ ಕಾಲಲ್ಲಿ ಕೋಳಿಯ ಮರಿ
ಕಲ್ಲನ್ನೆಸೆದಳು ಮರಿ ಬೀಳಲಿಲ್ಲ
ಮಗುವಿನ ಬಟ್ಟೆಯನ್ನು ಬೀಸಿದಾಗ ಮರಿ ಬಿತ್ತು

ಮರಿ ತರುತ್ತಾಳೆ ಕಚ್ಚಿರದ ಮಾಲ್ದಿ
ಗಿಡುಗ ಮುಟ್ಟಿದ ದೋಷಕ್ಕೆ ಉಪ್ಪ ಕರಿಯ ಇಟ್ಟಳು
ಚಿಕ್ಕದು ಹೋಗಿದೆ ಮರಿ ಬೆಳೆಯಿತು
ಚಿಕ್ಕದಿದ್ದ ಮರಿ ಬೆಳೆದು ಮುಲುಕಿತು
ಹುಂಜಗಳ ಹಿಂದೆ ಹೋಗಲು ಮುಲುಕಿತು

ಮೊಟ್ಟೆಗೆ ಮುಲುಕುತ್ತದೆ. ಮೊದಲಿಟ್ಟ ಮೊಟ್ಟೆಗೆ
ಮೊದಲಿಟ್ಟ ಮೊಟ್ಟೆಗೆ ತೆಂಗಿನ ಹೊಟ್ಟು ಇಟ್ಟಳು
ಆವಾಗ ಹೇಳುತ್ತಾಳೆ ವರ್ತೆ ಚಿಗುರು ನೋಡಿ
ಕಾವು ಇಟ್ಟು ಕೊಡುತ್ತಾಳೆ

ನೂಲ ಚಂದಕ್ಕೆ ಮೊಟ್ಟೆ ಒಡೆಯಿತು
ನನ್ನ ಉಲ್ಲಾಯನ ಸ್ಥಾನಕ್ಕೆ ತೆಂಗಿನ ಕಾಯಿ
ಮೂಲಕ್ಕೆ ಕೋಳಿ ಬಿಡುವೆ

ಅದೆ ಚಂದದಲಿ ಮರಿ ಒಡೆಯಿತು
ಅದು ಯಾರು ಮಾಮ ಮಾಮಿಯರೇ
ಅಂದು ಹೇಳಿದ ಮಾತಿಗೆ ಇಂದು ನುಡಿದ ಕೇಳಿಕೆಗೆ
ನಮ್ಮ ಉಲ್ಲಾಯನಿಗೆ ಮೂಲಕ್ಕೆ ಕೋಳಿ ಬಿಡಲು ಹೋಗಬೇಕು

ಮಾಮೆಲಾ ಮಾಮಿಲಾ ಕಚ್ಚಿರಾ ಮಾಲ್ದಿಲಾ
ಕೊಡಂಗೆ ಬನ್ನಾರೆ ನೆಲೆಕ್ ಪೋಪೆರ್
ಸಾಮಾನು ತಾರಾಯಿ ದೀಯೆರ್ ಕೋರಿ ಬುಡಿಯೆರ್
ಮಗಲವುಲು ಉಂತಿಯಲ್

ಅವುಲಾ ಕೊಡಂಗೆ ಬನ್ನಾರೆ ನಿಲೆಟ್
ಮಾಮೆಲಾ ಮಾಮಿಲಾ ಕಚ್ಚಿರಂದ ಇಲ್ಲಡೆ ಬರುವೆರ್
ಅವನ ದಿನ ಪೋತುಂಡು
ಮಗ್‌ರ್ ದಿನೊಟು ಆರ್ ಸಿರಿ ಕೊಂಡಪೆರ್

ಬೂಡುಗು ದೂರ ಕರಿಯಗ್ ಮುಟ್ಟ ಕುಲ್ಲಿಯೆರ್
ಕಚ್ಚಿರದ ಮಾಲ್ದಿಲಾ ತನ್ನ ಇಲ್ಲಗ್ ದೂರಾದ ಕುಲಿಯಾಲ್
ಒಂಜಿ ಕುಲ್ಲಿಯೆರ್ ರಡ್ಡ್ ಕುಲ್ಲಿಯೆರ್
ಮೂಜೆಟ್ಟ್ ಪನ್ವಲಾ ಆಲ್
ಅವ್ವೆಲಾ ಸಿರಿಕೊಂಡೆ ಅಪ್ಪೇರೆ
ಅವ ಮೀಯೆರೆ ಪೋಪೆರ್
ಅವ ಕರಿಯಗ್ ಪೋನಗ
ತಿರ್ತ ದಲದೀಡ್ ಮಾನೆದಿ ಮೀಯಲ್
ಮಿತ್ತ ದಲದೀಡ್ ಉಲ್ಲಾಲ್ತಿ ಮೀಯರ್

ಅಕಾಸೊಡೊ ಬರ್ಪುಂಡು ಕಾಮ ದೇವರೆ ರತನಾ
ಈತ್‌ಲಾ ಚಂದ ಬಾಮದ ಮಗಲೆನ್
ಯಾನ್ ನಾಲ್ ಭೂಮಂಡಲೊಡೇ ತೂತುಜಿ ಪನ್ಪೆರ್
ಕಾಮ ದೇವರೆನ ಒಂಜಿ ಬೊಟ್ಟು ಬೆಗರ್ ಅಲ್ಪ
ನಡು ನೆತ್ತಿಗ್ ಬೂರುಂಡು
ಅವ್ವೇ ನೀರ್ ನಿಲೆತ್‌ಂಡ್

ಸಿರಿ ಕೊಂಡಪೆರೆ ಬಂಜಿಗ್ ನಾಲ್ ತಿಂಗೊಲು ಆನಗ
ಕಚ್ಚಿರ ಮಾಲ್ದಿನ ಬಂಜಿಗ್
ಮೂಜಿ ತಿಂಗೊಲು ಆವೊಂದು ಬಯಿದ್‌ಂಡ್ .....
ಕಚ್ಚಿರ ಮಾಲ್ದಿಗ್ ಐನ್ ತಿಂಗೊಲು ಆನಗ
ಸಿರಿಕೊಂಡಪೆರೆಗ್ ಆಜಿ ತಿಂಗೊಲು ಆವೊಂದು ಬಯಿದ್‌ಂಡ್

ಮಾಮನೂ ಮಾಮಿಯೂ ಕಚ್ಚಿರದ ಮಾಲ್ದಿಯೂ
ಕೊಡಂಗೆ ಬನ್ನಾರ ಕ್ಷೇತ್ರಕ್ಕೆ ಹೋಗುತ್ತಾರೆ
ಸಾಮಾನು ತೆಂಗಿನಕಾಯನ್ನು ಇಟ್ಟರು ಕೋಳಿ ಬಿಟ್ಟರು
ಮಗಳಲ್ಲಿ ನಿಂತಳು

ಅಲ್ಲಿ ಕೊಡಂಗೆ ಬನ್ನಾರರ ನೆಲೆಯಲ್ಲಿ
ಮಾಮನೂ ಮಾಮಿಯೂ ಕಚ್ಚಿರದ ಮನೆಗೆ ಬರುತ್ತಾರೆ
ಆ ದಿನ ಹೋಗಿತ್ತು
ಮರುದಿನ ಅವರು ಸಿರಿ ಕೊಂಡಪರು

ಬೀಡಿಗೆ ದೂರ ನೀರಿಗೆ ಸಮೀಪ ಕುಳಿತರು
ಕಚ್ಚಿರ ಮಾಲ್ದಿಯೂ ತನ್ನ ಮನೆಗೆ ದೂರವಾಗಿ ಕುಳಿತಳು
ಒಂದು ಕುಳಿತರು ಎರಡು ಕುಳಿತರು
ಮೂರರಲ್ಲಿ ಹೇಳುತ್ತಾಳೆ ಅವಳು
ಅದುವೆ ಸಿರಿಕೊಂಡೆ ತಾಯಿಯೇ
ಅವರು ಮೀಯಲು ಹೋಗುತ್ತಾರೆ
ಅವರು ಕರಿಯಗೆ ಹೋದಾಗ
ಕೆಳಗಿನ ನೀರಲ್ಲಿ ಪರಿಶಿಷ್ಟೆ ಮಿಂದಳು
ಮೇಲಿನ ನೀರಲ್ಲಿ ಒಡತಿ ಮಿಂದಳು

ಆಕಾಶದಲ್ಲಿ ಬರುತ್ತದೆ ಕಾಮ ದೇವರ ರಥವೇ
ಇಷ್ಟೊಂದು ಚಂದ ಮುದ್ದಾದ ಮಗಳನ್ನು
ನಾಲ್ಕು ಭೂಮಂಡಲದಲ್ಲಿ ಕಂಡಿಲ್ಲ ಹೇಳುತ್ತಾರೆ
ಕಾಮ ದೇವರ ಒಂದು ಬಿಂದು ಬೆವರು ಅಲ್ಲಿ
ನಡು ನೆತ್ತಿಗೆ ಬೀಳುತ್ತದೆ
ಅದೇ ನೀರು ನಿಂತಿತು(ಗರ್ಭ ಕಟ್ಟಿತು)

ಸಿರಿಕೊಂಡಪರೆ ಬಸಿರಿಗೆ ನಾಲ್ಕು ತಿಂಗಳಾದಾಗ
ಕಚ್ಚಿರ ಮಾಲ್ದಿಯ ಬಸಿರಿಗೆ
ಮೂರು ತಿಂಗಳು ಆಗುತ್ತಾ ಬಂತು
ಕಚ್ಚಿರ ಮಾಲ್ದಿಗೆ ಐದು ತಿಂಗಳು ಆದಾಗ
ಸಿರಿಕೊಂಡಪರಿಗೆ ಆರು ತಿಂಗಳು ಆಗುತ್ತಾ ಬಂದಿದೆ

ಜಾತಿಲಾ ತೆಲಿಪುವೆರ್ ಊರು ಮದಿಪುವೆರ್
ಕೊಡಂಗೆ ಬನ್ನಾರೆ ಮೂಲದಾಲ್ ಬಂಜಿನಾಲ್ ಇಂದ್
ಕೊಡಂಗೆ ಬನ್ನಾರೆನ್ ಕೂಟೊಗು ಲೆಪ್ಪೊಡು

ಅವೆಲಾ ಕೂಡ್ದೇರ್ ಕೋಟೆ ಪೇಂಟೆ ಕೂಡು ಕಟ್ಟ್ ಉಲ್ಲೆರ್
ಇಕ್ಕೇರಿದ ಕರ್ತ್ ಮಂಗ್ಲೂರ್ದ ಬುದ್ಯಂತೆ

'ಜಾತಿ ಕೆಟ್ಟಿ ಕೊಡಂಗೆ ಬನ್ನಾಯೆ ಬತ್ತೇ' ಪನ್ಪೇರ್
ಕೂಟದ ಕಲಕ್ ಬರಿಯೆರೆ ಬಲ್ಲಿ ಪನ್ನಗ
ತರೆ ಕಂತ ಪಾಡೊನು ಉಲ್ಲಾಯೆ
'ಯೇರ್ ಯಾ ಸಿರಿಕೊಂಡೆ ಈ ಕೇಂಡನಾ
ಅಪ್ಪೆ ತತ್ತಿ ಮಗಲೆನ್ ನಮ ಸಾಂಕಿಯಾ ಸಲಹಿಯಾನಾ
ಇನಿ ಬಲುವೊಂದೊಲ್ ಕುಟುಮೊಗೊಂಜಿ ಕುಜ್ಜೊನೊ ಮಲ್ತಾಲ್
ಜಾತಿಲಾ ತೆಲಿಪುಂಡು ಊರುಲಾ ಮದಿಪುಂಡು
ಈಲ ಪೊಣ್ಣು ಸಮನೇ ಅಲೆಡಾ ಬಾಮಿದೇ ಕೇನ್‌ಲಾ'

ಅವಲಾ ಸಿರಿಕೊಂಡೆ ಅಪ್ಪೇರ್ 'ಏರ್ ಮಗ ಮಾಲ್ದಿಯೇ
ನಿನ್ನ ಉಲ್ಲಾಯನ್ ಕೂಟದ ಕಲಾಡ್ದೇ ಜಪ್ಪಾಯೆರ್
ಕಂಡ್‌ದ್ ಬಂಜಿನಾಲ್ ಇಂದ್
ಜಾತಿ ತೆಲಿಪುಂಡು ಊರು ಮದಿಪುಂಡು
ಸತ್ಯ ಪನ್ ಮಗಾ' ಪನ್ನಾಗಾ ಪನ್ಪಾಲ್

'ಅಯ್ಯೋ ಉಲ್ಲಾಲ್ದಿ ಕೇಂಡರಾ ಯಾನ್‌ಲಾ
ಬಾನೊಗು ಬಂಜಿ ಕೊರ್‍ತಿಜಿ, ಬೂಮಿಗ್ ಬೆರಿ ಕೊರ್‍ತಿಜಿ
ಇಡೆ ತಡ್ಯಡ್ ಕುಲ್ಲುಜಿ, ಕೋಳ್ಯೂರ ಬಚ್ಚಿರೆ ತಿಂತ್‌ಜಿ
ಅಬ್ಬಗ ಪೂಲು ದರ್‍ತ್‌ದ್‌ಜಿ' ಸತ್ಯ ಪನ್ಪಾಲ್
ಪಂಚಲವಿನಾ ಕುಂಡಲಾ ಅಂಗಯಿಟ್ ದೀಪಲ್
'ತರೆ ಕಂತ ಪಾಡಿನ ಉಲ್ಲಾಯನ್ ಬವುಮಾನೊಡು
ಯಾನ್ ಕೂಟದ ಕಲಾಡ್ದ್ ಜಪುಡಾವೆಯೆ..ವೆಂ.....ಆ......

ನಾಲ್ ಕಯಿತ ಕೊಪ್ಪರಿಗೆಡ್ ಎಣ್ಣೆ ಕುಂದೆರೆ ದೀತೆರ್
ಎಣ್ಣೆಗ್ ಜತ್ತ್ ಮಿತ್ತ್ ಬತ್ತಲ್
ತರೆ ಕುಡ್ತು ಚಂಡಿ ನೂಲು ಪಾರಾನಗ

ಜಾತಿಯವರು ನಗುತ್ತಾರೆ ಊರವರು ಆಡುತ್ತಾರೆ
ಕೊಡಂಗೆ ಬನ್ನಾರರ ಜೀತದಾಳು ಬಸುರಿ ಎಂದು
ಕೊಡಂಗೆ ಬನ್ನಾರರನ್ನು ಕೂಟಕ್ಕೆ ಕರೆಯಬೇಕು

ಅವರೆಲ್ಲ ಕೂಡಿದರು ಕೋಟೆ ಪೇಟೆ ಕೂಡು ಕಟ್ಟ್ ಇದ್ದಾರೆ
ಇಕ್ಕೇರಿ ಕರ್ತ ಮಂಗಳೂರ ಮಂತ್ರಿ

ಜಾತಿ ಕೆಟ್ಟ ಕೊಡಂಗೆ ಬನ್ನಾಯೆ ಬಂದ ಎಂದರು
ಕೂಟದ ಕಲಕ್ಕೆ ಬರಬಾರದು ಎಂದಾಗ
ಕತ್ತು ತಗ್ಗಿಸಿಕೊಂಡು ಒಡೆಯ
'ಯಾರದು ಸಿರಿಕೊಂಡೆ ನೀನು ಕೇಳಿದೆಯಾ?
ತಾಯಿ ಇಲ್ಲದ ಮಗಳನ್ನು ನಾವು ಸಾಕಿದೆವು ಸಲಹಿದೆವು
ಇಂದು ಬೆಳೆದವಳು ಕುಟುಂಬಕ್ಕೊಂದು ಮೂದಲಿಕೆ ಮಾಡಿದಳು
ಜಾತಿಯವರು ನಗುತ್ತಾರೆ ಊರವರು ನುಡಿಯುತ್ತಾರೆ
ನೀನು ಹೆಣ್ಣು ಸರಿಯೇ ಅವಳಲ್ಲಿ ಮುದ್ದಿಸಿ ಕೇಳು'

ಆಗ ಸಿರಿಕೊಂಡೆ ಅಬ್ಬೆಯವರು 'ಯಾರು ಮಗಾ ಮಾಲ್ದಿಯೇ
ನಿನ್ನ ಒಡೆಯನನ್ನು ಕೂಟದ ಕಳದಿಂದ ಕೆಳಗೆ ಇಳಿಸಿದರು
ಕಳ್ಳ ಬಸಿರು ಎಂದು
ಜಾತಿ ನಗುತ್ತಿದೆ ಊರು ನುಡಿಯುತ್ತದೆ
ನಿಜ ಹೇಳು ಮಗಾ' ಎಂದಾಗ

'ಅಯ್ಯೋ ಒಡತಿ ಕೇಳಿದಿರಾ ನಾನು
ಬಾನಿಗೆ ಹೊಟ್ಟೆ ಕೊಟ್ಟಿಲ್ಲ ಭೂಮಿಗೆ ಬೆನ್ನು ಕೊಟ್ಟಿಲ್ಲ
ಸಂಧಿಯ ಹೊಸಿಲಲ್ಲಿ ಕುಳಿತಿಲ್ಲ ಕೊಳ್ಳೂರು ತಾಂಬೂಲ ತಿಂದಿಲ್ಲ
ಅಬ್ಬಗ ಅಡಿಕೆ ಒಡೆದಿಲ್ಲ' ಸತ್ಯ ಹೇಳುತ್ತಾಳೆ
ಪಂಚಲೋಹದ ಗುಂಡು ಅಂಗೈಯಲ್ಲಿ ಇಡುತ್ತಾಳೆ
ತಲೆ ತಗ್ಗಿಸಿದ ಒಡೆಯನನ್ನು ಬಲು ಗೌರವದಿಂದ
ನಾನು ಕೂಟದ ಕಲದಿಂದ ಇಳಿಸುವೆನು ಯೇ ....ಆ......

ನಾಲ್ಕು ಕೈ ಕೊಪ್ಪರಿಗೆಯಲ್ಲಿ ಎಣ್ಣೆ ಕುದಿಯಲು ಇಟ್ಟರು
ಎಣ್ಣೆಗೆ ಇಳಿದು ಮೇಲೆ ಬಂದಳು
ಕೂದಲು ಕೊಡವಿ ಒದ್ದೆ ಎಳೆ ಹಾರಿಸಿದಾಗ

ಇಕ್ಕೇರಿದ ಕರ್ತ್ನನ ಕಾರ್‌ಗ್ ಬೂರ್ದು
ತಾರಾಯಿ ದಾತ್ ಪೋಕ್ಕುಲ ಬಯಿದ್ಂಡ್

ಪಂಚೊಲಿ ಬಚ್ಚಿರೆಡ್ ಪಂಚಲವಿನಾ ಕುಂಡಲಾ ಪತ್ತಿಯಲ್
'ಓಡೆ ದಕ್ಕೊಡು'ಂದು ಪನ್ವೊಲು
ಮಾರಿ ಕಿದೆಕ್ ದಕ್ಕಿಯಲ್
ಸುಡು ಸೀಕರಿಯಾದ್ ಪೋತುಂಡು.
ಸತ್ಯಲಾ ಗೆಲ್ತ್ಂಡ್ ಮಗಲೆನಾ
ಬವುಮಾನೊಡು ಉಲ್ಲಾಯನ್ ಜಮುಡಿಯಾಲ್

ಭಾಗ ೩

ಪತ್ತ್ ತಿಂಗೊಲಾನಗ ಸಿರಿಕೊಂಡೆಪೆರ್
ಒಂಜಿ ಮಗನ್ ಪೆದ್ದ್ ತೆಲಿಯೆರ್
ಕಚ್ಚಿರ ಮಾಲ್ದಿಲಾ ಒಂಜಿ ಮಗನ್ ಪೆದ್ದ್ ತೆಲಿಯಾಲ್
ಸಿರಿಕೊಂಡೆಪೆರ್ ಪೆದ್ದಿ ಮಗಕ್
'ಬೂಮಿ ಪುತ್ರೆ ಮಾದೇಸೆ'ಂದ್ ಪುದರ್
ಕಚ್ಚಿರ ಮಾಲ್ದಿ ಪೆದ್ದಿ ಮಗಕ್ 'ಬಬ್ಬು'
ಇಂದೋ ಪುದರ್ ಪಾಡ್ದ್ ಲೆತ್ತೊಂದು ಉಲ್ಲೆರ್

ಎಲ್ಯಾಲಾ ಪೋಯೆ ಮಲ್ಲ ಆಯೆನೇ
ಕೊಡಂಗೆ ಬನ್ನಾರೆ ಜಾಲ್‌ಡ್ ಕೋರಿ ಕಕ್ಕೆ ದೇರಿಯರೆ
ಕೊರ್ಂದುದ ಪಗರಿ ಮಲ್ತೆರ್
ಕೊತ್ತಲ್ಗೆದ ಬಿರುಲಾ ಮಲ್ತ್ ಕೊರಿಯೆರ್
ಸಾವಿರ ಕೋರಿನ್ 'ಎಯ್ದ್' ಪಾಡಿಯೆ
ಅಪಗಾಂಡ ಪನ್ಪೆರ್ ಕೇನೊಡು

ಕೊಡಂಗೆ ಬನ್ನಾರೆ ತಾಂಕನೆದ ಮಗನ್
ಊರುಡು ದೀಂಡ ರಾಜ್ಯ ಪ್ರಜೆ ಒರಿಯಂದ್
ಕಂಚಿನಾ ಅಡ್ಕಡ್ ಮೆಂಚಿನಾ ಪದವುಗು
ಸತ್ಯದ ಬಲ್ಮೆ ಪನಿಯರೆ ಲೆಪ್ಪೊಡೊಡು.

ಉಲ್ಲಾಯಗೊಂಜಿ ಓಲೆ
ಮಾನ್ಯಗೊಂಜಿ ಓಲೆ ಬಯಿದ್ಂಡ್

ಇಕ್ಕೇರಿಯ ಕರ್ತನ ಕಾಲಿಗೆ ಬಿತ್ತು
ತೆಂಗಿನ ಕಾಯಿಯಷ್ಟು ಗುಳ್ಳೆ ಎಬ್ಬಿತು

ಪಂಚೊಲಿ ವೀಳ್ಯದೆಯಲ್ಲಿ ಪಂಚಲೋಹದ ಗುಂಡು ಹಿಡಿದಳು
'ಎಲ್ಲಿ ಬಿಸಾಕಲಿ?' ಕೇಳುತ್ತಾಳೆ.
ಮಾರಿ ಗದ್ದೆಗೆ ಬಿಸಾಕಿದಳು
ಸುಡು ಸೀಕರಿಯಾಗಿ ಹೋಯಿತು
ಸತ್ಯ ಗೆಂದಿತು ಮಗಳ
ಅಭಿಮಾನದಿಂದ ಒಡೆಯನನ್ನು ಇಳಿಸಿದಳು

ಭಾಗ ೩

ಹತ್ತು ತಿಂಗಳಾಗುವಾಗ ಸಿರಿ ಕೊಂಡವರು
ಒಂದು ಮಗನನ್ನು ಹೆತ್ತು ತೆರಳಿದರು
ಕಚ್ಚಿರ ಮಾಲ್ದಿಯೂ ಒಂದು ಮಗನನ್ನು ಹೆತ್ತು ತೆರಳಿದಳು
ಸಿರಿ ಕೊಂಡವರು ಹೆತ್ತ ಮಗನಿಗೆ
'ಭೂಮಿ ಪುತ್ರ ಮಾದೇಶ' ಎಂದು ಹೆಸರು
ಕಚ್ಚಿರದ ಮಗ ಹೆತ್ತ ಮಗನಿಗೆ 'ಬಬ್ಬು'
ಎಂದು ಹೆಸರಿಟ್ಟು ಕರೆದರು

ಎಳೆಯ ಹೋಯಿತು ಬೆಳವಣಿಗೆ ಆಯಿತು
ಕೊಡಂಗೆ ಬನ್ನಾರರ ಅಂಗಳದಲ್ಲಿ ಕೋಳಿ ಕಾಗೆ ಓಡಿಸಲು
ಪೊರಕೆ ಕಡ್ಡಿಯ ಬಾಣ ಮಾಡಿದರು
ಕೊತ್ತಲಿಗೆಯ ಬಿಲ್ಲು ಮಾಡಿ ಕೊಟ್ಟರು
ಸಾವಿತ ಕೋಳಿಯನ್ನು ಕೊಂದು ಹಾಕಿದ
ಆವಗಾದರೆ ಹೇಳುತ್ತಾರೆ ಕೇಳಿ

ಕೊಡಂಗೆ ಬನ್ನಾರೆ ಸಾಕಿದ ಮಗನಿಗೆ
ಊರಲ್ಲಿ ಇಟ್ಟರೆ ರಾಜ್ಯ ಪ್ರಜೆ ಉಳಿಯದು
ಕಂಚಿನಾ ಅಡ್ಕದ ಮೆಂಚಿನ ಪದವಿಗೆ
ಸತ್ಯದ ಜ್ಯೋತಿಷ ಹೇಳಲು ಕರೆಸಬೇಕು

ಒಡೆಯನಿಗೊಂದು ಓಲೆ
ಮಾನ್ಯಗೊಂದು ಓಲೆ ಬಂದಿದೆ

ಏರ್ ಮಗಾ .....ಕೇಂಡನಾ
ನಂಕ್ ಕಂಚಿನಡ್ಕಗ್ ಮ್ಗೆಂಚಿ ಪದವುಗು ಪೋವುಡುಗೇ

ಅರೆನಾ ಪನ್‌ಂಡಾ ಮಾಸಾಡಿ ಮೇಲಾಯಿ
ಪುದವರನದ ಉಲ್ಲಾಯೆ ತಂಬಿ ಕಟ್ಟೆ ಜೋತುರೋ
ಪೀಲಿದ ಬಡು ಪತ್ತಿಯೆರ್ ಉಲ್ಲಾಯೆ.
ಅಂಗೈ ಸರಪೊಲಿ ಮುಂಗೈ ಬಲೆ ದೀತೆರ್
ಆವಲಾ ಪದಿನಾಜಿ ಮುಟ್ಟಿಕಲ್ಲ್ ಜತ್ತೆರ್
ಕೊಡಂಗೆ ಬನ್ನಾರೆ ನೆಲೆಡ್ದ್

'ಅಯ್ಯೊಯ್ಯೋ ಉಲ್ಲಾಯ ಕೇಂಡರೋ
ಎನ್ನ ಕವುಡಿಗೆದ ಕಾಯಿ
ಮಾಮನ ಕೇಲ್‌ಡ್ ಒರಿಂಡ್'

'ಒರಿಂಡ್ ಒರಿಯಡ್ ಮಗಾ ನಮ ಪೋಯಿ ಪನ್ಪೆರ್'
ಕಂಚಿನಡ್ಕಡ್ ಕೂಡ್ದೆರ್ 'ಬೆರ್ಮೆ ಸಭೆ'

ಉಲ್ಲಾಯೆ ಏರ್ ಮಾನೆ ಏರ್ ಇಂದ್ ಗುರ್ತಲಾ ತಿಕ್ಕುಜಿ
ಉಲ್ಲಾಯಗ್ ಬಯಿದ್‌ಂಡ್ ಮೂಜಿಕಾರ್ ಮುಕ್ಕಲಿಗೆ
ಮಾನ್ಯಗ್ ಬಯಿದ್‌ಂಡ್ ನಾಲ್ ಕಾರ್ ಇಚ್ಚಾರ್

ಎಂಕ್ ದಾಯೆ ನಾಲ್ ಕಾರ ಇಚ್ಚಾರ್
ಪಜ್ಜಿ ಮಡಲ್ ಕೊರ್ಲೆಂದ್ ಜೋಗ್ಯಟ್ಟೆ ಪೊಯಿದ್ ಕುಲಿಯೆನಾ
ಕಂಚಿನಾ ತಡ್ಪೆಗ್ ಮುತ್ತಿನಾ ಪರೆಲ್ ಪಾಡ್ದ್ ಕೊರಿಯೆರ್

'ಎಂಕ್ ದಾಯೆಗ್ ಕಂಚಿನಾ ತಡ್ಪೆಗ್
ಮುತ್ತಿನಾ ಪರೆಲ್ ಪಾಡ್ದ್ ಕೊರಿಯರ್
ಊರ ತಡ್ಪೆಗ್ ಅರಿ ಪಾಡ್ದ್ ಕೊರ್ಲೆಯೇ'

ಅನಿತ್ತ್ ಗುಣಿತ್ತ್ ದೀಪೆನೇ
ಕೇಪುಲಜೆ ಮಲೆಟ್ ಕೆಮ್ಮಲೆ ಕರಿಯಡ್
ಜಯವುಲ್ಲ ಬಿರ್ಮೆರೆನ್' ಎನ್ನಿಯೇ
ಮಿತ್ತ ಸ್ವಾಮಿನ್ ತಿರ್ತ ಬೂಮಿನ್ ಎನ್ನಿಯೆನೇ

ಯಾರು ಮಗನೇ.. ಕೇಳಿದೆಯಾ
ನಮಗೆ ಕಂಚಿನಡ್ಕದ ಮೆಂಚಿ ಪದವಿಗೆ ಹೋಗಬೇಕಂತೆ

ಅವರನ್ನು ಹೇಳಿದರೆ ಮಾಸಾದಿಗರಲ್ಲಿ(ಬಂಟ)ಮೇಲಾದ
ಪುದ ವರ್ಣದ ಒಡೆಯ ತಂಬಿ ಕಟ್ಟಿದ ಧೋತರ
ಪೀಲಿಯ ಬೆತ್ತ ಹಿಡಿದರು
ಅಂಗೈ ಸರಪಳಿ ಮುಂಗೈ ಬಳೆ ಇಟ್ಟರು
ಆಗಲೇ ಹದಿನಾರು ಮೆಟ್ಟಿಲು ಇಳಿದರು
ಕೊಡಂಗೆ ಬನ್ನಾರರ ನೆಲೆಯಿಂದ

'ಅಯ್ಯೊಯ್ಯೋ ಒಡೆಯ ಕೇಳಿದರಾ
ಎನ್ನ ಕವಡೆಯ ಕಾಯಿ
ಮಾಮನ ಕೇರಿಯಲ್ಲಿ ಉಳಿಯಿತು

'ಉಳಿದರೆ ಉಳಿಯಲಿ ಮಗಾ ನಾವು ಹೋಗೋಣ
ಕಂಚಿನಡ್ಕದಲ್ಲಿ ಕೂಡಿದ್ದಾರೆ ದೊಡ್ಡ ಸಭೆ
ಒಡೆಯ ಯಾರು ಜೀತದವ ಯಾರು ಎಂದು ಗುರುತಾಗದು
ಒಡೆಯನಿಗೆ ಬಂದಿದೆ ಮೂರು ಕಾಲಿನ ಮುಕ್ಕಳಿಗೆ
ಜೀತದಾಳಿಗೆ ಬಂದಿದೆ ನಾಲ್ಕು ಕಾಲಿನ ಆರಾಮ ಕುರ್ಚಿ

ನನಗೇಕೆ ನಾಲ್ಕು ಕಾಲ ಆರಾಮ ಕುರ್ಚಿ
ಹಸಿ ಮಡಲು ಕೊಡಿ ಎಂದು ಸುಲಭಾಸನ ಹಾಕಿ ಕುಳಿತನೇ*
ಕಂಚಿಯ ಮೊರಕ್ಕೆ ಮುತ್ತಿನ ಹರಳು ಹಾಕಿ ನೀಡಿದರು

ನನಗೇಕೆ ಕಂಚಿಯ ಮೊರಕ್ಕೆ
ಮುತ್ತಿನ ಹರಳು ಹಾಕಿ ನೀಡಿದಿರಿ
ಊರ ಮೊರಕ್ಕೆ ಅಕ್ಕಿ ಹಾಕಿ ನೀಡಿರಿ

ಅನಿತ್ತ್ ಗುಣಿಸಿ ಇಟ್ಟನೇ
ಕೇಪುಲಜೆ ಮಲೆಯಲ್ಲಿ ಕೆಮ್ಮಡೆ ಕರಿಯದಲ್ಲಿ
ಜಯ ನೀಡುವ ಬಿರ್ಮರನ್ನು ನೆನೆದ
ಮೇಲಿನ ಸ್ವಾಮಿಯನ್ನು ಕೆಳಗಿನ ಭೂಮಿಯನ್ನು ನೆನೆದನು

ಕೋಡೆದಾ ರಾತ್ರಿಡ್ ವನಸ್ ಬಲ್ಮನೊಗು
ಅಡಿ ಅಡ್ಡೆ ತುಡಿ ಪುದರ್ಕ್ ಪನೊಡು ಪನ್ನನೋ

ಅಡಿ ಅಟ್ಲಡ್ ಕುಂಬ್ಲು ಮಾಸ ಪೆನ್ದನೇ
ಲತ್ತ್‌ಲಾ ಪದ್ಪೆ ಕುಂಬ್ಲೋ ಮಾಸ
ತುಡಿ ಅಡ್ಯದ ಪುದರ್ ಪನ್ನಗ
ಓಡು ಪಾಲೆ ರುಟ್ಟಿ ಇಂದ್ ಪನ್ಪನೇ

ಇಂಚಿತ್ತಿ ಮಲ್ಲ ಬಾರಗನ್ ಮಿತ್ತ್ ಉಂತೊಂದೋ
ಮಿತ್ತ್ ಮಿತ್ತ್ ಉಂತುದು ನೀರಳತೆ ಪಂಡ ಇಯಾವಂದ್
ಪದಿನಾಜಿ ಕಟ್ಟಣದ ಗೂವೆಲ್ಗ್ ಜಪ್ಪೊಡು
ತಿರ್ತ್‌ದ ನೀರಳತೆ ಪನೊಡುಂದು ಪನ್ಪೆರ್

ಪದಿನಾಜಿ ಕಟ್ಟಣದ ಗೂವೆಲ್ಗ್
ಪದಿನಾಜಿ ಕಾರ್‌ದ ಗೂವೆಲ್ ದೀತೆರ್
ಒಂಜಿ ಮುಟ್ಟುಗು ಕಾರ್ ದೀನಗ
ಕನ್ನ್‌ಡ್ ಕನನೀರ್ ದೆಪ್ಪುವೆನೇ

'ಇನಿಕ್ ಕೊಡಂಗೆ ಬನ್ನಾರೆ ನೆಲೆತ
ಪೇರ್ ನೀರ್ ಸಂದ್‌ಂಡ್ ಎಂಕ್
ಬನ್ನಗ ಇರ್ವೆರ್ ಬತ್ತ; ಪೋನಗ
ಒರಿಯಾದ್ ಪೋವರೆ ಆಂಡ್‌ಯೇ'

ಮೂಜಿನೇ ಮುಟ್ಟುಗು ಕಾರ್ ದೀನಗ ಪನ್ಪೇ
'ಎನ್ನ ಅಪ್ಪೆ ಕಚ್ಚಿರ ಮಾಲ್ದಿನ ಮಿರೆ ಪೇರ್ ಸಂದ್‌ಂಡ್''
ಸತ ಪಾತಾಲೊಗು ಎರಗ್‌ಯೇ
ಲೆಂಚಿ ಒಯಿತೆರ್ ಹಾಸಿಕಲ್ಲ್ ಮುಚ್ಚಿಯೆರ್

ಅವ್ವಗ ಸಮಯೊಡು ಇರ್ವೆರ್ ಬೈದೆರ್ಲೆಗ್‌ಲಾ
ಅಕಲೆ ಮೂಲದ ಮಾನೆರೆಗಲಾ ತೋಜುಂಡು
ತೋಜುನಾ ಬೋಂಟೆ ಒವ್ವೊರೋ

ನಿನ್ನೆಯ ರಾತ್ರಿ ಊಟ ಸಮ್ಮಾನಕ್ಕೆ
ಅಡಿ ಅಡ್ಯೆ ತುಡಿ ಹೆಸರು ಹೇಳಬೇಕು

ಅಡಿ ಅಟ್ಟಲದಲ್ಲಿ ಕುಂಬ್ಲು ಮಾಂಸ ತಿಳಿದನೆ
ಎಳೆಯ ಹರಿವೆ ಕುಂಬ್ಲು ಮಾಂಸ
ತುಡಿ ಅಡ್ಯ ಹೆಸರು ಹೇಳುವಾಗ
ಓಡು ಪಾಲೆರೊಟ್ಟಿ ಎಂದು ಹೇಳುತ್ತಾನೆ

ಇಂತಹ ದೊಡ್ಡ ಬಾರಗನನ್ನು ಮೇಲೆ ನಿಂತೇ
ಮೇಲೆ ಮೇಲೆ ನಿಂತು ನೀರಳತೆ ಮಾಡಿದರೆ ಸಾಲದು
ಹದಿನಾರು ಅಂಕಣದ ಬಾವಿಗೆ ಇಳಿಯಬೇಕು
ಕೆಳಗಿನ ನೀರಳತೆ ಹೇಳಬೇಕು ಎಂದರು

ಹದಿನಾರು ಅಂಕಣದ ಬಾವಿಯಲ್ಲಿ
ಹದಿನಾರು ಕಾಲಿನ ಬಾವಿ ಇಟ್ಟರು
ಒಂದು ಮೆಟ್ಟಲು ಕಾಲು ಇಡುವಾಗ
ಕಣ್ಣಲ್ಲಿ ಕಣ್ಣ ನೀರು ಬಿಡುವನೇ

'ಇಂದಿಗೆ ಕೊಡಂಗೆ ಬನ್ನಾರರ ನೆಲೆಯ
ಹಾಲು ನೀರು ಸಂದಿತು ನನಗೆ
ಬರುವಾಗ ಇಬ್ಬರು ಬಂದೆವು
ಒಬ್ಬರೇ ಹೋಗುವಂತಾಯಿತಲ್ಲ

ಮೂರನೇ ಮೆಟ್ಟಲು ಕಾಲು ಇಡುವಾಗ
'ನನ್ನ ಅಬ್ಬೆ ಕಚ್ಚಿರದ ಮಾಲ್ದಿಯ ಮೊಲೆ ಹಾಲು ಸಂದಿತು'
ಶತ ಪಾತಾಳಕ್ಕೆ ಬಿದ್ದ
ಏಣಿ ಎಳೆದರು ಹಾಸುಕಲ್ಲು ಮುಚ್ಚಿದರು

ಆ ಸಮಯದಲ್ಲಿ ಇಬ್ಬರು ಬೈದ್ಯರಿಗೂ
ಅವರ ಮೂಲದ ಜೀತದಾಳುಗಳಿಗೂ ಕಾಣುತ್ತದೆ
ಕಾಣುವ ಬೇಟೆ ಯಾವುದು

ಅಕಲೆ ತಂಗಡಿ ಪನ್ನಗ ಉಲ್ಲಲ್ ಕುಂಜಿನಿಗಾ
ಎಂಕ್ಲೆಗ್ ಅನ್ನೆರೆಗ್ ದೆತ್ತ್ ಪತ್ತಿಯಲ್

ಉಪ್ಪಿದ ಪಿಂಗಾರೋ ಅಲೆ ಉಲ್ಲಾಕ್ಲೆಗ್
ರಾಜನ ಬಜಿಲ್ ಪೂಬಾರೆದ ಪಂರ್ದ್‌ಗೇ
ಕಂಚಿನಾ ಅಡ್ಕಡ್ ಮೆಂಚಿ ಪದವುಡು ಬನ್ನಗಾ
ಪಕ್ಕಿ ಕೀಲ್ನಗ ಕೀಲಿ ಭೂಮಿದ ಅಡಿಡ್ದ್ ಸರ ಕೊರ್ಪೆನೇ

'ಅವು ಏರಪ್ಪ ಎನ್ನ ತರೆ ಮಿತ್ತ್ ಪೋಪಿನಿ
ಪೊಣ್ಣು ಪೊಂಜೋವು ಎನ್ನ ತಂಗಡಿ ಆವಡ್
ಎನನೊರ ಕೈ ದೆರ್ತ್ ಮಿತ್ತ್ ಪಾಡ್ ಲೇ' ಪನ್ಪೆ

'ಕೈ ದೆತ್ತ್ ಮಿತ್ತ್ ಪಾಂಡ ಎಂಕ್ ದಾನೆ'ಂದ ಕೇನುವಲ್
'ದುಂಬುದ ಬೂಲ್ಯ ದುಂಬುದ ಪಟ್ಟಂಗ ನಿಕ್ಕ್ ಕೊರ್ಪಾವೆ.'

ಪದಿನಾಜೆ ಮೊರಂಗೆದ ತಾಲೆ ಮಗ್ಗದ ಕುಂಟು ತುತುದಾಲ್
ಇರ್ವಾರ ತುತ್ತಿ ಕುಂಟುನು ಒರ್ವಾರ್ ತುತ್ತಿಯಾಲ್

ಕಯಿಟ್ಲಾ ಪತ್‌ದಾಲ್ ರಾವಣ ಗೆಜ್ಜೆಕತ್ತಿ
ಹಾಸಿ ಕಲ್ಲ್‌ಗ್ ಗೀರ್ವಲ್
ಪದಿನಾಜಿ ಪೀಸಾದ್ ರಟ್ಟುಂಡು

'ಭೂಮಿ ತೂವೊಂದು ಬತ್ತರಾ ಬಬ್ಬು
ಅಕಾಸ ತೋವೊಂದು ಬತ್ತರಾ' ಪನ್ಪೊಲು
ಬಬ್ಬುನ ಕೈ ದೆತ್ತ್ ಮಿತ್ತ್ ಪಾಡಿಯಾಲ್

'ಅವೇ ಮುಟ್ಟಿನಾ ನನ ಮುಟ್ಟರೇ ಬಲ್ಲಿ
ಕೇಪುಲಜೆ ಮಲೆಟ್ ಕೆಮ್ಮಲೆ ಕರಿಯಡ್
ಜಯವುಲ್ಲ ಬಿರ್ಮೆರೆ ರಾಜ್ಯ ಉಂಡೋ'

ಅಪಗಾನಾ ಪನ್ಪೆ 'ನಿನ್ನ ಬರಿ ದಾಯಿದಾ'
'ಎನ್ನಾಂಡ ಮುಚ್ಚಿರ್‌ದನ್ನಾಲ್'
'ಎನ್ನಾಂಡ ಪರ್ಕೆದನ್ನಾಯೆ' ಪಂಡೇ ಆಯೆ

⌘⌘⌘

ಅವರ ತಂಗಿ ಎಂದರೆ ಇದ್ದಾಲೆ ಕುಂಜಿನಿಗಾ
ನಮ್ಮ ಅಣ್ಣನವರನ್ನು ಎತ್ತಿ ಹಿಡಿದಳು

ಉಪ್ಪಿನ ಪಿಂಗಾರ ಅವಳ ಒಡೆಯನಿಗೆ
ರಾಜನ ಅವಲಕ್ಕಿ ಹೂಬಾಳೆಯ ಹಣ್ಣಂತೆ
ಕಂಚಿನಾ ಅಡ್ಕದ ಮೆಂಚಿ ಪದವಿನಲ್ಲಿ ಬರುವಾಗ
ಪಕ್ಷಿ ಚೀರುವಾಗ ಚೀರಿ ಭೂಮಿಯ ಅಡಿಯಲ್ಲಿ ಸ್ವರ ಹೊರಡಿಸುತ್ತಾನೆ

'ಅದು ಯಾರಬ್ಬೆ ನನ್ನ ತಲೆಯ ಮೇಲೆ ನಡೆದು ಹೋಗುವುದು
ಹೆಣ್ಣು ಹೆಂಗುಸು ನನ್ನ ತಂಗಿ ಆಗಲಿ
ನನ್ನನ್ನೊಮ್ಮೆ ಕೈಎತ್ತಿ ಮೇಲೆ ಹಾಕಿ ಹೇಳುತ್ತಾನೆ

'ಕೈ ಎತ್ತಿ ಮೇಲೆ ಹಾಕಿದರೆ ನನಗೆ ಏನು' ಎಂದು ಕೇಳುತ್ತಾಳೆ
ಮೊದಲ ವೀಳ್ಯ ಮೊದಲ ಪಟ್ಟಂಗ ನಿನಗೆ ಕೊಡಿಸುತ್ತೇನೆ

ಹದಿನಾರು ಮೋಳದ ದೇವಾಂಗದ ಮಗ್ಗದ ಬಟ್ಟೆ ಉಟ್ಟಿದ್ದಾಳೆ
ಎರಡು ಸುತ್ತು ಉಟ್ಟ ಬಟ್ಟೆಯನ್ನು ಒಂದು ಸುತ್ತು ಉಟ್ಟಳು


ಕೈಯಲ್ಲಿ ಹಿಡಿದು ರಾವಣ ಗೆಜ್ಜೆ ಕತ್ತಿ
ಹಾಸುಕಲ್ಲಿಗೆ ಗೀರಿದಳು
ಹದಿನಾರು ಛೀಸಾಗಿ ಹಾರುತ್ತದೆ

'ಭೂಮಿ ನೋಡುತ್ತ ಬಂದಿರೇ ಬಬ್ಬು
ಆಕಾಶ ನೋಡುತ್ತಾ ಬಂದಿರೇ' ಹೇಳುತ್ತಾಳೆ
ಬಬ್ಬುನ ಕೈ ಹಿಡಿದು ಮೇಲೆ ಹಾಕಿದಳು

'ಅದುವೇ ಮುಟ್ಟಿದ್ದು ಇನ್ನು ಮುಟ್ಟಲು ಬಾರದು
ಕೇಪುಲಜೆ ಮಲೆಯಲ್ಲಿ ಕೆಮ್ಮಲೆ ಕರಿಯದಲ್ಲಿ
ಜಯವುಳ್ಳ ಬೆರ್ಮೆರ್ ರಾಜ್ಯ ಉಂಟೋ'

ಆವಗಾದರೆ ಹೇಳುತ್ತಾನೆ ನಿನ್ನ ಬಳಿ/ವಂಶ ಯಾವುದು?'
ನನ್ನದಾದರೆ ಮುಚ್ಚಿರದ ಬನ್ನಾಲ್
ನನ್ನದಾದರೆ ಪರ್ಕೆದ ಬನ್ನಾಯ' ಹೇಳಿದ ಅವನು

⌘⌘⌘



ಕಂಬುಲ ಜೋಡಿ ಪೂಕರೆ (ಬಂಡಿ ಪೂಕರೆ)
ಒಂದು ಗಂಡು, ಒಂದು ಹೆಣ್ಣು
ಕಡಂದಲೆ, ಪರಾಡಿ ಕಾರ್ಕಳ

೨೦

ಕಡಂದಲೆ ಪರಾಡಿ ಕಂಬುಲ ಮದಿಪು

ಕಡಂದಲೆ ಪರಾಡಿ ಕಾರ್ಕಳ ತಾಲೂಕಿನಲ್ಲಿದೆ. ಪರ ಅಡಿ ಎಂದರೆ ಹಳೆಯ ಅಡಿ. ಹಳೆ ಅರಮನೆಯ ಅಡಿ. ಜಾರ್ಗೆ ಕಟ್ಟೆಯಿಂದ ಪುತ್ತಿಗೆ ಮೂಡಬಿದ್ರೆ ಮಾರ್ಗದಲ್ಲಿ ಹೋದಾಗ ಕಡಂದಲೆ ಪರಾಡಿ ಸಿಗುತ್ತದೆ.

ಕಡಂದಲೆ ಪರಾಡಿಯ ಕುಟುಂಬ ಪುತ್ತೆ ಗುತ್ತಿನ ಮೂಲದವರು. ಪಾಡ್ದನದಲ್ಲಿ ಬುನ್ನಾಣ ವಂಶದ ನಿರೂಪಣೆ ಇದೆ. ಈಗಿರುವ ಬುನ್ನಾಣ ವಂಶದವರು ಪುತ್ತಿಗೆ ಗುತ್ತಿನ ಶಾಖೆ. ಆ ಕಾಲದಲ್ಲಿ ಉಲ್ಲಾಳ ಗುತ್ತಿನಲ್ಲೂ 'ಬುನ್ನಾಣ ವಂಶ'ದವರು ಇದ್ದ ಬಗ್ಗೆ ಶಾಸನಾಧಾರ ಇದೆ.

ಕಡಂದಲೆಯಲ್ಲಿ ಮಂಜಲ್ ಜುಮಾದಿ ಪ್ರಧಾನ ದೈವ. ಆದರೆ ಕಂಬುಲ ಆದ ಕೂಡಲೇ ನಡೆಯುವುದು ಉಲ್ಲಾಯ ಕೋಲ. ಉಲ್ಲಾಯ 'ನಾಗಮುಡಿ' ಧರಿಸುತ್ತಾನೆ.

ಕಂಬುಲದ ಆರಂಭ

ಹಿಂದೆ ಕಂಬುಲದ ಮರುದಿನ ರಾತ್ರಿ ಕಂಬುಲ ಪ್ರಯುಕ್ತ ಉಲ್ಲಾಯ ಕೋಲ ಇರುತ್ತಿತ್ತು. ಇತ್ತೀಚಿನ ಬದಲಾವಣೆಯಲ್ಲಿ ಹಗಲು ಉಲ್ಲಾಯ ಕೋಲ ಮಾಡಿ ಸೇರಿದ ಭಕ್ತರಿಗೆ ಭೂರಿ ಭೋಜನ ನೀಡುತ್ತಾರೆ. ಮಂಜಲ್ ಜುಮಾದಿಯ ವಿಜೃಂಭಣೆಯ ಕೋಲ ರಾತ್ರಿ ನಡೆಯುತ್ತದೆ.

ಕಂಬುಲದ ದಿನ ಬೆಳಿಗ್ಗೆ ಪರಾಡಿಯ ಮನೆಯ ಒಳಗೆ ಇರುವ ಚಾವಡಿ ದೈವ ಮಂಜಲ್ ಜುಮಾದಿ ಮತ್ತು ಉಲ್ಲಾಯನ ಭಂಡಾರ(ದೈವದ ಸಾಮಗ್ರಿ) ಪಲ್ಲಕ್ಕಿಯಲ್ಲಿ ಬ್ಯಾಂಡ್ ಓಲಗ, ಬಿರುದು ಬಾವಲಿ, ಡೋಲು ವಾದನದೊಂದಿಗೆ ಇಳಿದು ಬರುತ್ತದೆ. ಬಂಟ ಜಾತಿಯ 'ಮುಕ್ಕಾಲ್ದಿ' ದರ್ಶನ ಪಾತ್ರಿಯಾಗುತ್ತಾನೆ.

ನಾಗ ಮುಡಿಹೊತ್ತ 'ಬಂಟ'ಹಾಗೂ 'ಮೈಸಂದಾಯನ'(ಕೋಣನ ಪಾತ್ರ) ಜೋಗಿ ಪುರುಷನ ನೃತ್ಯದೊಂದಿಗೆ ಕೋಲ ನಡೆಯುವ ಜಾಗಕ್ಕೆ ಎಲ್ಲರೂ ಬರುತ್ತಾರೆ. 'ಭಂಡಾರ' ಕೇತ್ರದ ಗುಡಿಯ ಒಳಗೆ ಹೋಗುತ್ತದೆ. 'ಬಂಟ' ಮತ್ತು ಮೈಸಂದಾಯ ಪಾತ್ರಿಗಳು ಸುಮಾರು ಹೊತ್ತು ನೃತ್ಯ ಮಾಡುತ್ತಾರೆ.

ತುಳು ಮೂಲ

ಐತು ನಲ್ಕೆ ೫/೩/೨೦೦೭

"ವಿಜಯನಗರ ಸಾಮ್ರಾಜ್ಯದ ಪುತ್ತೆ ಗುತ್ತುದು ಬನ್ನ ಬುನ್ನಾಲೆ ಅದೆಕ್ಕಿ
ಬನ್ನ ಬನ್ನಾಲೆ ಅದೆಕ್ಕಿ
ಬನ್ನ ಬನ್ನಾಲೆ ಅದೆಕ್ಕಿಡ್ದ್ ಮಮ್ಮಾಯಿ
ಹನುಮಂತ ದೇವೆರೆನ್ ಬೆದ್ರಡ್ ನಂಬಿಯೆರ್
ವಿಜಯನಗರದ ಅರಸು ಬಂಟನ್ ಪರಾಡಿಡ್ ನಂಬಿಯೆರ್
ಸ್ವಾಮಿ ಚಿತ್ತ ಆ ಮಮ್ಮಾಯಿ ದೇವೆರೆ ಚಿತ್ತ ತೆಲಿಂಡ್
ಹನುಮಂತ ದೇವೆರೆ ಚಿತ್ತ ತೆಲಿಂಡ್
ಉಲ್ಲಾಯ ಉಲ್ಲಾಲ್ತಿಯ ಚಿತ್ತ ತೆಲಿಂಡ್
ಸೋಮನಾಥ ದೇವೆರೆ ಚಿತ್ತ ತೆಲಿಂಡ್
ಉಲ್ಲಾಯ ಉಲ್ಲಾಲ್ತಿಯ ಚಿತ್ತ ತೆಲಿದ್ ಕಡಂದಲೆ ಇಂದ್ರಾಳೆ
ಕಲದಲ್ಲಿ ಸುಬ್ರಾಯ ಚಿತ್ತ ತೆಲಿಂಡ್
ಉಮೆ ಗುಂಡಿ ಬೆರ್ಮೆರೆ ಚಿತ್ತ ತೆಲಿಂಡ್
ಕೂಡಿ ಕೂಟ ಕೇಂಡಿ ಏಲ್ಯ ದೀ ದಿನ
ತಾನೊಡು ಜಪುಡಾಯಿ ಬಾಲ್ ಭಂಡಾರ
ಕಟ್ಟದ ನೀರ್ ಕುದುರೆ ಆದ ಬಲಿಪಡ್
ಜತ್ತಿ ಎರು-ಜನ ಕೋರಿ ಕಂಬುಲ
ಪೆರ್ನೆ ಕಲಶ ಆಡ್ ಏರಿ ಸತ್ಯ
ತುಂಬುದಿ ಪಲ್ಲಕ್ಕಿಡ್ ಶಕ್ತಿದ ಜೀಟಿಗೆಡ್ ಒರಿಪಾವೆ.
ಒಂಭತ್ತು ಮಾಗಣೆ ಕೈತ ಖಡ್ಗ ಕಡಂದಲೆ ಇಂದ್ರಾಲೆ ತಲೊಟು....".

ಕನ್ನಡ ಅನುವಾದ

"ವಿಜಯನಗರ ಸಾಮ್ರಾಜ್ಯದ ಪುತ್ತಿಗೆ ಗುತ್ತಿನ
ಬನ್ನ ಬುನ್ನಾಲೆ ಸಂತಾನ
ಬನ್ನ ಬನ್ನಾಲೆ ಸಂತಾನದಿಂದ ಮಮ್ಮಾಯಿ(ಮಾರಿ)
ಹನುಮಂತ ದೇವರನ್ನು ಬಿದಿರೆಯಲ್ಲಿ ನಂಬಿದರು.
ವಿಜಯನಗರದ ಅರಸು ಬಂಟನನ್ನು ಪರಾಡಿಯಲ್ಲಿ ನಂಬಿದರು
ಸ್ವಾಮಿ ಚಿತ್ತ, ಆ ಮಮ್ಮಾಯಿ ದೇವರ ಚಿತ್ತ ತಿಳಿಯಾಯಿತು
ಹನುಮಂತ ದೇವರ ಚಿತ್ತ ತಿಳಿಯಾಯಿತು
ಉಲ್ಲಾಯ ಉಲ್ಲಾಳ್ತಿಯ ಚಿತ್ತ ತಿಳಿಯಾಯಿತು
ಸೋಮನಾಥ ದೇವರ ಚಿತ್ತ ತಿಳಿಯಾಯಿತು
ಉಲ್ಲಾಯ ಉಲ್ಲಾಳ್ತಿಯ ಚಿತ್ತ ತಿಳಿಯಾಗಿ ಕಡಂದಲೆ ಇಂದರ್ಾಲೆ
ಕ್ಷೇತ್ರದ ಸುಬ್ರಾಯ ಚಿತ್ತ ತಿಳಿಯಾಯಿತು
ಉಮೆ ಗುಂಡಿ ಬೆರ್ಮೆರೆ ಚಿತ್ತ ತಿಳಿಯಾಯಿತು
ಕೂಡಿದ ಕೂಟ ಕೇಳಿದ ವೇಳೆ ಇಟ್ಟ ದಿನ
ಕ್ಷೇತ್ರದಲ್ಲಿ ಇಳಿಸಿದ ಬಾಳ್ ಭಂಡಾರ
ಕಟ್ಟದ ನೀರು, ಕುದುರೆ ಆಗಿ ಓಡಲಿ
ಇಳಿಸಿದ ಕೋಣ–ಜನ ಕೋರಿದ ಕಂಬುಲ
ದೊಡ್ಡ ಕಲಶ ಆಗಲಿ. ಏರಿದ ಶಕ್ತಿ(ದೈವ)
ಹೊತ್ತ ಪಲ್ಲಕ್ಕಿಯಲ್ಲಿ ಶಕ್ತಿಯ ದೀವಟಿಗೆ ಉಳಿಸುತ್ತೇನೆ.
ಒಂಭತ್ತು ಮಾಗಣೆ, ಕೈಯ ಖಡ್ಗ, ಕಡಂದಲೆ ಇಂದರ್ಲೆ ಕ್ಷೇತ್ರದಲ್ಲಿ ...."


ಸಂಜೆ ಕಂಬುಲ ಗದ್ದೆಯ ಓಟ ನಡೆಯುತ್ತದೆ. ಎಲ್ಲಿ ಎರಡು ಕಂಬುಲ ಗದ್ದೆ ಇದೆ. ರಾತ್ರಿಯಲ್ಲಿ ಒಂದು ಗದ್ದೆಯಲ್ಲಿ ಜೋಡಿ ಪೂಕರೆ ಹಾಕುತ್ತಾರೆ. ಒಂದು ಹೆಣ್ಣು ಪೂಕರೆ ಮತ್ತೊಂದು ಗಂಡು ಪೂಕರೆ. ಗಂಡು ಪೂಕರೆಗೆ ಬರೇ ಕಂಬ ತುದಿಯಲ್ಲಿ ಕಲಶ ಇದೆ. ಅದಕ್ಕೆ ಬಿಳಿಯ ಧ್ವಜ (ಬಟ್ಟೆ) ಸಿಕ್ಕಿಸುತ್ತಾರೆ. ಹೆಣ್ಣು ಪೂಕರೆಗೆ ಅಂಕಣಗಳಲ್ಲಿ ಅಲಂಕಾರಗಳಿವೆ. ಇಲ್ಲಿ ಒಂಬತ್ತು ನೆಲೆಯ ಪೂಕರೆ.

ಗಂಡು ಪೂಕರೆ ೧೦ ಕೋಲು(ಒಂದು ಕೋಲು ಅಂದರೆ ೨ ಅಡಿ ೨ ಇಂಚು)ಉದ್ದ ಇದೆ. ಹೆಣ್ಣು ಪೂಕರೆ ೧೧ ಕೋಲು ಉದ್ದ.

ಇಲ್ಲಿ ನಾಲ್ಕು ಚಕ್ರಗಳ ಬಂಡಿಯ ಮಧ್ಯದಲ್ಲಿ ೧೧ ಕೋಲು ಉದ್ದದ ಪೂಕರೆ ಕಂಬವನ್ನು ನೆಡುತ್ತಾರೆ. ಧ್ವಾತ್ರಿಯ ಹೊತ್ತಲ್ಲಿ ಕೊಡಿ ಮರ(ಗರಡ ಕಂಬ)ಏರಿಸಿದ ರೀತಿಯಲ್ಲಿ ಬಂಡಿಗೆ ಪೂಕರೆ ಕಂಬ ಏರಿಸುತ್ತಾರೆ. ಗಂಡು ಪೂಕರೆ. ಅಲಂಕಾರ ರಹಿತ ಅಡಕೆಯ ಮರದ ಕಂಬ. ತುದಿಯಲ್ಲಿ ಕಲಶ ಇದೆ. ಹೆಣ್ಣು ಪೂಕರೆಗೆ ಒಂದರ ಮೇಲೊಂದರಂತೆ ಪೋಣಿಸಿದ ತ್ರಿಕೋನಾಕೃತಿಯ ಬಿದಿರಿನ ಅಂಕಣ ಮತ್ತು ಅಲಂಕಾರ ಇದೆ. ಈ ಸಂದರ್ಭದಲ್ಲಿ ವಾದ್ಯ, ಬ್ಯಾಂಡು, ನಾದದೊಂದಿಗೆ ಕೊರಗರು ಮತ್ತು ಇತರರು ನರ್ತಿಸುತ್ತಾರೆ. ಜಾನಪದ ಹಬ್ಬದ ಸಂಭ್ರಮ ಸಡಗರ ಇಲ್ಲಿ ಕಾಣುತ್ತದೆ.

ಜೋಡು ಪೂಕರೆ ಬಂಡಿಯನ್ನು ಎಳೆಯುತ್ತಾ ಸಕಲ ವಾದ್ಯ ಪರಿಕರಗಳ ನಾದದೊಂದಿಗೆ ಎಲ್ಲರೂ ಕಂಬುಲ ಗದ್ದೆಯತ್ತ ಸಾಗುತ್ತಾರೆ. ಆಗ ನಾಗ ಮುಡಿ ಹೊತ್ತ(ನಾಗಬರ್ಮೆರ್ ಪಾತ್ರಿ)ಜೋಡಿ ಬಂಟ, ಮೈಸಂದಾಯ ನರ್ತಿಸುತ್ತಾರೆ. ಗದ್ದೆಯ ಕೆಸರಲ್ಲಿ ಎಳೆಯುತ್ತಾ ಎದುರು ಬದುವಿನ ಮೇಲೆ ಬಂಡಿಯನ್ನು ಹತ್ತಿಸಿ ಅಲ್ಲಿ ಕಟ್ಟೆಯ ಮೇಲೆ ಬಂಡಿ ನಿಲ್ಲಿಸುತ್ತಾರೆ. ಅಲ್ಲಿಗೆ ಸಾಗುವ ಯಜಮಾನ ಪೂಕರೆ ಕಂಬದ ಬುಡಕ್ಕೆ ಹಾಲು ಸುರಿಯುತ್ತಾರೆ(ಹಾಲು ಸುರಿಯುವುದು ಭೂಮಿಗೆ, ಸೃಷ್ಟಿಗೆ, ಸಿರಿಗೆ, ನಾಗನಿಗೆ).

ಪೂಕರೆ ಕಂಬ ಹಾಕಿದ ಮೇಲೆ ನಾಗ ಮುಡಿ ಹೊತ್ತ ನಾಗ ಬಿರ್ಮೆರ(ಬಂಟ) ಪಾತ್ರಿ, ನಂದಿಗೋನ, ಜೋಗಿ ಪುರುಷ ಪರಾಡಿಯ ಮನೆಗೆ ಬರುತ್ತಾರೆ. ಬಂಟ ಪಾತ್ರಿ(ದಲಿತ) ಆ ದಿನ ಮಾತ್ರ ಪರಾಡಿಯ ಮನೆಯ ಒಳ ಜಗಲಿಗೆ ಬರುತ್ತಾನೆ. ಮನೆಯ ಮಹಿಳೆಗೆ ಪಿಂಗಾರದ ಬೂಲ್ಯ ನೀಡಿ ಮನೆಗೆ ಸಮೃದ್ಧಿಯನ್ನು ತಂದು ಕೊಡುವುದಾಗಿ ಬಂಟ(ನಾಗ ಬಿರ್ಮೆ) ನಂಬುಗೆ(ಅಭಯ) ನೀಡುತ್ತಾನೆ. ಆಗ 'ಬಂಟಗ್ ಬಲಸುನ'(ಸಹಾಯಕ ದೈವಕ್ಕೆ ಆಹಾರ ನೀಡುವುದು) ಪದ್ಧತಿ ಇದೆ. ಆ ದಿನ ಮಾಡಿದ ಭೂರಿ ಭೋಜನವನ್ನು ದೊಡ್ಡ ಮೊರದಲ್ಲಿ ತುಂಬಾ ಬಡಿಸಿ ನಂಬುಗೆ ನೀಡುವ ಬಂಟ ಪಾತ್ರಿಯ ಮುಂದೆ ಇಡುತ್ತಾರೆ.



ಕಂಬುಲದ ಕೋರಿಯಲ್ಲಿ ಹೆಣ್ಣು ಪೂಕರೆ ಕಂಬ
ಕುಂಬ್ಳಾಜೆ ಮನೆ, ಕಾಸರಗೋಡು

తుళు మూల

స్వామి దేవెరె చిత్త తెలిండ్ పోంజోవే
పుత్తెద దైవద చిత్త తెలిండ్ పోంజోవే
ఉల్లాయ ఉల్లాల్తిన చిత్త తెలిండ్ పోంజోవే
సోమనాథ దేవరె చిత్త తెలిండ్ పోంజోవే
హనుమంత దేవరె చిత్త తెలిండ్ పోంజోవే
మమ్మాయి దేవరె చిత్త తెలిండ్ పోంజోవే
పుత్తె మూరు సావిర ఆళ పట్ట బుడియ పోంజోవే
కడందలె పరాడిగ్ బత్తె పోంజోవె
దేవర కంబులొడు ఉంతియ పోంజోవె
దేవర పరాడిగ్ బత్య పోంజోవె
సుబ్రాయ దేవెరె చిత్త తెలిండ్ పోంజోవె
ఉమెగుండి దేవెరె చిత్త తెలిండ్ పోంజోవె
గుంటద కంజి తొట్టిల్ద బాలె
కంటెల్ద్ కరియణి మూంకుద ముత్తేసన
ఒర్తు కొర్పె పోంజోవె
కాలోడ్డు కాలొగు నికలె కుటుంబ సంసారొను
ఒర్తు పత్తువె పోంజోవె

ಕನ್ನಡ ಅನುವಾದ

"ಸ್ವಾಮಿ ದೇವರ ಚಿತ್ತ ತಿಳಿಯಾಯಿತು ಹೆಂಗುಸರೇ,
ಪುತ್ತೆ ಮನೆಯ ದೈವದ ಚಿತ್ತ ತಿಳಿಯಾಯಿತು ಹೆಂಗುಸರೇ,
ಉಲ್ಲಾಯ ಉಲ್ಲಾಲ್ತಿಯ ಚಿತ್ತ ತಿಳಿಯಾಯಿತು ಹೆಂಗುಸರೇ,
ಸೋಮನಾಥ ದೇವರ ಚಿತ್ತ ತಿಳಿಯಾಯಿತು ಹೆಂಗುಸರೇ
ಹನುಮಂತ ದೇವರ ಚಿತ್ತ ತಿಳಿಯಾಯಿತು ಹೆಂಗುಸರೇ,
ಮಮ್ಮಾಯಿ ದೇವರ ಚಿತ್ತ ತಿಳಿಯಾಯಿತು ಹೆಂಗುಸರೇ,
ಪುತ್ತೆ ಮೂರು ಸಾವಿರ ಆಳ ಪಟ್ಟ ಬಿಟ್ಟೆ ಹೆಂಗುಸರೇ
ಕಡಂದಲೆ ಪರಾಡಿಗೆ ಬಂದೆ ಹೆಂಗುಸರೇ,
ದೇವರ ಕಂಬುಲದಲ್ಲಿ ನಿಂತೆ ಹೆಂಗುಸರೇ,
ದೇವರ ಪರಾಡಿಗೆ ಬಂದೆ ಹೆಂಗುಸರೇ,
ಸುಬ್ರಾಯ ದೇವರ ಚಿತ್ತ ತಿಳಿಯಾಗಿಸಿದೆ ಹೆಂಗುಸರೇ,
ಉಮೆಗುಂಡಿ ದೇವರ ಚಿತ್ತ ತಿಳಿಯಾಗಿಸಿದೆ ಹೆಂಗುಸರೇ,
ಗೂಟದ ಕರು, ತೊಟ್ಟಿಲ ಮಗುವನ್ನು
ಕತ್ತಿನ ಕರಿಮಣಿಯನ್ನು ಮೂಗಿನ ಮುತ್ತೈದೆತನವನ್ನು
ಉಳಿಸಿ ಹಿಡಿದೆ ಹೆಂಗುಸೇ, ವರ್ಷದಿಂದ ವರ್ಷಕ್ಕೆ
ಕಾಲದಿಂದ ಕಾಲಕ್ಕೆ ನಿಮ್ಮ ಕುಟುಂಬ,
ಸಂಸಾರವನ್ನು ಉಳಿಸಿ ಹಿಡಿಯುವೆ ಹೆಂಗುಸರೇ."

ಹೀಗೆ ನಂಬುಗೆ ನೀಡುವುದನ್ನು ಪಟ್ಟಾವು(ಪಟ್ಟ)ಕರೆಯುವುದು ಎಂದು ಹೇಳುತ್ತಾರೆ.

ನಂಬುಗೆ(ಅಭಯ) ನೀಡಿದ ಮೇಲೆ ನಾಗಬಿರ್ಮೆರ-ಬಂಟ ಪಾತ್ರಿ ಮರಳಿ ನಾಗ ಬಿರ್ಮೆರ ಕ್ಷೇತ್ರಕ್ಕೆ ಹೋಗಿ ಸಿರಿ ಗರಿಯನ್ನು ಬಿಚ್ಚಿ ಸ್ಥಾನದಲ್ಲಿ ಹಾಕುತ್ತಾನೆ.

ಕಂಬುಲದ ನಾಗ ಬಿರ್ಮೆರ್ ನೀಡುವ ನಂಬುಗೆಯಲ್ಲಿ ಕೆಲವು ಐತಿಹಾಸಿಕ ಮಾಹಿತಿಗಳಿವೆ.

ಈ ಪಟ್ಟಾವಿನಲ್ಲಿ ಕಡಂದಲೆ ಪರಾಡಿಯವರನ್ನು ಪುತ್ತೆಯ ಸಂತಾನ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಪುತ್ತಿಗೆಯ ಚವುಟರಾದ ೨ನೆಯ ಭೋಜರಾಯನು(ಕ್ರಿ.ಶ. ೧೪೭೦-೧೫೧೦)ವಿಜಯನಗರಕ್ಕೆ ಹೋದ ಐತಿಹಾಸಿಕ ದಾಖಲೆಯನ್ನು ಐಗಳು ನೀಡುತ್ತಾರೆ(ಐಗಳು: ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ೧೯೨೩).

ವಿಜಯನಗರದಿಂದ ಮರಳುವಾಗ ಕೃಷ್ಣದೇವರಾಯ ನೀಡಿದ ಸುಬ್ರಾಯ ದೇವರ ಪ್ರತಿಮೆಯನ್ನು ಪರಾಡಿಯ ಬಳಿ ಸ್ಥಾಪಿಸಿ ದೇವಸ್ಥಾನವನ್ನು ಕಟ್ಟಿಸುತ್ತಾರೆ. ಜೊತೆಗೆ

ಅನೇಕ ಬಿರು ಬಾವಲಿ, ರಾಜ ಪರಿವಾರದ ವಸ್ತು ಕುದುರೆ, ನರ್ತಕಿಯರನ್ನೂ ಕಳುಹಿಸುತ್ತಾರೆ. ಹೀಗೆ ಚೌಟರ ಜೊತೆಗೆ ಬಂದ ಬೋವಿಗಳು ಬಿದಿರೆಯಲ್ಲಿ ಮಹಮ್ಮಾಯಿ/ಮಾರಿಯನ್ನು ದೇವರನ್ನು ಸ್ಥಾಪಿಸಿ ಗುಡಿ ಕಟ್ಟಲು ಚೌಟರು ನೆರವು ನೀಡುತ್ತಾರೆ. ಈ ಎಲ್ಲಾ ಮಾಹಿತಿಗಳು ಕಂಬುಲದ ನಂಬುಗೆಯಲ್ಲಿ ಬರುತ್ತದೆ. ಈ ಪರಿಸರದಲ್ಲಿ ಬೋವುಗಳು ಮತ್ತು ನರ್ತಕಿಯರ ವಂಶಸ್ಥರು ಈಗಲೂ ಇದ್ದಾರೆ.

ತುಳುನಾಡಿನಲ್ಲಿ ತುಳು ಜನಪದರಲ್ಲಿ ಹನುಮಂತನನ್ನು ದೇವರಾಗಿ ಪೂಜಿಸುವ ಪದ್ಧತಿ ಇಲ್ಲ. ಹನುಮಂತ ಮಾರಿಯಂತೆ ಗಟ್ಟದ ಮೇಲಿನಿಂದ ತುಳುನಾಡಿಗೆ ಬಂದ ದೈವ ಎಂದು ಇಲ್ಲಿ ಮಾಹಿತಿ ಇದೆ. ಪರಾಡಿಯಲ್ಲಿ ನಂಬಿದ ವಿಜಯನಗರದ ಅರಸು ಬಂಟ ಯಾರು? ಸುಬ್ರಹ್ಮಣ್ಯ ಇರಬಹುದೆ ಎನ್ನುವ ಅನುಮಾನ.

ಪರಾಡಿಯ ಚಾವಡಿಯಲ್ಲಿ 'ಮಂಜಲ್ ಜುಮಾದಿ' ಮತ್ತು ಉಲ್ಲಾಯ(ನಾಗ ಬೆರ್ಮ) ಸಾನಿಧ್ಯ ಇದೆ.

***

೨೧

ಕುಂಬ್ಡಾಜೆ ಬೀಡು ಕಂಬುಲದ ಮದಿಪು

೨೫ ಡಿಸೆಂಬರ್ ೨೦೦೭

ಕಾಸರಗೋಡಿನ ಕುಂಬಳೆಯ ಸಮೀಪದ ಬದಿಯಡ್ಕದಿಂದ ಸುಮಾರು ಪೂರ್ವಕ್ಕೆ ಕಾರಿನಲ್ಲಿ ಅರ್ಧ ಗಂಟೆ ಪ್ರಯಾಣ ಮಾಡಿದರೆ ಹರಿವ ಹೊಳೆಗೆ ಎದುರಾಗಿ ಸುಂದರವಾದ ಬೀಡು ಕಾಣುತ್ತದೆ. ಇದು ಈಗಲೂ ತನ್ನ ಭವ್ಯತೆಯನ್ನು ಕಳೆದು ಕೊಂಡಿಲ್ಲ. ಚೀರುಂಟಿ ಭಗವತಿ ಈ ಮನೆಯ ದೈವ.

ಈ ಮನೆಯಲ್ಲಿ ಹಿಂದೆ ಹಿಂದೂ ಸಾಮಂತರಸ ಬಲ್ಲಾಳರು(ಜೈನರಲ್ಲ) ಇದ್ದರು. ಈಗ ಇರುವವರು ಬಂಬ್ರಾಣದ ಮನೆಯ ನಟ್ಟನ್ನ ಬಳಿಯವರು.

ಈ ಮನೆಯನ್ನು ಶೇಕರಂಕೋಡಿ(ಸೇಕರ ಕೋಡಿ) ಎಂದು ಕರೆಯುತ್ತಾರೆ. ಇದರ ಹಿನ್ನೆಲೆ ಗೊತ್ತಾಗಿಲ್ಲ.

ಕಂಬುಲ: ಇಲ್ಲಿ ಬಿತ್ತನೆ ಆದ ಹಸಿರು ಸಸಿ(ನೇಜಿ) ಇರುವ ಕಂಬುಲ ಗದ್ದೆಯಲ್ಲಿ ಪೂಕರೆ ಕಂಬ ಹಾಕುವ ಪದ್ಧತಿ ಇದೆ. ಉತ್ತು ನಂತರ ಕಂಬುಲ ಗದ್ದೆಗೆ ಪೂಕರೆ ಕಂಬ ಹಾಕುವುದನ್ನು "ಕಂಡದ ಕೋರಿ" ಎಂದೂ ಕಂಬುಲ ಮಾಡಿ ಬಿತ್ತನೆ ಅಥವಾ ನಾಟಿ ಮಾಡುವುದನ್ನು "ಕಂಬುಲದ ಕೋರಿ" ಎಂದೂ ಈ ಭಾಗದಲ್ಲಿ ಹೇಳುತ್ತಾರೆ.

ಹಿಂದೆ ಈ ಕಂಬುಲ ಗದ್ದೆ ಕೋರಲು(ಕೊನೆಯ ಉಳುಮೆ) ಸುಮಾರು ३೦ ಜೊತೆ ಕೋಣ ಮತ್ತು ಹೋರಿಗಳು ಬರುತ್ತಿದ್ದುವು. ಈಗ ಸುತ್ತಮುತ್ತ ಅಡಿಕೆ ತೋಟ ಬೆಳೆದಿದೆ.

ಕಂಬುಲದ ಪವಿತ್ರ ಆಚರಣೆಗಾಗಿ ಅದರ ಧಾರ್ಮಿಕ ಮಹತ್ವಕ್ಕಾಗಿ ಈ ಗದ್ದೆಯಲ್ಲಿ ಅಡಿಕೆ ಬೆಳೆದಿಲ್ಲ. ಈ ಕಂಬುಲ ಗದ್ದೆಯಲ್ಲಿ "ಸತ್ಯದ ಬುಲೆ" ಎಂದು ನಂಬಲಾದ 'ಸುಗ್ಗಿ ಬಿದೆ(ಬೀಜ)'ವನ್ನು ಬಿತ್ತುತ್ತಿದ್ದಾರೆ.

ಕಂಬುಲದ ನೇಜಿ ಹಾಕುವಾಗ ಕಂಬುಲದ ಗದ್ದೆಯಲ್ಲಿ ಸ್ವಲ್ಪಭಾಗದಲ್ಲಿ ಬಿತ್ತದೆ ಉಳಿಸುತ್ತಾರೆ.

ಕಂಡದ ಕೋರಿಯ ದಿನ ಬಿತ್ತದೆ ಉಳಿಸಿದ ಜಾಗದಲ್ಲಿ ಎರಡು ಹೋರಿಗಳು ಇಳಿದು ಉಳುವ ಶಾಸ್ತ್ರ ಮಾಡುತ್ತವೆ.

ಪೂಕರೆ ಕಂಬ ಹಾಕಿದ ಮೇಲೆ ನಲ್ಕೆಯ ಮಾಧ್ಯಮರು, ಪಿಲಿಚಂಡಿ (ಹುಲಿ ಚಾಮುಂಡಿ) ಮೈಸಂದಾಯ್ಗು, ಜೋಗಿ ಪುರುಷ ಕೋಲದ ನರ್ತನ ವೇಷದಲ್ಲಿ ಕಂಬುಲದ ಗದ್ದೆಯ ಕಟ್ಟಪುಣಿಯ ಮೇಲೆ ನಿಂತು ನೋಡುತ್ತಾರೆ. ಪೂಕರೆ ಕಂಬ ಏರಿದ ಮೇಲೆ ಈ ರೀತಿ ಮದಿಪು ಹೇಳುತ್ತವೆ :

೧. ಸುರೂತ ಮಾಡ ಮರಮಲೆ ಮಾಡ

೨. ಆರ್ಲಪದವು ಮಾಡ

೩. ಬೆಳಿಂಜ ಮಾಡ

೪. ಪೈಕತ ಮಾಡ

೫. ಬೆದ್ರಡ್ಕ ಮಾಡ

೬. ಉಂಬಿಡ್ಕ ಮಾಡ


೭. ಆತ್ಯೆ ಪುತ್ಯೆ ಆದಿ ಮೆರುಮಲೆ

ಉಲ್ಲಾಗ್ಲೆ(ಒಡೆಯರ)ಚಿತ್ತವನ್ನು ಸಂತೋಷಗೊಳಿಸುತ್ತೇನೆ. ಮೇಲಿನ ಎಲ್ಲಾ ಮಾಡ(ಶಕ್ತಿ ಆಲಯಗಳ) ಆದಿ ಪೆರುಮಲೆಯ ಒಡೆಯ ಒಡತಿಯರ ಚಿತ್ತವನ್ನು ಸಂತೋಷಗೊಳಿಸುತ್ತೇನೆ

ಆಮೇಲೆ ಕಂಬುಲದ ಗದ್ದೆಯ ಬದಿಯಿಂದ ಬೀಡಿಗೆ ಬಂದು ನರ್ತಿಸುತ್ತಾರೆ. ಕೊನೆಗೆ ಮೇಲಿನಂತೆ ಸಿರಿ ಸಮೃದ್ಧಿಯ ಮದಿಪು ಪಿಲಿಚಂಡಿ ದೈವ ನೀಡುತ್ತದೆ.

ಇಲ್ಲಿಯ ಕಂಬುಲದಲ್ಲಿ ಕಂಬುಲದ ಉಪವಾಸ ಕೋಣಗಳಿಗೆ ದರ್ಶನ ಬರುತ್ತದೆ. ಈ ಸಂದರ್ಭದಲ್ಲಿ ಡೋಲು, ಕೊಳಲು ಸಂಗೀತ ಪ್ರಿಯರಿಗೆ ಮುದ ನೀಡುತ್ತದೆ. ಆಚರಣೆ ಮುಗಿದ ಮೇಲೆ ಕಲಾವಿದರಿಗೆ ಭತ್ತ ಹಂಚುವ ಕೆಲಸ ಇದೆ. ಬಳ್ಳ(ಮೂರು ಪಾವು)ದಲ್ಲಿ ಭತ್ತವನ್ನು ಹಂಚುತ್ತಾರೆ. ಒಬ್ಬ ಕಲಾವಿದ ಹಂಚಿದ ಭತ್ತದ ಒಂದೊಂದು ಹಿಡಿ ತೆಗೆದು ತನ್ನ ಗೋಣಿ ಚೀಲಕ್ಕೆ ತುಂಬಿಸಿಕೊಳ್ಳುತ್ತಾನೆ. ಆತನೂ ಒಬ್ಬ ಪಾತ್ರಧಾರಿ. ಆತ ಮುಷ್ಟಿಯಲ್ಲಿ ಭತ್ತವನ್ನು ಎತ್ತಿ ತನ್ನ ಚೀಲ ತುಂಬಿಸಬೇಕೆಂಬ ಪದ್ಧತಿ ಮುಂದುವರಿಯುತ್ತಿದೆ.

ಕಂಬುಲದ ಎಲ್ಲಾ ಆಚರಣೆ ಮುಗಿದ ಮೇಲೆ ಯಜಮಾನ ಹಾಗೂ ಉಪವಾಸ ಕುಳಿತವರು ಊಟ ಮಾಡುತ್ತಾರೆ. ಮನೆಯ ಉಪವಾಸದ ಕೋಣಗಳಿಗೂ ಊಟ ನೀಡುತ್ತಾರೆ.



ದೆಯ್ಯೊಲೆ ನಲ್ಕೆ ಅವಳಿ ಸಿರಿಗಳನ್ನು ಸಂಕೇತಿಸುವ ಅತಿಕಾರೆ ಭತ್ತದ ಅವಳಿ ಹೆಡಿಗೆಗಳು : ಉಪಾಸನೆಯ ಸಂದರ್ಭ : ಸಿರಿ ಮೈಲಾಜೆ, ಕಾರ್ಕಳ

ತುಳು ಮೂಲ

“ಆಡೂರು ದೇವರೆಚಿತ್ತ ತಿಳಿಯಾಂಡೋ
ಮಧೂರು ದೇವರೆ ಚಿತ್ತ ತಿಳಿಯಾಂಡೋ
ಕಾವು ದೇವರೆ ಚಿತ್ತ ತಿಳಿಯಾಂಡೋ
ಕಣಿಪುರ ದೇವರೆ ಚಿತ್ತ ತಿಳಿಯಾಂಡೋ
ಇರುವೆರ್ ಉಲ್ಲಾಗ್ಲೆನ ಚಿತ್ತ ತಿಳಿಯಾಂಡೋ
ಮೂವೆರ್ ಜುಮಾದಿಲ್ನ ಚಿತ್ತ ತಿಳಿಯಾಂಡೋ
ಮೂಡಾಯಿ ನಾಗೆ ಪಡ್ಡಯಿ ಬೆರ್ಮೆ
ನಾಗ ತಂಬಿಲ ನಡತ್ತ್ ಬರೊಡು
ಮೂಡಾಯಿ ಪಡ್ಡೊಯಿ ಪೂಕರೆ ಬೆಳಗ್‌ದ್ ಬರಡ್
ತೆನ್ಕಾಯಿ ಕಳೆಲತ ಆಯ ಬೆಳಗೊಡು
ಬಡಕಾಯಿ ಮಂಜ ಕೊಟ್ಯದ ಆಯ ಬೆಳಗೊಡು.
ಬೂಡುದ ನಂದಾದೀಪ ಬೆಳಗ್‌ದ್ ಬರೊಡು
ಬೂಡುದ ಪೇರ್ ನುಪ್ಪು ಎಚ್ಚಿದ್ ಬರೊಡು
ಬುಲೆ ಭಾಗ್ಯ ಎಚ್ಚಿದ್ ಬರೊಡು
ದಾನ ಧರ್ಮ ಎಚ್ಚಿದ್ ಬರೊಡು
ಪತ್ತ್ ಒಕ್ಕೆಲ್ ಎಚ್ಚಿದ್ ಬರೊಡು
ಪಣವು ಬಂಗಾರ ಎಚ್ಚಿದ್ ಬರೊಡು
ಮೂಡುಟ್ಟು ವರ್ಷದ್ದೊ ವರ್ಷೊಗು ಒಂಜೆಕ್ಕ್
ಪತ್ತ್ ಪತ್ತೆಕ್ಕೆ ಸಾರ ಎಚ್ಚಿದೇ ಬರೊಡು.”

⌘⌘⌘

ಕನ್ನಡ ಅನುವಾದ

"ಆಡೂರು ದೇವರ ಚಿತ್ತ ತಿಳಿಯಾಯಿತೋ
ಮಧೂರು ದೇವರ ಚಿತ್ತ ತಿಳಿಯಾಯಿತೋ
ಕಾವು ದೇವರ ಚಿತ್ತ ತಿಳಿಯಾಯಿತೋ
ಕಣಿಪುರ ದೇವರ ಚಿತ್ತ ತಿಳಿಯಾಯಿತೋ,
ಇಬ್ಬರು ಉಲ್ಲಾಗ್ಲು ಚಿತ್ತ ತಿಳಿಯಾಯಿತೋ,
ಮೂವರು ಧೂಮಾವತಿಗಳ ಚಿತ್ತ ತಿಳಿಯಾಯಿತೋ,
ಮೂಡಲ ನಾಗ, ಪಡುವಲ ಬೆರ್ಮ
ನಾಗ ತಂಬಿಲ, ನಡೆದು ಬರಬೇಕು,
ಮೂಡಲಲ್ಲಿ ಪಡುವಲಲ್ಲಿ ಪೂಕರೆ ಬೆಳಗಿಬರಲಿ,
ತೆಂಕಲಲ್ಲಿ ಕಳಲೆಯ ಆಯ ಬೆಳಗ ಬೇಕು
ಬಡಗು ಮಂಜ ಕೊಟ್ಯದ ಆಯ ಬೆಳಗಬೇಕು
ಬೀಡಿನ ನಂದಾದೀಪ ಬೆಳಗಿ ಬರಲಿ,
ಬೀಡಿನ ಹಾಲನ್ನ ಉಕ್ಕಿ ಬರಲಿ,
ಬೆಳೆ ಭಾಗ್ಯ ಹೆಚ್ಚಿ ಬರಲಿ,
ದಾನ ಧರ್ಮ ಹೆಚ್ಚಿ ಬರಲಿ
ಹತ್ತು ಒಕ್ಕಲು ಹೆಚ್ಚಾಗಿ ಬರಲಿ,
ಪಣವು ಬಂಗಾರ ಹೆಚ್ಚಿ ಬರಲಿ
ಮೂಡುಟ್ಟು ವರ್ಷದಿಂದ ವರ್ಷಕ್ಕೆ, ಒಂದಕ್ಕೆ ಹತ್ತು,
ಹತ್ತಕ್ಕೆ ಸಾವಿರ ಹೆಚ್ಚಾಗಿಯೇ ಬರಲಿ."

⌘⌘⌘

ಮದಿಪು ಒದಗಿಸಿದವರು : ಕುಂಬ್ಡಾಜೆ ಬೀಡು ತಿಮ್ಮಪ್ಪ ರೈ, ಕಾಸರಗೋಡು



ಕೋಲದಲ್ಲಿ ನಾಗಬಿರ್ಮೆರ್ ಪಾತ್ರದಲ್ಲಿ ತನಿಯಪ್ಪ
ಜಾಲಾಟ, ಬೈಲಂಗಡಿ - ಬೆಳ್ತಂಗಡಿ

೨೨

ಅನಂತಾಡಿ ಕಂಬುಲದ ಕೊರಗ ಸಂಧಿ

ಹಾಡಿದವರು : ವಿಶ್ವನಾಥ ಪ್ರಾಯ ೩೫, ಜಾತಿ : ನಲ್ಕೆ
ಅನಂತಾಡಿ ೧೩.೧೧.೨೦೦೬

ಬಂಟ್ವಾಳ ತಾಲೂಕಿನಲ್ಲಿ ಅನಂತಾಡಿಯಲ್ಲಿ ಉಲ್ಲಾಲ್ತಿಯ ಕ್ಷೇತ್ರ ಇದೆ. ಪ್ರತಿವರ್ಷ ಉಲ್ಲಾಲ್ತಿ ಕೋಲ ಹಾಗೂ ೧೨ ವರ್ಷಕ್ಕೆ ಒಮ್ಮೆ ಧರ್ಮ ಮೆಚ್ಚಿ ನಡೆಯುತ್ತಿದೆ. ಈ ಉಲ್ಲಾಲ್ತಿಗೆ ನಾಲ್ಕು ಕಂಬುಲಗಳು ನಡೆಯುತ್ತಿವೆ. ಮೂಲ ಬನ ಬಾಕಿಲಿತ್ತಿಮಾರ್ (ಬಾಕಿಲ್ಡ್ ಇತ್ತಿ ಮಾರ್/ಬಾಗಿಲಲ್ಲಿ ಇರುವ ಗದ್ದೆ)

ಕಂಬುಲದ ಕುದಿ(ದಿನ ಇಟ್ಟ ಮೇಲೆ) ಆದ ಮೇಲೆ ನಲ್ಕೆಯವರು ತೆಂಬೆರೆ ಹಿಡಿದು ಹೋಗಬೇಕು. ಮನ್ಸ ಜಾತಿಯವರೂ ಪ್ರತಿ ಮನೆಗೂ ಹೋಗಬೇಕು. ಊರ ಕೃಷಿಕರನ್ನು ಕರೆಯಬೇಕು. ಅನಂತಾಡಿ ಬಾಕಿಲಿತ್ತಿಮಾರ್ ಮನ್ಸರ ಮೂಲ ತಾನ. ನೇಲ್ಯ ಮನೆಯಲ್ಲಿ ಇದ್ದ ಪೂರ್ವದ ಬಂಟರಿಗೂ ಮೂಲ ತಾನ. ದೀಪಾವಳಿಗೆ ಕಂಬುಲದ ಕುದಿ ಇಡುತ್ತಾರೆ

ಕಂಬುಲದ ದಿನ ಅನಂತಾಡಿ ಕಂಬುಲದಲ್ಲಿ ಕೊರಗನ ವೇಷ ಹಾಕುವವರು ನಲ್ಕೆಯವರು. ಇವರು ಅಂತಾಡಿ ಗ್ರಾಮದ ಕೃಷಿಕರ ಮನೆಗಳಿಗೆ ಹೋಗಿ ಹಾಡುವ ಸಂಧಿ ಪಾಡ್ದನ. ನೇಲ್ದೊಟ್ಟು ಮನೆಯಲ್ಲಿ ಇಡಿ ಸಂಧಿ ಹಾಡುತ್ತಾರೆ.

ತುಳು ಮೂಲ

....

ಕಾಂತಾರೊಡು ತನಿಯೆ ಪುಟ್ಟಿಯೆಗೇ....
ಕದ್ರಡ್ ತನಿಯೇ ಬಲತೇ....
ಅಪ್ಪೆ ಪನ್ನಗ ಉಲ್ಲಾಲ್ಗೇನಾ
ಕೊಪ್ಪಡ್ ಕೋರೆ ಮೈರೇ
ಅಮ್ಮೆ ಪನ್ನಗಾ ಉಲ್ಲೆಗೆ
ಅವುಲು ಕೊಪ್ಪೊಡು ಕೋರ ಕೊರಗು ಯೇ...
ಒಂಜಿ ಕಾಲೊಡು ಅಪ್ಪೆ ತತ್ತ್ಂಡ್
ಒಂಜಿ ಕಾಲೊಡು ಅಮ್ಮೆ ತತ್ತ್ಂಡ್
ಸಮ್ಮಲೆನ ಪುಂಡಿ ನುಪ್ಪು ತಿಂನಾನ ಕಾಲೊಡು
ಸಮ್ಮಲೆಗ್ ಅಳಿಯಂತ್ರ ಬತ್ತಂಡ್ ಯೇ....

ಏಲ್ ಕೊಪ್ಪದ ದೋಲು ಕರಂಡೆನ್......
ಒಂಜಿ ಕೊಪ್ಪೊಗೂ ಪಾಡಿಯೇ....
ಕೊಪ್ಪೊಗೂ ಮುಲಗಟ್ಟ ಪಾಡಿಯೇ ತನಿಯೇ.
ಸಾರ ಜನ ಪೋಪೀ ತಾದಿಡ್ ತನಿಯೇ
ಕರ್ಗಲ್ಲ ಕಾಣಿಕೇ ದೀತೆಯೇ....
ಕರ್ಗಲ್ಲ ಕಾಣಿಕೆ ಬೊಲಗಲ್ಲ ಸುತ್ಯ
ಪೊಯ್ಯ ಪಸ್ರಾನಿ ಪಾಡಿಯೇ..

ಕದ್ರ ತಾನದ ಮೂಲ ಬರ್ಕಡ್
ಅಪ್ಪ ಬೀರಗೆ ಬರುವೆರ್‌ಗೇ....
ಅಪ್ಪೆ ಬೀರಗೆ ಮಗಲ್ ಮಂಜಗೇ
ಮೆಗ್ಯೆ ಚೆನ್ನಗೇ ಬೈದೆರ್‌ಗೇ......
ಅಕೆಲ್ನ ಮೋನೆ ತೂಯೆನಾ ತನಿಯೆ
ಕಣ್ಣಡ್ ಕನ್ ದುಃಖ ಬುಡ್ಪೆ.....
'ದ್ಯಾಮಗ ಬುಲಿಪುವಾ ದ್ಯಾ ಮಗ ತೆಲಿಪುವಾ'
ಅಪ್ಪ ಬೀರಗೆ ಕೇಂಡೆರ್‌ಯೇ...

ಕನ್ನಡ ಅನುವಾದ

....

ಕಾಡಿನಲ್ಲಿ ತನಿಯ ಹುಟ್ಟಿದನಂತೆ
ಕದ್ರಿಯಲ್ಲಿ ತನಿಯ ಬೆಳೆದ
ಅಬ್ಬೆ ಎಂದರೆ ಇದ್ದಳಂತೆ
ಕೊಪ್ಪದಲ್ಲಿ ಕೋರ ಮೈರೆ
ಅಪ್ಪ ಎಂದರೆ ಇದ್ದಾನಂತೆ
ಅಲ್ಲಿ ಕೊಪ್ಪದಲ್ಲಿ ಕೋರ ಕೊರಗು ಯೇ*
ಒಂದು ಕಾಲದಲ್ಲಿ ಅಬ್ಬೆ ಹೋದರು
ಒಂದು ಕಾಲದಲ್ಲಿ ಅಪ್ಪ ಹೋದರು
ಸಮ್ಮಲೆಯ ಹಿಡಿ ಅನ್ನ ತಿನ್ನುವ ಕಾಲಕ್ಕೆ
ಸಮ್ಮಲೆಗೆ ಅಳಿಯಂತ್ರ ಬಂತು ಯೇ

ಏಳು ಕೊಪ್ಪದ ಡೋಲು ಕರಂಡೆಯನ್ನು
ಒಂದು ಕೊಪ್ಪೊಕ್ಕೆ ಹಾಕಿದ
ಕೊಪ್ಪಕ್ಕೆ ಮುಲಗಟ್ಟ ಹಾಕಿದ ತನಿಯ
ಸಾವಿರ ಜನ ಹೋಗುವ ದಾರಿಯಲ್ಲಿ
ಕಪ್ಪು ಕಲ್ಲಿನ(ಶಿಲೆ)ಯ ಕಾಣಿಕೆ ಇಟ್ಟವನೇ*
ಕಪ್ಪು ಕಲ್ಲಿನ ಕಾಣಿಕೆ ಬಿಳಿಕಲ್ಲಿನ ಸುತ್ತ
ಹೊಯಿಗೆಯ ಪಸರಣೆ ಹಾಕಿದ

ಕದ್ರಿ ಸ್ಥಾನದ ಮೂಲ ಬರ್ಕೆಗೆ
ಅಬ್ಬೆ ಬೀರಗೆ ಬರುವರು
ಅಬ್ಬೆ ಬೀರಗೆ ಮಗಳು ಮಂಜಗೆ
ತಮ್ಮ ಚೆನ್ನಗೆ ಬೈದ್ಯರು
ಅವರ ಮೊಗ ನೋಡಿದನಾ ತನಿಯಾ
ಕಣ್ಣಲ್ಲಿ ಕಣ್ಣ ದುಃಖ ಬಿಡುತ್ತಾನೆ
'ಯಾಕೆ ಮಗಾ ಅಳುವಿಯಾ ಯಾಕೆ ಮಗಾ ನಗುವಿಯಾ'
ಅಬ್ಬೆ ಬೀರಗೆ ಕೇಳಿದರು ಯೇ *

'ಈರೆನ ಮೋನೆ ತೂನಗ ಅಪ್ಪೇರೆ
ಎನ್ನಪ್ಪೆ ಲೆಕ್ಕಂದ್ ತೋಜುಂಡುಯೇ..
ಅಪ್ಪೆ ತತ್ತಂಡ್ ಅಮ್ಮೆ ಮುತ್ತುಂಡು
ಕೇಲ್ ಪೀಲಿಗೇ ಮುತ್ತುಂಡುಯೇ...
ಕೇಲ್ ಪೀಲಿಗೆ ಮುತ್ತುಂಡು ಉಲ್ಲಾಯ
ದಿಕ್ಕ್ ಬುಡ್ದು ದೇಶಾಂತರ ಪೋಪೇಯೇ..'

'ಅಂಚ ಪೋಪಿನಾ ಬಾಲೆ ಅಂದ್‌ಡ
ಎಂಕಾಲೆ ಬೆರೆಪತ್ತ್ ಬರುವನಾ'

'ಇರೆ ಬೆರಿ ಪತ್ತಿ ಬರುಬೆನೆ ಉಲ್ಲಾಯ
ಅಂಡ್‌ಗ್ ಅರುವೆ ಇದ್ದಿಯೇ..'

ಕಡ್ಯದ ತೆರಿಯ ದೆತ್ತೇರ್‌ಗವುಲು
ಅಂಡ್‌ಗ್ ಅರುವೆಂದ್ ಕೊರಿಯೆರ್‌ಯೇ..
ಪೊದಿಕೆದ ಪಾಲೆನ್ ದೆತ್ತೇರ್ ಅವುಲು
ತರೇಕ್ ಗೋಂಪಾರ್ ಕೊರಿಯೇರ್‌ಗೇ..
ತನಿಯನ್ ಲೆತ್ತೊಂದು ಪೋಯೇರ್
ಅವುಲು ದೇರಾಜೆ ಮೂಲ ಬರ್ಕೆಗ್‌ಯೇ
ದೇರಾಜೆ ಮೂಲ ಬರ್ಕೆಗ್ ಕೊಂಡೊಂದು
ತಾರೆದ ಮುದೆಲ್ಡ್ ಕುಲ್ಲಾದೆರ್...

'ಏರಮ್ಮ ತನಿಯಾ ಬಾಲೆ ಕೇಂಡನಾ
ನಿನ್ನ ಮೂಲ ಒವುಂದು ಕೇಂಡೆರ್‌ದೇ..'
ಎನ್ನ ಮೂಲಂದ್ ಬಾಗೆಟ್ಟು ಬನ್ನಾಲೆ
ಮೂಲಂದ್ ಪಂಡೆಯೇ....
ಎನ್ನ ಬರಿ ಬಾಂದ್ರ ಸೋಮಣ್ಣ ಬರಿ ಇಂದೆಯೇ..

ಬಾರೆದ ಮುದೆಲ್‌ಡ್ ಕುಲ್ಲಾದ್ ಅವುಲು
ಮುಪ್ಪ ಬಂಗುಡೇ ಮೂಜಿ ಕುಜಿಲ್
ಪಲಯಿಡ್ ತೆಲಿ ಮುಟ್ಟಲೆಡ್ ಕಲಿ ಕೊರ್ದು
ಒಂಜಿ ವರ್ಷ ಆಜಿ ತಿಂಗೊಲು ಸಾಂಕಿಯೆರ್

ನಿಮ್ಮ ಮೊಗ ನೋಡುವಾಗ ಅಬ್ಬೆಯವರೇ
ನನ್ನಬ್ಬೆಯಂತೆ ಕಾಣುತ್ತದೆಯೇ
ಅಬ್ಬೆ ಸತ್ರು ಅಪ್ಪ ಮುತ್ತಿದರು
ಕೇರಿಯ ಪೀಳಿಗೆ ಮುತ್ತಿತು ಯೇ
ಕೇರಿಯ ಪೀಳಿಗೆ ಮುತ್ತಿತು ಒಡೆಯಾ
ದಿಕ್ಕು ತಪ್ಪಿ ದೇಶಾಂತರ ಹೋಗುವೆ ಯೇ*

ಹಾಗೆ ಹೋಗುವ ಮಗು ಹೌದಾದರೆ
ನಮ್ಮ ಬೆನ್ನು ಹಿಡಿದು ಬರುವೆ ಯಾ*

'ನಿಮ್ಮ ಬೆನ್ನು ಹಿಡಿದು ಬರುವೆನೆ ಒಡೆಯಾ
ಮೈಯಲ್ಲಿ ಬಟ್ಟೆ ಇಲ್ಲವೇ'

ಕಡ್ಯ ಒಡೆದು ಸಿಂಬಿ ತೆಗೆದರು
ಮೈಗೆ ಬಟ್ಟೆ ಎಂದು ಕೊಟ್ಟರು ಯೇ*
ಸುತ್ತುವ ಪಾಲೆಯನ್ನು ತೆಗೆದರು ಅಲ್ಲಿ
ತಲೆಗೆ ಗೋಂಪಾರ್ ಎಂದು ಕೊಟ್ಟರು
ತನಿಯನನ್ನು ಕರೆದುಕೊಂಡು ಹೋದರು
ಅಲ್ಲಿ ದೇರಾಜೆಯ ಮೂಲ ಬರ್ಕೆಯಂತೆ ಯೇ*
ದೇರಾಜೆಯ ಮೂಲ ಬರ್ಕೆಗೆ ಕೊಂಡು ಹೋಗಿ
ತೆಂಗಿನ ಮರದ ಬುಡದಲ್ಲಿ ಕೂರಿಸಿದರು

ಯಾರಮ್ಮಾ ತನಿಯಾ ಮಗು ಕೇಳಿದೆಯಾ
ನಿನ್ನ ಮೂಲ ಯಾವುದೆಂದು ಕೇಳಿದರು ದೇ
ನನ್ನ ಮೂಲಎಂದರೆ ಬಾಗೊಟ್ಟು ಬನ್ನಾಲೆ
ಮೂಲ ಎಂದು ಹೇಳಿದರು ಯೇ
ನನ್ನ ವಂಶ 'ಸೋಮ ವಂಶ' ಎಂದು ಯೇ*

ಬಾಳೆಯ ಬುಡದಲ್ಲಿ ಕೂರಿಸಿ ಅಲ್ಲಿ
ಮೂವತ್ತು ಬಂಗುಡೆ ಮೂರು ಮುರುಳಿ
ಹಲಗೆಯಲ್ಲಿ ಕಳ್ಳು ನೀಡಿ ಮುಟ್ಟಾಲೆಯಲ್ಲಿ ಕಳ್ಳು ಕೊಟ್ಟು
ಒಂದು ವರ್ಷ ಆರು ತಿಂಗಳು ಸಾಕಿದರು

ತನಿಯೆ ಬತ್ತಿನಾ ಎಡ್ಡೆ ಪೊಲ್ಲುಡೂ
ಅರಿ ಬಾರ್ ಇಲ್ಲಡ್ ಎಚ್ಚಿಂಡ್ ಯೇ*

ಕದ್ರ ಕಾಂತು ಮಂಜುನಾಥ ಸ್ವಾಮಿಗ್
ಕಂಚಿನಾ ದೀಪಾಲೆ ದೀಪಾವೊಡೂ
ಕಂಚಿನಾ ದೀಪಾಲೆ ದೀಪಾವೊಡು ತನಿಯಾ
ಸಿರಿ ಬಾರೆ ಕೊಂಡೊಂದು ಬರುವನಾ
ನಮ ನಂಬಿ ಧರ್ಮ ದೈವೊಗು
ಸಿರಿಬಾರೆ ಕೊಂಡೊಂದು ಪೋವನಾಗ
ಕವುಡ ಮರ್ಲ್ ಬೂತ ಮೈಸಂದಾಯ
ಪಿಲಿಬೂತ ಪಿಲಿಚಂಡಿ ಕಿನ್ನಿ ಕೊಡಂಗೆಂದಾಯೆ
ಮಾಲ ದುರ್ಗದಾಯೆ, ಮರ್ಲ್ ಮಾಯ ಮಲ್ತೆರ್‌ಗೇ....
ಕಾಂತಾರದ ಪದವುಡು ಏಲ್ ಗುಡ್ಡೇಡ್
ಏಲ್ ಕಲ್ಲ್ ಪದ ನಾಡಾಯೆರ್

⌘⌘⌘

ತನಿಯ ಬಂದ ಲಕ್ಷಣ ಒಳ್ಳೆಯದು
ಅಕ್ಕಿ ಭತ್ತ ಮನೆಯಲಿ ಹೆಚ್ಚಿತು.

ಕದ್ರ ಕಾಂತು ಮಂಜುನಾಥ ಸ್ವಾಮಿಗೆ
ಕಂಚು ದೀಪಾಲೆ ಇಡಿಸಬೇಕು
ಕಂಚು ದೀಪಾಲೆ ಇಡಿಸಬೇಕು ತನಿಯಾ
ಸಿರಿ ಬಾಳೆ(ಗಿಡ)ತೆಗೊಂಡು ಬರುವೆಯಾ
ನಾವು ನಂಬಿದ ಧರ್ಮ ದೈವಗೆ
ಸಿರಿ ಬಾಳೆ ಕೊಂಡು ಹೋಗುವಾಗ
ಕವುಡ ಹುಚ್ಚು ಭೂತ ಮೈಸಂದಾಯ
ಹುಲಿ ಬೂತ, ಪಿಲಿಚಂಡಿ, ಕೊನ್ನಿಕೊಡಂಗಾಯವ
ಮಲ ದುರ್ಗದವ, ಹುಚ್ಚು ಮಾಯ ಮಾಡಿದರಂತೇ*
ಕಾಡಿನ ಬಯಲಲ್ಲಿ ಏಳು ಗುಡ್ಡೆಯಲ್ಲಿ
ಏಳು ಕಲ್ಲು ಪದ ನೆಟ್ಟರು

(ಹೀಗೆ ಮಾಯವಾದ ಕೊರಗನನ್ನು ನಂಬಿದರು, ಕೊರಗ ತನಿಯ ದೈವತ್ವಕ್ಕೆ ಏರಿದನು)

⌘⌘⌘

ಸಾಂಸ್ಕೃತಿಕ ಪದಕೋಶ

ಅಂಗೈ ಅರಸಿನ ಗೆರೆ ಮಾಸಿಲ್ಲ	=	ಬಾಣಂತಿ ಮಗುವಿಗೆ ಅರಸಿನ ತಿಕ್ಕಿ ಸ್ನಾನ ಮಾಡಿದರೆ ಸೂತಕದ ವಾಸನೆ ಹೋಗುತ್ತದೆ. ಹಾಗೆ ಸೂತಕದ ವಾಸನೆ ಕಳೆಯಲು ಹಚ್ಚಿದ ಅರಶಿನದ ಬಣ್ಣ ಮಾಸುವ ಮೊದಲೇ ಎಂಬರ್ಥ
ಅಂಗೈ ಸರಪಳಿ ಮುಂಗೈ ಬಳೆ	=	ಪಾಳೆಯಗಾರಿಕೆಯ ಮನೆಗಳ ಯಜಮಾನಿಕೆಯ ಸಂಕೇತವಾಗಿ ವಿಧಿವತ್ತಾಗಿ ಕೈಗೆ ತೊಡಿಸುವ ಚಿನ್ನದ ಸರಪಳಿ ಮತ್ತು ಬಳೆ
ಅಂಡೆ	=	ಗುಡಾಣ
ಅಂಬಿದ ವರಸರಿ	=	ಸೆಗಣಿಯ ಶುದ್ಧ
ಅಗಿನ	=	ತಿನ್ನುವ ತುಡಿತ
ಅಡಿ ಅಟ್ಲಡ್	=	೧ ಅಡುಗೆಯ ಅಡ್ಕಳ. ೨ ಅಡುವ ಕಲ
ತುಡಿ ಪುದರ್	=	ಸುಟ್ಟ ಹೆಸರು
ಅಡಿ ಅಡ್ಯೆ	=	ಬೇಯಿಸಿದ ಅಡ್ಯೆ, ಮಾಡಿದ ಅಡುಗೆ
ಅಡ್ಯೆ	=	ಅಕ್ಕಿಯಿಂದ ಮಾಡಿದ ದೋಸೆ, ಕಡುಬು ಓಡುಪಾಲೆ ಇತ್ಯಾದಿ
ಅಣಿ	=	೧ ಮುಡಿ ೨ ಹೆಡೆ ೩ ಹೆಡೆಗಳ ಅಲಂಕರಣದ ತೆಂಗಿನ ಎಳೆಗರಿಗಳು ಕಿರೀಟ ೪ ಕಂಗಿನ ಹಾಳೆಯಿಂದ ರಚಿಸಿದ ಪ್ರಭಾವಳಿ
ಅನಿತ್ತ್ ಗುನಿತ್ತ್	=	ಗುಣಿಸಿ ಪದದ ಕೂಡು ನುಡಿ
ಅಬ್ಬಗ ಪೂಲು	=	ಅಬ್ಬಗ ಜಾತಿಯ ಅಡಿಕೆ ಹೋಲು
ಅಮೆ	=	ಹೆತ್ತ ಸೂತಕ
ಅರದ್ದೆರ್	=	ಅರಬ್ಬರ್, ವ್ಯಾಪಾರಿಗಳು
ಅರೆ ಮರೆ	=	ಬಯಕೆ

ಅರೆಟ್ ಅರೆ ಪುಂಚ = ಮೃದು ಮಣ್ಣಿನ ಮೃದು ಹುತ್ತ

ಅರೆಯು = ಹರಿತಗೊಳಿಸು

ಅಸಿಗೆ = ಅಸಿಕೆ/ಸಣ್ಣ ಕತ್ತಿ

ಕಂಠ = ಲೇಖನಿ

ಆನ್‌ಜೋವು = ಗಂಡಸು

ಇಡಿ ಪಿಂಗಾರದಲ್ಲಿ ಮಡಿಯಾಗು = (ನಾಗ ಪಾತ್ರಿಗಳು) ಪಿಂಗಾರದ ಪೂರ್ಣ ಹಾಳೆಯಲ್ಲಿ ಮಡಿ ಮೀಯುವುದು

ಇದ್ರಡಿ ಕುದ್ಕರೆ ತೀರ = ಸ್ಥಳನಾಮ

ಇನಿಪ ಪುಂಚ = ಸುಯ್ಲು ಹೊಮ್ಮುವ ಹುತ್ತ ಇನಿಪ>ಉನಿಪ್ಪು ಸುಯಿಂಪು>ಇನಿಪನ ಸುಯ್ಲು (ಸರ್ಪ)

ಉಂಡಿತ್ತ = ಇದ್ದಂಗೆ

ಉಗುರು ಸುತ್ತು = ಉಗುರಿನ ತುದಿ ಕೊಳೆತು ಕರಗುವ ಕಾಯಿಲೆ

ಉಪ್ಪು ಕರಿಯ = ಬೋಧ ತಪ್ಪಿದ ಕೋಳಿಯ ಮೇಲೆ ಮಡಕೆ ಕವಚಿ ಹಾಕಿ ಅದರ ಮೇಲೆ ತೆಂಗಿನ ಗೆರೆಟೆಯಿಂದ ಒಂದು ನಿಮಿಷ ಕೆರೆಯುವ ತಂತ್ರ

ಉರು = ಒರು, ರೂಪ, ಪ್ರತಿಮೆ

ಉರ್ಮಿ ಕಳ = ನಾಗ ಕ್ಷೇತ್ರ, ಕಾಸರಗೋಡಿನ ಕುಂಬ್ಡಾಜೆ ಮೂಲದ ನಾಗ ಕ್ಷೇತ್ರ ಹೆಸರು 'ಉರ್ಮಿ ಬನ.' ಕುಂಬ್ಡಾಜೆ ಬೀಡಿನ ಮಹಿಳೆಯನ್ನು ಉರ್ಮಿತ್ತಾಯಿ ಎಂದು ಕರೆಯುವ ರೂಢಿ ಇದೆ.

ಉರ್ಮಿ ಕಟ್ಟ = ನೀರಾವರಿ ಅನುಕೂಲಕ್ಕಾಗಿ ಉರ್ಮಿ ಹೊಳೆಗೆ ಹಾಕಿದ ತಡೆ

ಉರ್ಮಿ = ನಾಗ ಕನ್ನಿಕೆ

ಉಲ್ಲಾಕುಲು = ೧ ಅವಳಿ ನಾಗ ಶಕ್ತಿಗಳು. ೨ ಅವಳಿ ಅರಸು ದೈವಗಳು ೩ ಅಸ್ಪೃಶ್ಯರು ಒಡೆಯರನ್ನು ಸಂಬೋಧಿಸುತ್ತಿರುವ ಪದ

ಎಯ್ದ್ ಪಾಡಿಯೆ = ಕೊಂದು ಹಾಕಿದ

ಎರ್ಮೆಲಾ ಬಿರ್ಮೆರ್‌ಲಾ	=	ಬೆರ್ಮೆರ್(ನಾಗಬ್ರಹ್ಮ)ಹೆಸರಿನ ಕೂಡು ಪದ
ಒಕ್ಕ/ಒಕ್ಕೊ	=	ಉಡಿ, ಉಡಿ ಉಡಿದಾರ ಧರಿಸುವ ಬಾಗ,
ಒಕ್ಕ ಸುತ್ತು, ಅಮೆಸುತ್ತು, ಅಣಿಸುತ್ತು, ಪಿಂಗಾರಪಾಮು, ಮಂಚಪಾಮು, ಅಂಗೈಸುತ್ತು, ಕುರ್ಕೆಬಾಮು	=	ಇವೆಲ್ಲ ಸರ್ಪ ರೋಗಗಳು
ಒಕ್ಕೆತ್ತಿ	=	ಬಂಟ ಹೆಂಗುಸು
ಒಕ್ಕೆತ್ರಿ ವಂಶ	=	ಒಕ್ಕಲಿಗ ವಂಶ, ಬಂಟ
ಒರಟು	=	ಉರ್ಡುನು, ಪೀಡಿಸು, ರಂಪಮಾಡು (ಹೋರಾಡು)
ಒರೊಕ್ಕ	=	ಉತ್ತಮ
ಒರ್ಮೆ ಬೂರುನಿ	=	ಹೊಂದಾಣಿಕೆಯಾಗು
ಒರ್ಮೆ	=	೧ ಸಾಮರಸ್ಯ ೨ ಎಲ್ಲಾ ಭಾಗ ಹರಡು(ಉದಾ: ಮೈಯೊರ್ಮೆ = ಮೈ ಇಡೀ ಇಲ್ಲೊರ್ಮೆ ಮನೆಯಿಡೀ)
ಒಲ್ಲೆ	=	ವಿಷರಹಿತ ಹಾವು. ಇವು ನೀರಲ್ಲಿ ಹೆಚ್ಚಾಗಿ ಇರುತ್ತವೆ
ಓಡುಪಾಲೆ ರೊಟ್ಟಿ	=	ಕಪ್ಪರುಟ್ಟಿ (ನೆನೆದ ಅಕ್ಕಿ, ಬೆಂದ ಅನ್ನ, ಹಸಿ ತೆಂಗಿನಕಾಯಿ, ಹಾಕಿ ರುಬ್ಬಿ ಕೂಡಲೆ ಮಣ್ಣಿನ ಕಾವಲಿಯಲ್ಲಿ ಕಾಯಿಸುವ ದೋಸೆ)
ಕಂಗು	=	ಅಡಿಕೆ ಮರ
ಕಂಚಿನಾ ಅಡ್ಕ	=	ಮಣ್ಣಿನ ಅಡ್ಕ ಹುತ್ತ. ಸ್ಥಳನಾಮ
ಕಂತಿತು	=	ಮುಳುಗಿತು
ಕಂಟ	=	ಲೇಖನಿ, ಬರೆಯುವ ಸಾಧನ
ಕಜಕ್	=	ಕಪ್ಪೆ ಚಿಪ್ಪು
ಕಟ್ಟಂಕಣ	=	ಬಾವಿಯ ಗೋಡೆಗೆ ಕಟ್ಟಿದ ಅಂಕಣ
ಕಡು	=	ಸಸ್ಯಗಳಿಂದ ತಯಾರಿಸಲಾದ ವಿಷ
ಕಡ್ಯ	=	ಉಂಗುರಾಕಾರದ ಕಾಲಿರುವ ಮಣ್ಣಿನ ಕೊಡ

ಕನ್ನಡಿ ಕಲಸು ಮಗ	=	ಭಂಡಾರಿ, ಕ್ಷೌರಿಕ
ಕನ್ನಿಲ್ಲ್	=	ನೈರುತ್ಯ ಮೂಲೆ
ಕಯ್ಯ್ ನಂಬೆದವುಲು	=	ಕೈನಂಬಿದಲ್ಲಿ(ಅನುಮಾನಿತ ಸತ್ಯ)
ಕರಂಡೆ	=	ಡೋಲಿನಂತಿರುವ ಚರ್ಮವಾದ್ಯ
ಕರಿಕ ತೆಲಿ	=	ಗಂಜಿ ಬೇಯಿಸಿದ ನೀರು(ಕರತ ತೆಲಿ?) ಕರಿಯ ಸಂಕಮಾಲೆ ಮತ್ತು ಬಿಳಿಯ ಸಂಕಮಾಲೆ
ಕರಿಯ ಸಂಕಮಾಲೆ	=	ಇವು ಅಣ್ಣ ತಮ್ಮ ನಾಗ ಶಕ್ತಿಗಳು
ಕರಿಯ	=	೧ ಕಡವು, ಹೊಳೆ ನದಿಗಳನ್ನು ದಾಟುವ ಭಾಗ ೨ ನೀರಿನ ಗುಂಡಿ
ಕರುನೀರು	=	ಬಿತ್ತನೆ ಮಾಡಿದ ಮರುದಿನ ಹರಿಯ ಬಿಡುವ ನೀರು
ಕರೆ	=	ಆಡಳಿತ ವ್ಯವಸ್ಥೆಯ ಪ್ರಾದೇಶಿಕತೆ ಗುರುತಿಸುವಿಕೆ
ಕರೆಂಕಿ	=	ಕರುಗಳನ್ನು ಕಟ್ಟುವ ಸ್ಥಳ
ಕರ್ಕೆಡ್	=	೧ ಕಠಿಣ ೨ ಕಡು
ಕಲಂಕ್	=	ಕೆರೆ, ಹೊಳೆಗಳ ರಾಡಿ ನೀರು, ಕೆಸರು ನೀರು
ಕಲ್ಕ	=	ಬೇನೆ, ನೋವು
ಕಲಿ	=	ಅನಿಷ್ಟ
ಕಲೆಂಬಿ	=	ಪತ್ತಾಸ್
ಕಲೆಂಬಿ	=	ಸುಮಾರು ೬ ಅಡಿ ಉದ್ದ ೩ ಅಡಿ ಅಗಲ ೩ ಅಡಿ ಆಳದ ಮರದ ದೊಡ್ಡ ಪೆಟ್ಟಿಗೆ ಪತ್ತಾಸು
ಕಲ್ಕಾನ	=	ವಿಪರೀತ ಬೇನೆ
ಕಲ್ಪ	=	ಕಪಟ
ಕಲ್ಯ ಮೊರೆ ತೆಲಿ	=	ಮಡಕೆಯ ಅಡಿಯಲ್ಲಿ ಇರುವ ಅನ್ನ ಬೆಂದು ಆದ ಗಂಜಿ ನೀರು
ಕಲ್ಲನ ಕಬಕೆನ ಜನನಂದ ಬೂಡು	=	ಜನನದ ಬೀಡಿನ ಸ್ಥಳನಾಮ
ಕಲ್ಲೆಂದ ಕಬಕೆಂದ ಬೂಡು	=	ಬೀಡಿನ ಸ್ಥಳನಾಮ

ಕವುಡಿಗೆ = ಜ್ಯೋತಿಷದ ಕವಡೆ. ಇದು ಯೋನಿ ಸೃಷ್ಟಿಯ ಸಂಕೇತ

ಕಾಯಿ ಕರ್ಕ್ = ತಿರುಳು ಹುಟ್ಟದ ಕಾಯಿ

ಕಿನ್ನಿ = ಕೋಳಿಯ ಮರಿ

ಕುಕ್ಕಿನ ಕುಡಿ ತಂಬಿಲ = ಮಾವಿನ ಚಿಗುರು ಇಟ್ಟು ತುದಿಗೆ ಪಿಂಗಾರ ಕಟ್ಟಿದ ನೆಡಿಲ್ಲ್ ಎಂಬ ಜಾತಿಯ ಪೊದೆ ಮರದ ಕೋಲು

ಕುಡುವೆ = ರೈತ

ಕುದಿ/ಕುರಿ ನೀರು = ಓಕುಳಿ ನೀರು

ಕುದ್‌ಂಬುಲು/ಕುಡುಂಬುಲು = ಕವುಜುಗ ಜಾತಿಗೆ ಸೇರಿದ ಸಿಳ್ಳು ಹಾಕುವ ಹಕ್ಕಿ

ಕುಪುಲು = ಕೆಂಬೂತ ಹಕ್ಕಿಯ ಬಣ್ಣದ ಗರಿಗಳಿರುವ ಹಕ್ಕಿ

ಕೆಂಪುಲಜೆ ಮಲೆ = ಪಾಡ್ದನದಲ್ಲಿ ಬರುವ ಮಲೆಯ ಹೆಸರು

ಕೇಪುಲಾಜೆ = ಓಕುಳಿ ನೀರು

ಕೇಲ್ = ಕೇರಿ, ದಲಿತರ ಮನೆಗಳಿರುವ ಸ್ಥಳ.

ಕೇಲ್ತೆಗ್ = ಕೇಳಿಕೆಗೆ

ಕೈ ಕೊತ್ತು ಕಾಯರ್ = ತಾಂಬೂಲ

ಕೊಂಬರ ಗಟ್ಟ = ಸ್ಥಳನಾಮ

ಕೊಡಿಮರ = ಕೊಡಿ/ಚಿಗುರು ತುದಿ ಇರುವ ಕಂಬ. ಕೊಡಿ/ಚಿಗುರು ಇರುವ ಕಂಬ. ಗರಿಗಳಿಂದ ಕೂಡಿದ ಕಂಗು/ಅಡಿಕೆ ಮರವನ್ನು ಉತ್ಸವದ ಭಾಗವಾಗಿ ಭೂಮಿಗೆ ನೆಟ್ಟು ಅದರ ತುದಿಯಲ್ಲಿ ಬಿಳಿ ಪತಾಕೆ ಹಾರಿಸುವುದನ್ನು 'ಕೊಡಿ ಏರಾವುನು' ಎನ್ನುತ್ತಿದ್ದರು.

ಕೊಡೆಲ್ ಮುಡಂಜಲ,
ಐಲ ಕುದಿಂಪಿಲ್, ಮುಟ್ಟ ಬರೆಂಕಿಲ್ = ಸ್ಥಳ ನಾಮಗಳು

ಕೊಪ್ಪ = ಪರಿಶಿಷ್ಟ ಪಂಗಡ ವಾಸಿಸುವ ಕೇರಿ

ಕೋಟೆ = ಬನ, ಕಾಡು

ಗಂಡ ನೂಲತ್ತಾಯ ಪತ್ತಾಯ = ವಿವಾಹವಾಗಲಾರೆವು

ಗಗ್ಗರ = ಭೂತ ಪಾತ್ರಿಗಳು ಕಾಲಿಗೆ ಕಟ್ಟುವ ದೋಣಿಯಾಕಾರದ ಕಡಗ. ಇದರೊಳಗೆ ಇರುವ ವಸ್ತುಗಳು ಗೆಜ್ಜೆಯ ನಾದ ಹೊಮ್ಮಿಸುತ್ತದೆ

ಗಟ್ಟ ಗಟ್ಟ ಇದೆಯೇ ಹದಿನಾರು ಗಟ್ಟವೋ = ಹದಿನಾಲ್ಕು ಗಟ್ಟಗಳ ಪ್ರಸ್ತಾಪ ಶಾಸನಗಳಲ್ಲೂ ಇದೆ.

ಗಾವುದ = (ದೂರವನ್ನು ಹೇಳುವ) ಮಾರು

ಗಾವರಿಸು = ಆವರಿಸು

ಗಿಂಡಿ ಕೋಪ = ಅತಿಯಾದ ಕೋಪ, ತಾಳಲಾಗದ ಕೋಪ

ಗಿಂಡೆ = ನಡು ಸಣ್ಣದಾದ ಹೊರ ತಳದಲ್ಲಿ ಉಂಗುರಾಕಾರ ಇರುವ ಪಾತ್ರೆ

ಗೆಂದ ತೆವಲಾ = ಕೆಂಪು ಗಿಡುಗ

ಗೋಂಪಾರ್ = ಅಡಕೆ ಹಾಳೆಯಿಂದ ರಚಿಸಿದ ಸುಮಾರು ಒಂದಡಿ ಉದ್ದದ ರಚನೆ, ಇದನ್ನು ತಲೆಯ ಮೇಲೆ ಇಟ್ಟರೆ ಮುಖಕ್ಕೆ ಬಿಸಿಲಿನಿಂದ ಮತ್ತು ಮಳೆಯಿಂದ ರಕ್ಷಣೆ ಸಿಗುತ್ತದೆ. ಒದ್ದೆ ವಸ್ತುಗಳ ಭಾರ (ಹಟ್ಟಿಯ ಗಂಜಲದಿಂದ ಕೂಡಿದ ಗೊಬ್ಬರ, ನೀರು ಗದ್ದೆಯಿಂದ ಕಿತ್ತ ನೇಜಿ ಇತ್ಯಾದಿ) ಹೊರುವ ಪುರುಷರು ತಲೆಯ ಮೇಲೆ ಗೋಂಪಾರು ಇಡುತ್ತಾರೆ.

ಚವಲ = ಕೂದಲು

ಚವುಡಿದ ನೀರು = ಓಕುಳಿ ನೀರು

ಚಾಮುಂಡಿ = ಸ್ತ್ರೀ ದೈವ. ದುರ್ಗೆ ಶಿರಾಡಿ ಗಟ್ಟದ ಕರ್ತ ಶಿರಾಡಿ ದೈವ. ಶಿರಾಡಿ ದೈವ ಉಭಯ ಲಿಂಗಿ. ಆದುದರಿಂದ ಆ ಶಕ್ತಿಯನ್ನು ಇಲ್ಲೂ 'ಚಾಮುಂಡಿ' ಎಂದು ಕರೆದಿದ್ದಾರೆ.

ಜಂತ್ರಿತೆ ಮಂತ್ರಿತೆ ಮಂತ್ರಿಪುನಲಾ = ಜಂತ್ರಿಯು ಮಂತ್ರಿಸುವಾಗ

ಜಯವಾಗುವ ನಾಲಗೆ = ಆಡಿದ್ದು ಮಾಡುವ ನಾಲಗೆ

ಜೀಕೆ = ಬೂದಿ

ಜೆಲ್ಲಿ = ತಲೆತುಂಬಾ ಹೂವಿನ ಅಲಂಕಾರ

ಜೋಗಟ್ಟೆ = ಸುಲಭಾಸನ

ಜೋವು = ಮಕ್ಕಳು

ಜ್ಯೋತಿಕೋಲು = ನಾಗಬೆರ್ಮರ ಮಾಧ್ಯಮ (ಉಲ್ಲಾಯ) ಉಪಾಸನೆಯ ಸಂದರ್ಭದಲ್ಲಿ ಎಡದ ಕೈಯಲ್ಲಿ ಹಿಡಿಯುವ ಕಪ್ಪು ಕಬ್ಬು. ಅದರ ತುದಿಗೆ ಹಿಂಗಾರದ ಅಲಂಕಾರ ಇರುತ್ತದೆ.

ತಂಗಡಿ = ಪುರುಷರ ಸಹೋದರಿ ತಂಗಡಿ.

ತಂಬಿಲ ಕಟ್ಟುವುದು = ಎಳನೀರು, ಹರಳು, ಅಕ್ಕಿ, ಒಂದು ತುಂಡು ಬೆಲ್ಲ ಇಟ್ಟು ನಾಗನಿಗೆ ಅರ್ಪಿಸುವುದು

ತನ್ನ ಬೀಡಿಗೆ ತಾನು ದೂರವಾದರು = ಹೊರಗಾದರು/ಮುಟ್ಟಾದರು

ತಮೆರಿ = ಮಹಿಳೆಯರ ಸೋದರ ಸಂಬಂಧಿ (ರಕ್ಷಕ)

ತಮ್ಮಲೆ = ಸೋದರಮಾವ

ತವುಡು ಪುಡೆ = ತವುಡು ಹಾವು. ಕೆಂಪು ಬಣ್ಣದ ವಿಷ ರಹಿತ ಪುಟ್ಟ ಹಾವು.

ತಾತಾಯಿ ಮುಂಚಿ = ಸೀಮಂತ ಮುಗಿದು ಬಸುರಿ ತವರಿಗೆ ಹೋಗುವಾಗ ಕೊಡುವ ಬಾಣಂತಿ ಪಥ್ಯ

ತಿಂಗಳಾಗುತ್ತಾ ಸ್ನಾನ ಮಾಡುತ್ತಾರೆ = ಮುಟ್ಟಾಗುತ್ತಾರೆ

ತೆರಿಯ = ಬಟ್ಟೆಯ ಅಥವಾ ಬೈಹುಲ್ಲಿನ ಸಿಂಬಿ.

ತೆಲಿಯೆರ್ = ತೆರಳಿದರು

ತುಡಿ = ಮೈಮೇಲಿನ ಸುಟ್ಟ ಗಾಯ (ತುಳು ನಿಘಂಟು)

ದೈಯ್ಯಾರು = ಒಡತಿ

ದೋಸ ಪೊರ್ಗುಂಡು = ದೋಷ ತಟ್ಟುತ್ತದೆ

ನರಕು = ನೋವಿನಿಂದ ಮುಲುಕು

ನರಯನ = ೧ ಸೂರ್ಯ ೨ ಸರ್ಪ

ನಾಗರ ಜೋವು = ನಾಗರ ಮಗು. ಜೋವು ಎನ್ನುವುದು ಕನ್ಯೆಯೂ ಆಗುತ್ತದೆ. ಜೋವು

ಏಕವಚನ, ಜೋವುಲು/ಜೋಕುಲು ಬಹುವಚನ

ನೀರ್ ಕಂದಡಿ = ನೀರಿನೊಳಗೆ ಇರುವ ಕನ್ನಡಿ ಹಾವು

ನೀರ್ ನಿಲೆತ್‌ಂಡ್ = ಗರ್ಭ ಕಟ್ಟಿತು.

ನೀರ್ ನಿಲ್ಲುವುದಿಲ್ಲ = ಗರ್ಭ ಕಟ್ಟುವುದಿಲ್ಲ.

ನೂಲ ಪೊರ್ಲುಗು ತೆತ್ತಿ ಉಡೆದ್‌ಂಡ್ = ಒಂದೇ ಚಂದಲ್ಲಿ ಮೊಟ್ಟೆ ಒಡೆಯು

ನೆ/ನಿರೆತ್‌ಂಡ್ = ಕೋಳಿಯು ಫಲವತಿಯಾಗಲು, ಮೊಟ್ಟೆ ಇಡಲು ಸಿದ್ಧ ಆದಾಗ ಒಂದು ಸ್ವರ ಹೊರಡಿಸುತ್ತದೆ. ಆ ಸ್ವರ ಕೇಳಿದಾಗ ಕೋಳಿ ಕರೆಯು/ನೆರೆಯು ಎನ್ನುತ್ತಾರೆ.

ನೆಕ್ಕರೆ = ೧ ಒಂದು ಭೂತ. ೨ ಭೂತ ನರ್ತಕರ ಒಂದು ಪಂಗಡ

ನೆಗಪುಲ್ಲ = ನೀರಿನಿಂದ ಮೇಲೆದ್ದ

ನೆಗೆಪುಲ್ಲ ಕಲ್ಲ್ = ತೇಲುವ ಕಲ್ಲು

ನೇಮ = ನಿಯಮ, ತುಳುನಾಡಿನಲ್ಲಿ ರಾಜನ್, ಅರಸು ಶಕ್ತಿ ದೈವಗಳಿಗೆ ಜರಗುವ ನರ್ತನ ಸೇವೆ, ದ್ರಾವಿಡ/ನೆಲದ ಸಂಪ್ರದಾಯದ ಉಪಾಸನೆ.

ಪಂಚರಂಬಿಲ ಕಟ್ಟಿಯೆರ್ = ಐದು ತಂಬಿಲ ಕಟ್ಟಿದರು(?)

ಪಂಚಲ = ೧ ಪಂಚ ಅಲವು, ಪಂಚಲೋಹ ೨ ಪಂಚಲೋಹದ ಕತ್ತಿ,

ಪಕ್ಕಿ ಕಿಲೆಂಕಿ = ಹಕ್ಕಿ ಕಿರುಚಿ

ಪಕ್ಕಿ ಕೀಲ್ನಗ = ಪಕ್ಷಿಗಳು ಚೀರುವಾಗ

ಪಜಿತ್ತ ಪರಕೆಡ್ ಬಯಿತ್ತ ಕೋಲು = ೧ ಹಸಿ ಹರಕೆಗೆ (ಬೆಪ್ಪು ಭಸ್ಮ)ಬೈಹುಲ್ಲಿನ ಬಡಿಗೆ(ಇದು ಅನುಮಾನಿತ ಅರ್ಥ)

ಪಡಿ ಬಾವನೆ = ಪಡಿ ಗೌರವ(ಒಂದು ಹೊತ್ತಿನ ಅಥವಾ ಒಂದು ದಿನದ ಊಟಕ್ಕಾಗುವಷ್ಟು ಅಕ್ಕಿ ಮತ್ತು ಇತರೆ ವಸ್ತು)

ಪದೊಳಿ = ಒಳಕೋಣೆ ಅಥವಾ ಚಾವಡಿಯ ಅಂಚಿನ ಮರದ ಹಲಗೆ ಪಟ್ಟಿ

ಪದ್ದೆಯಿ = ಒಡವೆ.

ಪನಿಯರ್ದನ	= ಶುದ್ಧ ಮಾಡಲು
ಪನೆ ತತ್ರ	= ಪನೆ ಮರದ ಎಲೆಯಿಂದ ಸಿದ್ಧಪಡಿಸಿದ ಸಾಂಪ್ರದಾಯಿಕ ಕೊಡೆ
ಪಯ್ಯೆರ್	= ಮಕ್ಕಳು
ಪರಾಡಿ	= ಪರ ಅಡಿ, ಹಳೆಯ ಅಡಿ.
ಪರಿವು	= ಹರಿವು, ದಾರಿ
ಪರ್ಕೆ	= ೧ ಕೆಟ್ಟದ್ದು, ಹಾಳು ೨ ಮೂತ್ರ
ಪರ್ಯದನ	= ಶುದ್ಧ
ಪಸ್ರಾನಿ	= ದೈವ ಭೂತಗಳಿಗೆ ಅರ್ಪಿಸುವ ಆಹಾರ, ನೈವೇದ್ಯ
ಪಾಡ್	= ಹಾಕು
ಪಾಪು	= ಕಾಲುವೆ, ತೋಡು ದಾಟಲು ಹಾಕುವ ಮರದ, ಅಥವಾ ಕಲ್ಲಿನ ಸಾಧನ
ಪಾಪೆ	= ಪ್ರತಿರೂಪ, ಬೊಂಬೆ, ರೂಪ
ಪಾಲೆ ಮರ	= ಹಾಲುವಾನ ಮರ.
ಪಾಲೆ	= ಅಡಕೆಯ ಮರದ ಗರಿಯಲ್ಲಿ ಬರುವ ಹಾಳೆ
ಪಾಲೆಗ್ ನಿರೆತ್ತೆರ್	= ಹಾಳೆಗಾದರು. ಎಳೆ ಕೂಸನ್ನು ಅಡಿಕೆ ಹಾಳೆಯಲ್ಲಿ ಮಲಗಿಸು.
ಪಾವೊರಿ	= ಇಂಬಳ
ಪಾಸಾಡಿ	= ೧ ಮೂಲದಾಳು, ೨ ಜೊತೆಗೆ ಹೋಗುವ ವ್ಯಕ್ತಿ
ಪಿಂಜನಿ	= ಚೀನೀ ಕಪ್
ಪಿಲೆ	= ಸುಟ್ಟ ಶವದ ಬೂದಿ, ಎಲುಬು ಇತ್ಯಾದಿ
ಪುಕುಳಿ ಸರ	= ಕುಂಡೆಯಡಿ ನೀರು ಬರುವ ಒಂದು ಕಾಯಿಲೆ.
ಪುಗರು	= ಹೊಗಳು
ಪುದವರನ	= ಪುದ ಬಣ್ಣದ.(ಪುದ ಒಂದು ಸುಂದರ ವಾದ ಪಕ್ಷಿ)
ಪುರ್ಪ	= ಜಗಿಯಬೇಕೆಂಬ ಚಪಲ (?)
ಪುಲ ಕತ್ತಿ ಪುದರ್	= ಹುಟ್ಟು ಹೆಸರು

ಪುಲ ಪಾರಾವುನು	=	ಹೆತ್ತ ಸೂತಕ ಕಳೆಯುವುದು
ಪುಲ	=	ಹೆತ್ತ ಕಳ (ತುಳು ನಿಘಂಟು) (ಆದರೆ ನನ್ನ ಪಾಡ್ದನಕಾರರು ಕೊಟ್ಟ ವಿವರಣೆಯ ಪ್ರಕಾರ ನಾನು ಅನುವಾದಿಸಿದ್ದೇನೆ)
ಪೂಕರೆ ಕಂಬುಲ	=	ಪೂಕರೆ ಹಾಕುವ ಕಂಬುಲ
ಪೂಕರೆನ ಕಂಬುಲ ಸೀಮೆ	=	ಅರಸ್ತಾನ ಸೂಚಿಸುವ ಕಂಬುಲ ಗದ್ದೆಗೆ ಹಾಕುವ ಪೂಕರೆ.
ಪೂಲು	=	ಹೋಲು, ಅಡಿಕೆ. ಹೋಲು
ಪೆದ್ದ್	=	ಹೆತ್ತು (ದ>ತ–ಹ>ಪ)
ಪೊಣ್ಣು ಜೋವು	=	ಹೆಂಗುಸು
ಪೊರಿ	=	೧ ಚೆನ್ನೆಯಾಟದ ಸೋಲು ೨ ಅವಲಕ್ಕಿ ಅರಳು ಬೆಲ್ಲ ಹಾಕಿ ಬೆರೆಸಿದ ತಿನಿಸು
ಪೊಲ್ಸು	=	ಲಕ್ಷಣ
ಬಂದ್ ಬಂದೊಳಿಗೆ	=	ಅಲ್ಲಾಡದಂತೆ ಮಾಡು, ಮೊಹರು ಹಾಕು
ಬಗ ಬಗ ಬೆವರು	=	ಆತಂಕದ ವಿಪರೀತ ಬೆವರು
ಬತ್ತಡ	=	ಬಸದಿ
ಬಯಿಪನೆ	=	ಹಟ್ಟಿಯಲ್ಲಿ ಹಸುಗಳು ನಿಂತು ಹುಲ್ಲು ತಿನ್ನಲು ಇರುವ ಕಟ್ಟೆ.
ಬರ	=	ವಿಚ್ಛೇದನ, ಬಿಡುಗಡೆ
ಬರಿಂಕ	=	ಸಣ್ಣ ಜಾತಿಯ ಜಿಂಕೆ
ಬರೆಂಕೆ	=	ಬಾಳಿಕೆ ಮನೆ
ಬರ್ಕೆ	=	ಗಟ್ಟಿ ತೊಳೆ ಇರುವ ಹಲಸು
ಬಲ	=	ಅಡುಗೆ ಮಾಡಿಟ್ಟ ಪಾತ್ರೆಗಳನ್ನು ಅಟ್ಟದಲ್ಲಿ ತೂಗುಹಾಕಲು ಮೂರು ಎಳೆ ಹಗ್ಗದಿಂದ ರಚಿಸಿರುವ ತೂಗು ಹಗ್ಗ
ಬಲಿ	=	೧ ಅರ್ಪಣೆ ೨ ಪ್ರದಕ್ಷಿಣೆ, ೩ ಸಂಚಾರ ಹೋಗುವುದು
ಬಲಿಪ	=	ಹೆಬ್ಬುಲಿ
ಬಲ್ಯಾಯ	=	ಅಪೇಕ್ಷಿತರ ಮನೆಗೆ ಹೋಗಿ ಜ್ಯೋತಿಷ ಹೇಳುವ ವರ್ಗ. ಇವರು ಬ್ರಾಹ್ಮಣರಲ್ಲ ಮಾಂಸಾಹಾರಿಗಳು. ಉತ್ತರ ಭಾರತದ

ಬುಲೆಕರಿ	=	ಒಂದು ಜಾತಿಯ ಹಾವು
ಬೆಂದ್ರ್	=	ಸ್ನಾನಕ್ಕಾಗಿ ಅಂಡೆಯಲ್ಲಿ ಕಾಯಿಸಿದ ನೀರು.
ಬೆಡಿ	=	೧ ಸ್ಥಳೀಯ ಸಿಡಿಮದ್ದು ೨ ಕೋವಿ
ಬೆಪ್ಪು ತೆಗೆ	=	ಹದವಾದ ಬಿಸಿನೀರು ಸ್ನಾನ
ಬೆಪ್ಪು	=	ಅಲ್ಪ ಬಿಸಿ
ಬೇಷ	=	ವೃಷಭ ಮಾಸ
ಬೋನ	=	ಊಟ, ಆಹಾರ
ಬಟಿ(ಬರಿ)	=	ವಂಶ. ತುಳುವಿನಲ್ಲಿ ಬಜಿ ಎಂದು ಪ್ರಯೋಗದಲ್ಲಿದೆ. ಹೀಗಾಗಿ 'ಬಜಿಗಟ್ಟ' ಅಂದರೆ ವಂಶ ಎಂದು ನಾನು ಅರ್ಥೈಸಿದೆ. ಬರಿ ಎಂದರೆ ಪಕ್ಕದ್ದು ನೆರೆಯದ್ದು ಆಗುತ್ತದೆಯಾದರೂ ಇಲ್ಲಿ ಆ ಅರ್ಥ ಸರಿ ಹೊಂದುವುದಿಲ್ಲ
ಭಂಡಾರಿ	=	ಕ್ಷೌರಿಕ
ಮಂಗಿ	=	ಮಂಗಳ, ಸಂಸ್ಕಾರ–ಮದುವೆ
ಮಂಜ ಕೊಟ್ಯ	=	ದೈವ ಗುಡಿ
ಮಜಲು	=	ಬೆಟ್ಟು ಬಯಲು ಗದ್ದೆಯ ನಡುವೆ ಇರುವ ಗದ್ದೆ
ಮಡಿವೊಡಾಂಡ	=	ಮಡಿಸುವ ಮೊದಲು ಮುಗಿಯಬೇಕಾದರೆ
ಮದುಮಗ	=	ಗಂಡ
ಮದುವೆ ಮಯಿಸ್ರ	=	ಮದುವೆಯ ಕೂಡು ನುಡಿ, ಮದುವೆ ಸೌಭಾಗ್ಯ
ಮಧು	=	ಮದಿಪು, ನುಡಿ
ಮನಿಪನ	=	ದೈವ
ಮನಿಪನಾ	=	ಮನಿನಾಗ
ಮಯನ	=	ಮರದಿಂದ, ಹಣ್ಣಿನಿಂದ ಒಸರುವ ಅಂಟು ದ್ರವ್ಯ
ಮಾಡ	=	ಅರಸು ದೈವಗಳ ಆಲಯ ಉದಾ: ಧರ್ಮಸ್ಥಳದ ಮಂಜುನಾಥ ದೇವಸ್ಥಾನ ಮಾಡ.

ಮಾನಿ ಮನಿವುಲು	=	ಮನುಷ್ಯರು ಮಾತನಾಡುವಲ್ಲಿ
ಮಾನೆದಿ	=	೧ ಜೀತದ ಹೆಣ್ಣು ೨ ಒಂದು ಪರಿಶಿಷ್ಟ ವರ್ಗದ ಹೆಣ್ಣು
ಮಾನೆರ್	=	ಜೀತದಾಳು, ಮೂಲದಾಳು, ದಲಿತವರ್ಗ
ಮಾನ್ಯ	=	೧ ಜೀತದಾಳು ೨ ಒಂದು ಪರಿಶಿಷ್ಟ ವರ್ಗ
ಮಾಯೆ	=	ಅಲೌಕಿಕ
ಮಾವೊರಿ ಗಂಗೆ	=	ಪಾಡ್ದನದಲ್ಲಿ ಬರುವ ನದಿ ಮಾಸಾಡಿ ಮೇಲಾಯಿ ಪುವದರನದ
ಉಲ್ಲಾಯ	=	ಮಾಸಾದಿಗರಲ್ಲಿ ಮೇಲಾದ
ಮಾಸಾಡಿ	=	ಮಾಸಾದಿಗ
ಮಾಸಾದಿಗ	=	ಬಂಟರ ಒಂದು ವೃತ್ತಿನಾಮ, ಕುದುರೆ ದಳದ ನಾಯಕ
ಮುಂಗುಲಿ ಪೊಂಜೊವು	=	ಮುಂಗುಲಿ ವಂಶದ ಹೆಂಗುಸು
ಮುಂಗುಲಿ	=	ಮುಂಗುಸಿ
ಮುಂಡು	=	೧ ಕಳ್ಳು ತುಂಬಿಸಿಡುವ ಪಾತ್ರೆ ೨ ಹಸುವಿನ ಗಂಡು ಕರು
ಮುಗೆಲಿ ಪಾಂಬು	=	ಹಾವಿನ ಭಿನ್ನ ವರ್ಗ
ಮುಚ್ಚಿರೆ	=	ಒಂದು ಜಾತಿಯ ಮರ
ಮುಡರೆ	=	ಮೂಡು ಕರೆ, ಆಡಳಿತದ ಘಟಕ
ಮುಡಿ	=	೧ ಹೆಡೆ ೨ ಅಕ್ಕಿ ಮುಡಿ ೩ ಅಣಿ ೪ ಹೆಡೆಗಳ ಅಲಂಕರಣದ ಪ್ರಭಾವಳಿ
ಮುತ್ತಿತು/ಮುತ್ತು	=	ನಾಶವಾಗು
ಮುದ್ದ ನರಯನೆ	=	ಎಳೆ ನಾಗರ, ಸರ್ಪ
ಮುನ್ನಿ	=	೧ ಪಂಚೆಯ ತುದಿ ೨ ಬಾಲ
ಮುಲಗಟ್ಟ	=	ಪಾಡ್ದನದಲ್ಲಿ ಬರುವ ಗಟ್ಟ
ಮೂಲಕ್ಕೆ ಕೋಳಿ ಬಿಡು	=	ಮೂಲತಾನದ ನಾಗ ಬೆರ್ಮೆ ಮತ್ತು ಪರಿವಾರ ದೈವಗಳಿಗೆ ಕೋಳಿ ಬಿಡುವುದು. ಹೀಗೆ ಬಿಡುವ ಕೋಳಿಗಳನ್ನು ಸರ್ಪಗಳು ನುಂಗುತ್ತವೆ.
ಮೂಲದ ಮಾನೆ	=	ಜೀತದಾಳು

ಮೈರೆ	=	ಮಯೂರಿ
ಮೊಡಂಕ್	=	ವ್ಯಂಗ
ರಾಜ ಮಾಡ	=	ಸೀಮೆ ಅಥವಾ ಮಾಗಣೆಯ ಅರಸು ದೈವಗಳ ಉಯ್ಯಾಲೆ ಇರುವ ಕಟ್ಟಡ
ರಾಜನ ಅವಲಕ್ಕಿ	=	ರಾಜ ಕಯಮೆ ಎನ್ನುವ ಜಾತಿಯ ಭತ್ತದ ಅವಲಕ್ಕಿ
ರೆಂಜತ್ತಿರೆ ಮಾಡೊ	=	೧ ಬಕುಳದ ಹೂವಿನ ಮಾಡ ೨ ನಾಗ ಬ್ರಹ್ಮರ ಕ್ಷೇತ್ರ.
ಲೆಪ್ಪಾಯೆರ್	=	ಕರೆಸಿದರು
ವಯರದ ಹೆಣ್ಣು	=	೧ ಓಡಾಡುವ ಹೆಣ್ಣು
ವರ್ತೆ	=	ರೂಢಿಯಲ್ಲಿ ಪಂಜುರ್ಲಿಯ ಜೊತೆ ಇರುವ ಒಂದು ಹೆಣ್ಣು ದೈವ.
ವಾಗೊ	=	ಭಾಗ್ಯ
ವಾವೊರಿ	=	ಇಂಬಳ, ಕರಿಯ ಸಂಕಪಾಲೆ
ಸಂಕಲಪ್ಪ	=	ಸಂಕಪಾಲೆ ಅಪ್ಪ (ಸಂಕಪಾಲೆ ಎನ್ನುವುದು ಉಲ್ಲಾಯನ ಸರ್ಪ ರೂಪ)
ಸಂಚಲ	=	ಸಂದೇಹ
ಸಂತಾನದ ಉತ್ತರ ಫಲ	=	ಸಂತಾನ ಮುಂದುವರಿಯುವ ಫಲ, ಹೆಣ್ಣು ಮಗು
ಸಗ್‌ಮೆ	=	ಪರಿಚಾರಿಕೆ
ಸತ್ತಿಗೆ	=	ಕೊಡೆ
ಸಮ್ಮಲೆ	=	ಸೋದರ ಮಾವ
ಸಾರಾಳ	=	ಸಾವಿರ ಆಳ
ಸಾರಿ	=	ಕವಡೆ
ಸಾರೊನು	=	ನೋಡಲು
ಸಾರ್ನೆ	=	ಅರ್ಪಣೆ
ಸಿರಿ ಗಿಂಡೆ	=	ಕೊಂಬಿನ ಗಿಂಡೆ, ಸರ್ಪ ಶಿಲ್ಪ ಇರುವ ಗಿಂಡೆ
ಸಿರಿಯು ಕನಿಲಡ್	=	ಸಿರಿ ಬೆಳೆಯಲಿ
ಸುತ್ಯ	=	ದೇವರಿಡುವುದು. ಒಂದು ಬಾಳೆಯೆಲೆಯಲ್ಲಿ ಒಂದು ಸೇರಿಕ್ಕಿ, ೨೫ ವೀಳ್ಯದೆಲೆ, ಒಂದು

ಇಡಿ ಹಸಿ ಅಡಿಕೆ, ಒಂದು ಜುಟ್ಟು ಇರುವ ತೆಂಗಿನಕಾಯಿ, ಒಂದು ಕಾಲು ಪಣವು ಇಟ್ಟು ದೇವರನ್ನು ಉಂಡು ಮಾಡುವ ಜನಪದ ಪದ್ಧತಿ

ಸೂಡದುಲಿ = ತೋಡು ಬದಿ (ನೀರಿನ ಬಳಿ)

ಸೋಮ ವಂಶ = ಚಂದ್ರ ವಂಶ

ಹನೆ (ಪನೆ) ಹಾಕಿದ ಬಾವಿ = ೧ ಏತದಿಂದ ನೀರು ತೆಗೆಯುವ ಬಾವಿ
೨ ಪರಂಪರೆಯ ಮನೆಗಳ ಬಾವಿಗೆ ಬಿಂದಿಗೆ ಇಳಿಸುತ್ತಿರಲಿಲ್ಲ. ಮರದ ಮರಿಗೆ ಬಾವಿಯ ಏತದಲ್ಲಿ ಸದಾ ಇರುತ್ತಿತ್ತು. ಏತದಲ್ಲಿ ಕುಡಿಯಲು ನೀರು ತೆಗೆಯುತ್ತಿದ್ದರು. ಈಗಲೂ ಕೆಲವು ದೈವ ನೆಲೆಯ ಪರಂಪರೆಯ ಬಾವಿಗಳಲ್ಲಿ ಇಂತಹ ಏತ ಬಾವಿಗಳಿವೆ.

ಹೆಣ್ಣು ಮಾತನಾಡಲು = ಹುಡುಗಿ ಗೊತ್ತುಮಾಡಲು

ಹೇಳಿದ್ದು ಹೊರಳುವ ಮೊದಲೇ = ಹೇಳಿದ ನಾಲಗೆ ಮರಳಿ ಮಡಚುವ ಮೊದಲು

***

ನಮ್ಮ ಪ್ರಕಟಣೆಗಳು

ಕ್ರಸಂ.	ಕೃತಿಯ ಹೆಸರು ಲೇಖಕ/ ಸಂಪಾದಕರ ಹೆಸರು	ಬೆಲೆ
೧.	ಇಂದಿನ ಕನಸು ನಾಳಿನ ನನಸು *ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ*	೧೦೦.೦೦
೨.	ಜಾನಪದ ವರ್ಷ–೨೦೧೧ *ಸಂ : ಡಾ. ಎಸ್.ಪಿ. ಪದ್ಮಪ್ರಸಾದ್*	೧೦೦.೦೦
೩.	ಜಾನಪದ ವಸ್ತುಕೋಶ *ಸಂ : ಪ್ರೊ. ಸ.ಚಿ. ರಮೇಶ*	೧೪೦.೦೦
೪.	ಕೇರಳದ ಜನಪದವೀರ ತಚ್ಚೋಳಿ ಒದೇನನ್ *ಡಾ. ಕೆ. ಕಮಲಾಕ್ಷ*	೧೪೦.೦೦
೫.	ಕಾಡುಗೊಲ್ಲರ ಕೋಲಾಟದ ಪದಗಳು *ಸಂ : ಮೋಹನಕುಮಾರ ಎನ್.*	೮೦.೦೦
೬.	ತುಳುನಾಡಿನ ಜನಪದ ಕತೆಗಳು *ಸಂ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್*	೧೦೦.೦೦
೭	ಕರ್ನಾಟಕ ಸಂಶೋಧನ ಜಾನಪದ *ಸಂ : ಪ್ರೊ.ಎ.ವಿ. ನಾವಡ*	೯೫೦.೦೦
೮.	ಮಲೆನಾಡ ನುಡಿಕೋಶ *ಸಂ : ವೇಣಾಕ್ಷಿ ಎಸ್.ಡಿ.*	೧೫೦.೦೦
೯.	ಬುರ್ರಕಥಾ ಜಯಮ್ಮ *ಡಾ. ಕೆ. ಪ್ರೇಮಕುಮಾರ*	೪೦.೦೦
೧೦.	ಗೊಂಬೇಗೌಡರ ರಾಮನಗೌಡರು *ಡಾ. ಚಂದ್ರಪ್ಪ ಸೊಬಟಿ*	೮೦.೦೦
೧೧.	ನಮ್ಮ ಪರಿಸರದ ಲಂಬಾಣಿಗರು *ಡಾ. ಮಲ್ಲಿಕಾರ್ಜುನ ಕುಂಬಾರ*	೬೦.೦೦
೧೨.	ಕಾಡುಗೊಲ್ಲರ ಬೆಡಗಿನ ಪದಗಳು *ಸಂ : ಶ್ವೇತಾ ಎಂ.ಬಿ., ಶ್ರೀ ಮೋಹನಕುಮಾರ್ ಎನ್.*	೬೦.೦೦
೧೩.	ಹುಮಾಯೂನ್ ಹರಲಾಪುರ *ಡಾ. ವೃಷಭಕುಮಾರ*	೬೦.೦೦
೧೪.	ಅಪ್ಪಗೆರೆ ತಿಮ್ಮರಾಜು *ಶ್ವೇತಾ ಎಂ.ಬಿ.*	೮೦.೦೦
೧೫.	ನೆಲದ ನೆನಪು *ಡಾ. ಜಯಪ್ರಕಾಶ್ ಶೆಟ್ಟಿ ಹೆಚ್, ಡಾ. ಚಿಕ್ಕಮಗಳೂರು ಗಣೇಶ*	೨೦೦.೦೦

೧೬. ನಮ್ಮ ಗಿಡಮರಬಳ್ಳಿಗಳು
ಶಾಂತಿ ನಾಯಕ ೪೦.೦೦

೧೭. ದೇಶೀಯ ಕೃಷಿ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳು
ಸಂ : ಪ್ರೊ. ಪ್ರಕಾಶ ಕಮ್ಮರಡಿ ೧೦೦.೦೦

೧೮. ಜಾನಪದ ವರ್ಷ-೨೦೧೨
ಸಂ : ಡಾ. ಕೆ.ವಿ. ಮುದ್ದವೀರಪ್ಪ ೧೨೦.೦೦

೧೯. ದಕ್ಷಿಣ ಭಾರತೀಯ ದೇಶೀ ಕೃಷಿವಿಜ್ಞಾನ ಕೋಶ (ಎರಡು ಸಂಪುಟಗಳು ಸೇರಿ)
ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ ೧೦೦೦.೦೦
ಕಾ.ನಿ.ಸಂ : ಪ್ರೊ. ಆರ್ಡಿಯಸ್ ಸುಂದರಂ,
ಸಂ : ಪ್ರೊ. ಸ.ಚಿ. ರಮೇಶ

೨೦. ವಿಸ್ತೃತ ಜಾನಪದ ಗ್ರಂಥಸೂಚಿ
ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ ೭೦೦.೦೦
ಸಂ : ಶ್ರೀ ಕ್ಯಾತನಹಳ್ಳಿ ರಾಮಣ್ಣ, ಶ್ರೀ ಟಿ.ಎಸ್. ರಾಜಪ್ಪ

೨೧. ಮೂಲತಾನದ ನಾಗಬ್ರಹ್ಮ ಮತ್ತು ಪರಿವಾರ ದೈವಗಳ ಪಾಡ್ದನ
ಸಂ : ಡಾ. ಇಂದಿರಾ ಹೆಗ್ಗಡೆ ೧೫೦.೦೦

೨೨. ಉತ್ತರ ಕನ್ನಡ ಕರಾವಳಿಯ ಜನಪದ ಕತೆಗಳು
ಸಂ : ಶಾಂತಿ ನಾಯಕ ೧೨೦.೦೦

೨೩. **Manteswamy Epic Tradition of South Karnataka**
Prof. Ambalike Hiriyanna ೨೮೦.೦೦

೨೪. **Dakshinatya Abhinaya Siddhanta**
Dr. Guru Rao Bapat ೧೦೦.೦೦

೨೫. ನಾಡವರ ಜಾನಪದ ತವನಿಧಿ
: ಪ್ರೊ. ಎನ್.ಆರ್. ನಾಯಕ ೨೬೦.೦೦

೨೬. **The Bayalatas of North Karnataka**
Dr. Basavaraja Malashetty
Translated by: Dr. Parvathi G. Aithal ೧೩೦.೦೦

೨೭. ತಾತ್ಯಾ-ಬಾಪು ಅವರ ಲಾವಣಿಗಳು
ಸಂ : ಡಾ. ಹರಿಲಾಲ ಪವಾರ ೮೦.೦೦

೨೮. ಪೂಜಾರಿ ಶಿವಣ್ಣ ಹೇಳಿದ ಜುಂಜಪ್ಪ ಮಹಾಕಾವ್ಯ
ಸಂ : ಡಾ. ತೀ.ನಂ. ಶಂಕರನಾರಾಯಣ, ಡಾ. ಎಂ.ಎನ್. ವೆಂಕಟೇಶ್ ೧೭೦.೦೦

೨೯. ಬೆಳಗಲ್ಲು ವೀರಣ್ಣ
ಡಾ. ಎಂ.ಎನ್. ವೆಂಕಟೇಶ್

೩೦. ಮಂಜಮ್ಮ ಜೋಗತಿ
ಡಾ. ಚಂದ್ರಪ್ಪ ಸೊಬಟಿ

೩೧. ಡಾ. ಪಿ.ಕೆ. ರಾಜಶೇಖರ
ಸಂಗಮೇಶ ಎಸ್. ಗಣಿ ೧೨೦.೦೦

೩೨. ಜಾನಪದ ಜಗಲಿ (ಸಂಶೋಧನಾ ಅರ್ಧವಾರ್ಷಿಕ ಪತ್ರಿಕೆ)
ಸಂಚಿಕೆ-೧, ೨, ೩ & ೪
ಬಿಡಿ ಪ್ರತಿಗೆ ೫೦.೦೦

ಜಾನಪದದ ಸಮೃದ್ಧತೆಗೆ ಕನ್ನಡ ನಾಡು ಹೆಸರುವಾಸಿ. ನಾಡಿನ ಜನಪದರ ಬದುಕು, ಭಾಷೆ, ಆಚಾರ-ವಿಚಾರ, ಉಡುಗೆ-ತೊಡುಗೆಗಳು ತುಂಬಾ ಆಕರ್ಷಕ ಜೊತೆಗೆ ಸಂಶೋಧನಾಯೋಗ್ಯವಾದ ಸಂಗತಿಗಳಾಗಿವೆ. ಒಂದು ನಿರ್ದಿಷ್ಟ ಪ್ರದೇಶವಾಸಿಗಳ ಭಾಷೆಯು ಕೇವಲ ಮೌಖಿಕ ಸಾಹಿತ್ಯವನ್ನು ಮಾತ್ರ ಅಡಕವಾಗಿರಿಸಿಕೊಂಡಿರುವುದಿಲ್ಲ. ಬದಲಾಗಿ ಅನೇಕ ಸಾಂಸ್ಕೃತಿಕ ಸಂಗತಿಗಳನ್ನು ಗರ್ಭೀಕರಿಸಿಕೊಂಢಿರುತ್ತದೆ. ಇಂತಹ ವಿಚಾರಗಳನ್ನು ಶೋಧಿಸಲು ಅಂತರ್‌ಶಿಸ್ತೀಯ ನೆಲೆಯಲ್ಲಿ ಸಂಶೋಧನೆ ಆಗಬೇಕಿರುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಕರಾವಳಿ ಭಾಗದ ತುಳು ಭಾಷೆ ಮತ್ತು ಪಾಡ್ದನ ಸಾಹಿತ್ಯ ಸಂಶೋಧನೆಯ ಮುಖ್ಯ ಆಕರಗಳಾಗಿವೆ. ತುಳುವರ ನೆಲದ ಸಂಸ್ಕೃತಿಯ ವಿಶಿಷ್ಟ ಉಪಾಸನೆ ಎಂದರೆ ಭೂತಾರಾಧನೆ. ರೂಢಿಯಲ್ಲಿರುವ ಈ ಉಪಾಸನಾ ಪದ್ಧತಿಯ ಜೊತೆಗೆ ಹುಟ್ಟು ಪಡೆದುಕೊಂಡಿರುವುದು ಮೌಖಿಕ ಕಥನಕಾವ್ಯ. ಮೌಖಿಕ ಸಾಹಿತ್ಯದ ಶ್ರೀಮಂತಿಕೆಯ ಗಣಿಗಳಂತಿರುವ ಪಾಡ್ದನಗಳನ್ನು ಸಂಗ್ರಹಿಸುವುದು ಮುಖ್ಯವೇ. ಜೊತೆಗೆ ಅವುಗಳ ಬಹುಮುಖೀ ವಿಶ್ಲೇಷಣೆಯು ತುಳು ಸಮುದಾಯದ ಬದುಕಿನ ಬಹುಸ್ತರದ ಸಾಂಸ್ಕೃತಿಕ ಸಂಗತಿಗಳ ಮೇಲೆ ಬೆಳಕು ಚೆಲ್ಲಲು ಸಹಾಯಕವಾಗಬಲ್ಲದು. ಇಂತಹ ಗ್ರಹಿಕೆಯಿಂದಲೇ ಪ್ರಸ್ತುತ 'ಮೂಲತಾನ ನಾಗಬ್ರಹ್ಮ ಮತ್ತು ಪರಿವಾರ ದೈವಗಳ ಪಾಡ್ದನ' ಕೃತಿ ರೂಪು ತಾಳಿದೆ. ಅಮೂಲ್ಯವಾದ ತುಳು ಪಾಡ್ದನಗಳು ಇಲ್ಲಿ ಸಂಗ್ರಹಗೊಂಡಿದ್ದು, ತುಳು ಸಂಸ್ಕೃತಿಯನ್ನು ಅರಿಯುವಲ್ಲಿ ಈ ಕೃತಿ ಆಕರವಾಗಬಲ್ಲದು. ಇಂತಹ ಕೃತಿಯನ್ನು ಸಿದ್ಧಪಡಿಸಿಕೊಟ್ಟಿರುವ ಡಾ. ಇಂದಿರಾ ಹೆಗ್ಗಡೆ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.



ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ISBN 978-93-83149-19-3

9 789383 149193

₹ : ೧೫೦/-

Printed at : Raja Printers, Bangalore-560 027, Ph.: 22234066